

epaper - karnatakamalla.com

ಕರ್ನಾಟಕ ಮಲ್ಲ

TEL: 24715208, Fax:24715237

ಮುಂಬಯಿಯಿಂದ ಪ್ರಕಟಿತ ಏಕೈಕ ಸಮಗ್ರ ಕನ್ನಡ ದೈನಿಕ

KARNATAKA MALLA, MUMBAI

ಸಂಪುಟ : 35 ಸಂಚಿಕೆ : 148 ಮಂಗಳವಾರ 30-06-2026 ಬೆಲೆ : ₹ 6 ಪುಟಗಳು - 10

ಸಂಪಾದಕ: ಚಂದ್ರಶೇಖರ ಪಾಲೆತ್ತಾಡಿ



ಸಹಾಯ ಎನ್ನುವುದು ಎಂತಹ ಘಟನೆ ಎಂದರೆ ಮಾಡಿದರೆ ಜನರು ಮರೆತುಬಿಡುತ್ತಾರೆ. ಮಾಡದಿದ್ದರೆ ನೆನಪಿನಲ್ಲಿ ಟ್ಟುಕೊಳ್ಳುತ್ತಾರೆ.

3 ಅಪರಾಧಿಗೆ 60 ದಿನದಲ್ಲಿ ತ್ರಿವಳಿ ಮರಣದಂಡನೆ ಮೂಲಕ ನ್ಯಾಯಾಲಯದಿಂದ 'ಹೊಸ ಮಾನದಂಡ' ; ಫಡ್ನವೀಸ್

ಅಫ್ಘಾನ್ ಗಡಿ ಕಾರ್ಯಾಚರಣೆಯಲ್ಲಿ 29 ಉಗ್ರರು ಸಾವು: ಪಾಕಿಸ್ತಾನ 5

ಮನಸ್ಸನ್ನು ಯಾವಾಗಲೂ ಮುಗ್ಧವಾಗಿರಿಸುವ ಹಂಬಲ ಬೇಡ ಮನಸ್ಸಿನ ಮುಗ್ಧತೆ ಮುಂದೊಂದು ದಿನ ಮುಳ್ಳಾದೀತು. ಎಚ್ಚರ

ಪುಣೆ : 3 ವರ್ಷದ ಹಸುಳೆ ಮೇಲೆ ಅತ್ಯಾಚಾರ, ಬರ್ಬರ ಕೊಲೆ : ಚಾರಿತ್ರಿಕ ತೀರ್ಪು

65 ವರ್ಷದ ಅಪರಾಧಿಗೆ ಗಲ್ಲು ಶಿಕ್ಷೆ







ಪುಣೆ, ಜೂ. 29- ಪುಣೆ ಜಿಲ್ಲೆಯ ನಸ್ರಾಪುರ ಗ್ರಾಮದಲ್ಲಿ ಮೂರು ವರ್ಷದ ಬಾಲಕಿಯನ್ನು ಅಪಹರಿಸಿ ಅತ್ಯಾಚಾರಗೈದು ಅಮಾನುಷವಾಗಿ ಕೊಲೆಗೈದ 65 ವರ್ಷದ ಅಪರಾಧಿಗೆ ಪುಣೆಯ ವಿಶೇಷ ನ್ಯಾಯಾಲಯವೊಂದು ಸೋಮವಾರ ಮರಣದಂಡನೆ ಶಿಕ್ಷೆ ತೀರ್ಪು ನೀಡಿದೆ.

ಮೂರು ವರ್ಷದ ಹೆಣ್ಣು ಮಗುವಿನ ಅತ್ಯಾಚಾರ ಮತ್ತು ಬರ್ಬರ ಕೊಲೆ ವಿರುದ್ಧ ರಾಜ್ಯಾದಾದ್ಯಂತ ಆಕ್ರೋಷಿತ ಪ್ರತಿಭಟನೆ ನಡೆದಿತ್ತು. ಇದು ''ಅತ್ಯಂತ ಅಪರೂಪದಲ್ಲಿ ಅಪರೂಪದ ಕ್ರೂರ ಕೃತ್ಯ'' ಎಂದು ಅಭಿಪ್ರಾಯಪಟ್ಟಿರುವ ಹೆಚ್ಚುವರಿ ನ್ಯಾಯಾಧೀಶ ಎಸ್.ಆರ್. ಸಾಳುಂಕೆ ಅವರು ಅಪರಾಧಿಯ ವಯಸ್ಸನ್ನು ಪರಿಗಣಿಸಿ ಕಡಿಮೆ ಶಿಕ್ಷೆ ನೀಡಬೇಕೆಂಬ ಆರೋಪಿ ಪರ ವಕೀಲರ ವಿನಂತಿಯನ್ನು ತಿರಸ್ಕರಿಸಿ ಗಲ್ಲು ಶಿಕ್ಷೆ ತೀರ್ಪು ನೀಡಿದ್ದಾರೆ.



ಆರೋಪಿ ಭೀಮರಾವ್ ಕಾಂಬ್ಳೆಯ ಅನಾಗರಿಕ ಹಿಂಸಾಕೃತ್ಯವು ನ್ಯಾಯಾಂಗ ಮತ್ತು ಸಮಾಜದ ಆತ್ಮಸಾಕ್ಷಿಯನ್ನೇ ತತ್ತರಿಸುವಂತೆ ಮಾಡಿದ್ದು, ಇದು ಸಾಮಾನ್ಯ ಅಪರಾಧವಲ್ಲ ಎಂದು ನ್ಯಾಯಾಧೀಶರು ಅಭಿಪ್ರಾಯಪಟ್ಟಿದ್ದಾರೆ. ವಿಶೇಷ ನ್ಯಾಯಾಲಯ ನೀಡಿರುವ ತೀರ್ಪನ್ನು ಸ್ವಾಗತಿಸಿರುವ ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು, ಇಂತಹ ಕ್ರಿಮಿನಲ್‌ಗಳಿಗೆ ಸಮಾಜದಲ್ಲಿ ಬದುಕುವ ಹಕ್ಕಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ದಾಖಲೆ ಅವಧಿಯಲ್ಲಿ ಪ್ರಕರಣದ ತನಿಖೆ ನಡೆಸಿರುವ ಪೊಲೀಸರು ಮತ್ತು ಪ್ರಾಸಿಕ್ಯೂಶನನ್ನು ಅಭಿನಂದಿಸಿರುವ ಮುಖ್ಯಮಂತ್ರಿ, ಈ ತೀರ್ಪು ನ್ಯಾಯದ ಬದ್ಧತೆಯನ್ನು ಬಲವಾಗಿ ಪ್ರತಿಫಲಿಸಿದೆ ಎಂದು ಹೇಳಿದ್ದಾರೆ. ನ್ಯಾಯಾಲಯದಲ್ಲಿ ನ್ಯಾಯಾಧೀಶರ ತೀರ್ಪು ಬರುತ್ತಿದ್ದಂತೆಯೇ ದುರ್ದೈವಿ ಬಾಲಕಿಯ ಹೆತ್ತವರು ಗಳಗಳನೆ ಅತ್ತು ತಮ್ಮ ನೋವನ್ನು ತಣಿಸಿಕೊಳ್ಳುವ ದೃಶ್ಯ ಕಂಡು ಬಂತು.

ಮೇ 10ರಂದು ಬಾಲಕಿಯನ್ನು ಅಪಹರಿಸಿ ಅತ್ಯಾಚಾರಗೈದು ಕೊಲೆ ಮಾಡಲಾಗಿತ್ತು. ಜೂನ್ 25ರಂದು ಆರೋಪಿ ಅಪರಾಧಿ ಎಂದು ಕೋರ್ಟ್ ತೀರ್ಪು ನೀಡಿದ್ದು ಇಂದು ಅಪರಾಧಿಗೆ ಮರಣದಂಡನೆ ಶಿಕ್ಷೆ ತೀರ್ಪು ನೀಡಿದೆ.

3ನೇ ಪುಟಕ್ಕೆ

ಮಹಾರಾಷ್ಟ್ರ ಶಾಲೆಗಳಲ್ಲಿ ಮರಾಠಿ ಕಡ್ಡಾಯ:


ನಿಯಮ ಉಲ್ಲಂಘಿಸಿದರೆ ಮಾನ್ಯತೆ ರದ್ದತಿ; ಸಚಿವ ದಾದಾ ಭೂಸೆ

ಮುಂಬಯಿ, ಜೂ.29 - ಮಹಾರಾಷ್ಟ್ರದ ಎಲ್ಲಾ ಮಾಧ್ಯಮಗಳ ಶಾಲೆಗಳಲ್ಲಿ ಮರಾಠಿ ಭಾಷೆಯ ಬೋಧನೆ ಮತ್ತು ವಿಷಯದ ಪರೀಕ್ಷೆಯನ್ನು ಕಾನೂನುಬದ್ಧವಾಗಿ ಕಡ್ಡಾಯಗೊಳಿಸಲಾಗಿದ್ದು, ಅದನ್ನು ಪಾಲಿಸಲು ವಿಫಲವಾದ ಸಂಸ್ಥೆಗಳು ಮಾನ್ಯತೆ ರದ್ದತಿಯನ್ನು ಎದುರಿಸಬೇಕಾಗುತ್ತದೆ ಎಂದು ರಾಜ್ಯದ ಶಿಕ್ಷಣ ಸಚಿವ ದಾದಾ ಭೂಸೆ ಹೇಳಿದ್ದಾರೆ.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ನಡೆದ ಚರ್ಚೆಗೆ ಉತ್ತರಿಸಿದ ಶಾಲಾ ಶಿಕ್ಷಣ ಸಚಿವರು,ಮಹಾರಾಷ್ಟ್ರ ಕಡ್ಡಾಯ ಬೋಧನೆ ಮತ್ತು ಶಾಲೆಗಳಲ್ಲಿ ಮರಾಠಿ ಭಾಷೆಯ ಕಲಿಕೆ ಕಾಯ್ದೆ, 2020ರ ಅಡಿಯಲ್ಲಿ ರಾಜ್ಯದ ಎಲ್ಲಾ ಮಾಧ್ಯಮಗಳ ಶಾಲೆಗಳಲ್ಲಿ 1 ರಿಂದ 10 ನೇ ತರಗತಿಯವರೆಗೆ ಮರಾಠಿಯನ್ನು ಕಡ್ಡಾಯಗೊಳಿಸಲಾಗಿದೆ ಎಂದು ಹೇಳಿದರು.

ಶಾಲೆಗಳು ಅರ್ಹ ಮರಾಠಿ ಶಿಕ್ಷಕರನ್ನು ಕೂಡ ನೇಮಿಸಬೇಕು ಮತ್ತು ನಿಯಮಿತ ತಪಾಸಣೆಯ ಮೂಲಕ ಅನುಸರಣೆಯನ್ನು ಮೇಲ್ವಿಚಾರಣೆ ಮಾಡಲಾಗುತ್ತದೆ ಎಂದು ಅವರು ತಿಳಿಸಿದರು.

'ಒಂದು ಶಾಲೆಯು ಈ ನಿಬಂಧನೆಗಳನ್ನು ಜಾರಿಗೊಳಿಸದಿದ್ದರೆ, ಮೊದಲು ಅದಕ್ಕೆ ಉಲ್ಲಂಘನೆಯನ್ನು ಸರಿಪಡಿಸಲು ಕೇಳಲಾಗುತ್ತದೆ. ಅದು ಇನ್ನೂ ಮರಾಠಿ ಕಲಿಸಲು ವಿಫಲವಾದರೆ, 1 ಲಕ್ಷ ರೂ.ಗಳವರೆಗೆ ದಂಡ ವಿಧಿಸಬಹುದು. ನಿಯಮ



ಪಾಲಿಸದಿದ್ದರೆ ಎ.17ರಂದು ಹೊರಡಿಸಲಾದ ಸರಕಾರಿ ನಿರ್ಣಯದ ಅಡಿಯಲ್ಲಿ ಶಾಲೆಯ ಮಾನ್ಯತೆಯನ್ನು ರದ್ದುಗೊಳಿಸಬಹುದು' ಎಂದು ಸಚಿವರು ಹೇಳಿದರು.

ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಿದ ಭೂಸೆ ಅವರು, ಮರಾಠಿ ಕೇವಲ ಕಾಗದದ ಮೇಲೆ ಕಡ್ಡಾಯ ವಿಷಯವಾಗಿ ಉಳಿಯುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಪ್ರತಿ ತರಗತಿಗೂ ಮರಾಠಿ ಪರೀಕ್ಷೆಗಳನ್ನು ಖಂಡಿತವಾಗಿಯೂ ನಡೆಸಲಾಗುವುದು ಎಂದು ಅವರು ಹೇಳಿದರು.

ಚರ್ಚೆಯ ಸಮಯದಲ್ಲಿ ಬಿಜೆಪಿ ಸದಸ್ಯ ಅತುಲ್ ಭಟ್ಕಲ್ಕರ್ ಅವರು,ಮರಾಠಿಯನ್ನು ಕಡ್ಡಾಯವಾಗಿದ್ದರೂ, ಕಲೆ ಮತ್ತು ಕರಕುಶಲ ವಸ್ತುಗಳಂತಹ ಐಚ್ಛಿಕ ವಿಷಯಗಳಂತೆ ಪರಿಗಣಿಸಬೇಕೇ ಅಥವಾ ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಹಾಜರಾಗಬೇಕೇ ಎಂಬುದರ ಕುರಿತು ಸ್ಪಷ್ಟೀಕರಣವನ್ನು ಕೋರಿದ ಜತೆಗೆ 1 ರಿಂದ 10 ನೇ ತರಗತಿಯವರೆಗೆ ಮರಾಠಿ ಪರೀಕ್ಷೆಗಳನ್ನು ನಡೆಸಲಾಗುತ್ತದೆಯೇ ಎಂದು ಕೇಳಿದರು.

ಹಿಂದಿನ ರಾಜ್ಯ ಸರಕಾರವು ಸ್ಥಾಪಿಸಿದ ಇದೇ ರೀತಿಯ ಮಂಡಳಿಯನ್ನು ಬಳಿಕ ವಿಸರ್ಜಿಸಲಾಯಿತು ಎಂದು ಹೇಳುವ ಮೂಲಕ, ಅಂತಾರಾಷ್ಟ್ರೀಯ ಗುಣಮಟ್ಟದ ಮರಾಠಿ ಶಿಕ್ಷಣ ಮಂಡಳಿಯನ್ನು ಪುನರುಜ್ಜೀವನಗೊಳಿಸುವಂತೆ ಸದಸ್ಯರು ಸರಕಾರವನ್ನು ಒತ್ತಾಯಿಸಿದರು.

ಬೇಡಿಕೆಯ ಮೇರೆಗೆ ಸರಕಾರವು ಪ್ರಸ್ತಾವನೆಯನ್ನು ಪರಿಶೀಲಿಸುತ್ತದೆ ಮತ್ತು ಸೂಕ್ತ ಪರಿಗಣನೆಯ ಬಳಿಕ ಸಕಾರಾತ್ಮಕ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಭೂಸೆ ವಿವರಿಸಿದರು. 2020ರ ಸರಕಾರಿ ನಿರ್ಣಯದ ಅಡಿಯಲ್ಲಿ ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗಿದೆ ಮತ್ತು ಮಹಾರಾಷ್ಟ್ರದಾದ್ಯಂತ ಎಲ್ಲಾ ಶಾಲೆಗಳಲ್ಲಿ 1 ರಿಂದ 10 ನೇ ತರಗತಿಯವರೆಗೆ, ಅವುಗಳ ಬೋಧನಾ ಮಾಧ್ಯಮವನ್ನು ಲೆಕ್ಕಿಸದೆ ಮರಾಠಿ ಬೋಧನೆ ಈಗ ಕಡ್ಡಾಯವಾಗಿದೆ ಎಂದು ಸಚಿವರು ಹೇಳಿದರು.

ಪ್ರಶ್ನೋತ್ತರ ಅವಧಿಯಲ್ಲಿ ನಡೆದ ಚರ್ಚೆಗೆ ಉತ್ತರಿಸಿದ ಭೂಸೆ, 2020ರಲ್ಲಿ ಜಾರಿಗೆ ತಂದ ನಿಬಂಧನೆಗಳ ಅಡಿಯಲ್ಲಿ ಶಿಕ್ಷಣ ಮಂಡಳಿಯನ್ನು ಲೆಕ್ಕಿಸದೆ, ಎಲ್ಲಾ ಶಾಲೆಗಳಲ್ಲಿ ಮರಾಠಿ ಬೋಧನೆ ಕಡ್ಡಾಯವಾಗಿದೆ ಎಂದು ತಿಳಿಸಿದರು. 3ನೇ ಪುಟಕ್ಕೆ

ಮುಂಬಯಿ ಉಪನಗರಗಳಲ್ಲಿ ರಾತ್ರಿಯಿಡೀ ಸುರಿದ ಭಾರೀ ಮಳೆಯಿಂದ ಸಾಮಾನ್ಯ ಜನಜೀವನ ಅಸ್ತವ್ಯಸ್ತ

ಮುಂಬಯಿಗೆ 'ಆರೆಂಜ್ ಎಚ್ಚರಿಕೆ', ಪಾಲ್ಘರ್‌ಗೆ 'ರೆಡ್ ಅಲರ್ಟ್' ಘೋಷಿಸಿದ ಐಎಂಡಿ

ಮುಂಬಯಿ, ಜೂ. 29 - ಮುಂಬೈ ಉಪನಗರಗಳಲ್ಲಿ ರಾತ್ರಿಯಿಡೀ ಭಾರೀ ಮಳೆಯಾಗಿದ್ದು, ಅನೇಕ ಪ್ರದೇಶಗಳಲ್ಲಿ ಕೇವಲ ನಾಲ್ಕು ಗಂಟೆಗಳಲ್ಲಿ 100 ಮಿ.ಮೀ.ಗೂ ಹೆಚ್ಚು ಮಳೆಯಾಗಿದ್ದು, ಕೆಲವು ಪ್ರದೇಶಗಳಲ್ಲಿ ನೀರು ನಿಲ್ಲುವಿಕೆ ಮತ್ತು ಸಂಚಾರಕ್ಕೆ ಅಡ್ಡಿಯಾಗಿದೆ ಎಂದು ಸ್ಥಳೀಯ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಬೃಹನ್ ಮುಂಬೈ ಮುನ್ಸಿಪಲ್ ಕಾರ್ಪೊರೇಷನ್ (ಬಿಎಂಸಿ) ದತ್ತಾಂಶದ ಪ್ರಕಾರ, ಮುಲುಂಡ್‌ನ ಪೂರ್ವ ಉಪನಗರದಲ್ಲಿರುವ ವೀಣಾ ನಗರದಲ್ಲಿ 160.4 ಮಿ.ಮೀ ಮಳೆಯಾಗಿದ್ದರೆ, ಪಶ್ಚಿಮ ಉಪನಗರದಲ್ಲಿರುವ ವರ್ಸೋವಾದಲ್ಲಿ 156.8 ಮಿ.ಮೀ ಮಳೆಯಾಗಿದೆ. ಮಧ್ಯರಾತ್ರಿ 12 ರಿಂದ ಬೆಳಿಗ್ಗೆ 4 ಗಂಟೆಯವರೆಗೆ ಉಪನಗರಗಳಲ್ಲಿ ಧಾರಾಕಾರ ಮಳೆಯಾಗಿದ್ದು, ಮುಲುಂಡ್‌ನ ಎಲ್‌ಬಿಎಸ್



ರೋಡ್ ಮತ್ತು ಅಂಧೇರಿ ಸಬ್‌ವೇಯ ಕೆಲವು ಭಾಗಗಳು ನೀರಿನಿಂದ ತುಂಬಿ, ವಾಹನ ಸಂಚಾರಕ್ಕೆ ಸ್ವಲ್ಪ ಸಮಯದವರೆಗೆ ಅಡ್ಡಿಯುಂಟು ಮಾಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಎಂಸಿ ಸ್ವಯಂಚಾಲಿತ ಹವಾಮಾನ ಕೇಂದ್ರಗಳ ಮಾಹಿತಿಯ ಪ್ರಕಾರ, ಪೂರ್ವ ಉಪನಗರಗಳಲ್ಲಿ ಅತಿ ಹೆಚ್ಚು ಮಳೆಯಾಗಿದೆ.

ಮಾನ್ಖುರ್ದ್‌ನ ಮಹಾರಾಷ್ಟ್ರ ನಗರ ಶಾಲೆಯಲ್ಲಿ 123.4 ಮಿ.ಮೀ., ಪೊವಾಯಿಯ ಪಾಸ್ಪೋಲಿ ನಗರ ಶಾಲೆಯಲ್ಲಿ 122 ಮಿ.ಮೀ., ಮುಲುಂಡ್‌ನ ಮಿತಾಗರ್ ನಗರ ಶಾಲೆಯಲ್ಲಿ 120.8 ಮಿ.ಮೀ. ಮತ್ತು ಎಸ್ ವಾರ್ಡ್ ಕಚೇರಿ ಪ್ರದೇಶದಲ್ಲಿ 120.6 ಮಿ.ಮೀ. ಮಳೆಯಾಗಿದೆ. ಪಶ್ಚಿಮ ಉಪನಗರಗಳಲ್ಲಿ, ವರ್ಸೋವಾ ಪಂಪಿಂಗ್ ಸ್ಟೇಷನ್‌ನಲ್ಲಿ 121.6 ಮಿ.ಮೀ. ಮಳೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದರ ನಂತರ ಮರೋಲ್ ಅಗ್ನಿಶಾಮಕ ಠಾಣೆಯಲ್ಲಿ 108.4 ಮಿ.ಮೀ., ಓಶಿವಾರಾದ ಪ್ರತೀಕ್ಷಾ ನಗರ ಶಾಲೆಯಲ್ಲಿ 108 ಮಿ.ಮೀ. ಮತ್ತು ಅಂಧೇರಿಯ ಮಲ್ಪಾ ಡೊಂಗ್ರಿ ನಗರ ಶಾಲೆಯಲ್ಲಿ 104 ಮಿ.ಮೀ. ಮಳೆಯಾಗಿದೆ. 3ನೇ ಪುಟಕ್ಕೆ

ಟಿಇಟಿ ಪ್ರಶ್ನೆ ಪತ್ರಿಕೆ ಸೋರಿಕೆಯ ಸಿಬಿಐ ತನಿಖೆ, ಶಿಕ್ಷಣ ಸಚಿವರ ರಾಜೀನಾಮೆಗೆ ಮಹಾ ವಿಪಕ್ಷಗಳ ಆಗ್ರಹ

ಮುಂಬಯಿ,ಜೂ.29 - ಮಹಾರಾಷ್ಟ್ರ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ಪ್ರಶ್ನೆ ಪತ್ರಿಕೆ ಸೋರಿಕೆ ಆರೋಪದ ಬಗ್ಗೆ ಸಿಬಿಐ ತನಿಖೆಗೆ ಒತ್ತಾಯಿಸಿದ ಮಹಾರಾಷ್ಟ್ರ ವಿಧಾನ ಪರಿಷತ್ತಿನ ವಿರೋಧ ಪಕ್ಷಗಳು,ಶಿಕ್ಷಣ ಸಚಿವ ದಾದಾ ಭೂಸೆ ಅವರ ರಾಜೀನಾಮೆಗಾಗಿ ಆಗ್ರಹಿಸಿದವು.

ವಿರೋಧ ಪಕ್ಷಗಳ ಗದ್ದಲದ ಬಳಿಕ ಸದನವನ್ನು 30 ನಿಮಿಷಗಳ ಕಾಲ ಮುಂದೂಡಲಾಯಿತು. ಪರಿಷತ್ತಿನಲ್ಲಿ ಮಾತನಾಡಿದ ಭೂಸೆ ಅವರು, ಈ ವಿಷಯದ ಬಗ್ಗೆ ಬಳಿಕ ಸದನದಲ್ಲಿ ವಿವರವಾದ ಹೇಳಿಕೆ ನೀಡಲಾಗುವುದು ಎಂದು ಹೇಳಿದರು. ವಿಶೇಷ ತನಿಖಾ ತಂಡ (ಎಸ್‌ಐಟಿ) ವನ್ನು ಈಗಾಗಲೇ ರಚಿಸಲಾಗಿದೆ ಮತ್ತು ನಾಲ್ಕಕ್ಕೂ ಹೆಚ್ಚು ತಂಡಗಳನ್ನು ರಚಿಸಿ ತನಿಖೆ ನಡೆಯುತ್ತಿದೆ ಎಂದು ಭೂಸೆ ತಿಳಿಸಿದರು. 3ನೇ ಪುಟಕ್ಕೆ

ಮಲ್ಲಿಕಾರ್ಜುನ ಖರ್ಗೆ ಮತ್ತೆ ರಾಜ್ಯಸಭೆಯ ವಿಪಕ್ಷ ನಾಯಕ

ಹೊಸದಿಲ್ಲಿ, ಜೂ. 29- ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮತ್ತೆ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಎಂದು ಸೋಮವಾರ ಅಂಗೀಕಾರ ನೀಡಲಾಗಿದೆ. ಖರ್ಗೆ ಅವರು ರಾಜ್ಯಸಭೆಗೆ ಮರು ಆಯ್ಕೆಯಾಗಿರುವುದರಿಂದ ಮೇಲ್ಮನೆಯ ವಿಪಕ್ಷ ನಾಯಕರೆಂದು ಮರು ನೇಮಕ ಆಗಿದ್ದಾರೆ.

ಜೂನ್ 25ರ ತನಕ ರಾಜ್ಯಸಭೆಯ ಸದಸ್ಯರಾಗಿದ್ದ ಖರ್ಗೆ ಅವರು ಸದನದ ಸದಸ್ಯರಾಗಿ ಮರುಚುನಾಯಿತರಾಗಿರುವುದರಿಂದಾಗಿ, ಮೇಲ್ಮನೆಯ ಸಭಾಪತಿ ರಾಧಾಕೃಷ್ಣನ್ ಅವರು ಜೂನ್ 26ರಿಂದ ವಿರೋಧ ಪಕ್ಷದ ನಾಯಕರಾಗಿ ಖರ್ಗೆ ಅವರಿಗೆ ಮಾನ್ಯತೆ ನೀಡಿದ್ದಾರೆ.

ಸೋಮವಾರ ಖರ್ಗೆ ಅವರು ಸಭಾಪತಿಗಳ ಕಚೇರಿಯಲ್ಲಿ ರಾಧಾಕೃಷ್ಣನ್ ಅವರಿಂದ ಸದನದ ಸದಸ್ಯರಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ. 2026ರ ಜೂನ್ 25ರಂದು ಖರ್ಗೆ ಅವರ ರಾಜ್ಯಸಭಾ ಸದಸ್ಯತ್ವ ಅವಧಿ ಮುಗಿದಿರುವುದರಿಂದ 2026ರ ಜೂನ್ 26ರಿಂದ ವಿರೋಧ ಪಕ್ಷದ ನಾಯಕ ಸ್ಥಾನದಿಂದ ಅವರು ನಿವೃತ್ತರಾಗಿದ್ದಾರೆ ಎಂದು ರಾಜ್ಯಸಭೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಖರ್ಗೆ ಅವರು ರಾಜ್ಯಸಭೆಗೆ ಮರು ಆಯ್ಕೆ ಆಗಿರುವುದರಿಂದ ರಾಜ್ಯಸಭೆಯ ಸಭಾಪತಿಯವರು 2026ರ ಜೂನ್ 26ರಿಂದ ಅನ್ವಯ ಆಗುವಂತೆ ಖರ್ಗೆ ಅವರು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಎಂದು ಮಾನ್ಯತೆ ನೀಡಿದ್ದಾರೆ ಎಂದು ರಾಜ್ಯಸಭೆಯ ಮಹಾ ಕಾರ್ಯದರ್ಶಿ ಪಿ.ಸಿ. ಪಾಂಡೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (ಐಎನ್‌ಸಿ) ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು 2026ರ ಜೂನ್ 26ರಿಂದ ಸದನದ ವಿರೋಧ ಪಕ್ಷದ ನಾಯಕರಾಗಿದ್ದು ಸಂಸತ್ ಕಾಯ್ದೆ 1977ರ ಸೆಕ್ಷನ್ 2ರ ನಿಯಮದಂತೆ ಅವರಿಗೆ ವಿರೋಧ ಪಕ್ಷದ ನಾಯಕರಿಗೆ ನೀಡುವ ವೇತನ ಮತ್ತು ಭತ್ಯೆಗಳನ್ನು ನೀಡಲಾಗುತ್ತದೆ ಎಂದು ಪ್ರಕಟಣೆ ಹೇಳಿದೆ.

ಕರ್ನಾಟಕ ಸಂಘ ಅಂಧೇರಿ, ಜಾನಪದ ಸಂರಕ್ಷಣಾ ಪರಿಷತ್ ಬೆಂಗಳೂರು ಸಹಯೋಗದಲ್ಲಿ ಹೊರನಾಡ ಕನ್ನಡ ಸಂಸ್ಕೃತಿ ಸಂಭ್ರಮ - 2026 ಉದ್ಘಾಟನೆ

ಸಾಮಾಜಿಕ ಸೇವೆಯೊಂದಿಗೆ ನಮ್ಮ ನಾಡಿನ ಭಾಷೆ, ಕಲೆ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾಯಕವು ಇಂತಹ ಸಂಘ-ಸಂಸ್ಥೆಗಳ ಮೂಲಕ ನಿರಂತರ ಆಗಲಿ - ವಾಸ್ತು ಮಾರ್ತಾಂಡ ಪಂಡಿತ್ ನವೀನ್‌ಚಂದ್ರ ಸನಿಲ್


ಹೊರನಾಡ ಕನ್ನಡ ಸಂಸ್ಕೃತಿ ಸಂಭ್ರಮ -2026 ಉದ್ಘಾಟನೆ


ವಾಸ್ತು ಮಾರ್ತಾಂಡ ಪಂಡಿತ್ ನವೀನ್ ಚಂದ್ರ ಸನಿಲ್ ಅವರನ್ನು ಗೌರವಿಸಿದಾಗ.


ಆನೇಕಲ್ಲು ಟಿ. ವಿ. ಬಾಬು ಅವರನ್ನು ಗೌರವಿಸಿದಾಗ.

(ಚಿತ್ರ, ವರದಿ : ನವೀನ್ ಕೆ. ಇನ್ನ)

ಮುಂಬಯಿ, ಜೂ. 29- ನಮ್ಮ ನಾಡು ನುಡಿ ಸಂಸ್ಕೃತಿಯ ಸೊಬಗನ್ನು ಹೊರನಾಡಿನಲ್ಲಿ ವಿಶಿಷ್ಟ ಪರಿಕಲ್ಪನೆಯೊಂದಿಗೆ ಬಿತ್ತರಿಸುವ ಈ ಕಾರ್ಯಕ್ರಮ ನಿಜವಾಗಿಯೂ ಅಭೂತಪೂರ್ವ. ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸೇವಾ ಕಾರ್ಯದಲ್ಲಿ ಮುಂಚೂಣಿಯಲ್ಲಿದ್ದು ಜನಮನ್ನಣೆಯನ್ನು ಪಡೆದಿರುವ ಈ ಕರ್ನಾಟಕ ಸಂಘವು ವರ್ಷಂಪ್ರತಿ ನಾಡಿನ ಸಂಸ್ಕೃತಿ-ಕಲೆಯನ್ನು ಪ್ರಸಾರಪಡಿಸುವ ಒಳ್ಳೆಯ ಕಾರ್ಯಕ್ರಮವನ್ನು ಹಮ್ಮಿಕೊಂಡು ಬರುತ್ತಿರುವುದು ಶ್ಲಾಘನೀಯ. ನಮ್ಮ ನಾಡಿನ ಕಲೆ-ಸಂಸ್ಕೃತಿಗೆ ಮಹತ್ವವನ್ನು ನೀಡಿ ಇಂತಹ ಕಾರ್ಯಕ್ರಮಗಳ ಮೂಲಕ ಹಲವಾರು ಪ್ರತಿಭಾವಂತರಿಗೆ ಅವಕಾಶದೊಂದಿಗೆ ವೇದಿಕೆಯನ್ನು ಕಲ್ಪಿಸಿಕೊಡುವಂತಹ ಮಹತ್ತರವಾದ ಕೆಲಸವನ್ನು ಈ ಸಂಘವು ಮಾಡುತ್ತಿದೆ ಎನ್ನಲು ತುಂಬಾ ಅಭಿಮಾನವಾಗುತ್ತದೆ. ಸಾಮಾಜಿಕ ಸೇವೆಯೊಂದಿಗೆ ನಮ್ಮ ನಾಡಿನ ಭಾಷೆ, ಕಲೆ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾಯಕವು ಇಂತಹ ಸಂಘ ಸಂಸ್ಥೆಗಳ ಮುಖೇನ ನಿರಂತರ ಆಗುತ್ತಿರಲಿ ಎಂದು ವಾಸ್ತುತಜ್ಞ, ವಾಸ್ತು ಮಾರ್ತಾಂಡ ಪಂಡಿತ್ ನವೀನ್ ಚಂದ್ರ ಸನಿಲ್ ನುಡಿದರು.

ಅವರು ಜೂ. 28ರ ಆದಿತ್ಯವಾರಂದು ಕುರ್ಲಾ ಪೂರ್ವದ ಬಂಟರ ಭವನದ ರಾಧಾಬಾಯಿ ಟಿ. ಭಂಡಾರಿ ಸಭಾದಲ್ಲಿ ಕರ್ನಾಟಕ ಸಂಘ ಅಂಧೇರಿ (ರಿ.) ಪ್ರಸ್ತುತಪಡಿಸುವ ಜಾನಪದ ಸಂರಕ್ಷಣಾ ಪರಿಷತ್ ಬೆಂಗಳೂರು ಸಹಯೋಗದಲ್ಲಿ ಹೊರನಾಡ ಕನ್ನಡ ಸಂಸ್ಕೃತಿ ಸಂಭ್ರಮ -2026 ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ದೀಪವನ್ನು ಪ್ರಜ್ವಲಿಸಿ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಲಾಯಿತು. ಅತಿಥಿ ಗಣ್ಯರನ್ನು ಕರ್ನಾಟಕ ಸಂಘ ಅಂಧೇರಿಯ ಸಂಸ್ಥಾಪಕ ಕೃಷ್ಣ ಬಿ. ಶೆಟ್ಟಿ, ಗೌರವಾಧ್ಯಕ್ಷ ಪಿ. ಧನಂಜಯ ಶೆಟ್ಟಿ, ಅಧ್ಯಕ್ಷ ಜಗಜೀವನ್ ಪೂಜಾರಿ, ಉಪಾಧ್ಯಕ್ಷ ಸೀತಾರಾಮ್ ಪೂಜಾರಿ ಶಾಲು ಹೊದಿಸಿ, ಹೂಗುಚ್ಛ, ಸ್ಮರಣಿಕೆಯನ್ನು ನೀಡಿ ಗೌರವಿಸಿದರು. ವೇದಿಕೆಯಲ್ಲಿ ಸಮಾಜ ಸೇವಕ ಆನೇಕಲ್ಲು ಟಿ. ವಿ. ಬಾಬು, ಮಾಲಿಂಗಾಪುರ ಸಾಹಿತಿ ಹಾಗೂ ನಿವೃತ್ತ ಪ್ರಾಧ್ಯಾಪಕ ಡಾ. ಅಶೋಕ್ ನರೋಡೆ, ಸಮಾಜ ಸೇವಕ ರಾಜಶೇಖರ ಕರಾಡ್ಕರ್, ಕರ್ನಾಟಕ ಸಂಘ ಅಂಧೇರಿ ಗೌ. ಕಾರ್ಯದರ್ಶಿ ಉದಯ್ ಕೇರ್ಗಲ್ ಉಪಸ್ಥಿತರಿದ್ದರು. ಖ್ಯಾತ ಗಾಯಕ ವಿಜಯ್ ಕುಮಾರ್ ಶೆಟ್ಟಿ ಮೂಡುಬೆಳ್ಳೆ ಪ್ರಾರ್ಥನೆಗೈದರು. ಕಾರ್ಯಕ್ರಮವನ್ನು ನಿಕಟ ಪೂರ್ವ ಅಧ್ಯಕ್ಷ ಭಾಸ್ಕರ್ ಸುವರ್ಣ ಸಸಿಹಿತ್ಲು ನಿರೂಪಿಸಿದರು.

ಉದ್ಘಾಟನೆಯ ಬಳಿಕ ಮುಂಬಯಿ ಮಹಾನಗರದ ತುಳು-ಕನ್ನಡ ಸಂಘ-ಸಂಸ್ಥೆಗಳ ಪಾಲ್ಗೊಳ್ಳುವಿಕೆಯಲ್ಲಿ ಸಮೂಹ ಗಾಯನ ಸ್ಪರ್ಧೆ ನಡೆಯಿತು. ಈ ಸ್ಪರ್ಧೆಗಳ ನಿರೂಪಣೆಯನ್ನು ಮಹಿಳಾ ವಿಭಾಗದ ಪುಷ್ಪ ಗೌಡ ಮಾಡಿದರು. ತದನಂತರ ಅಂತಾರಾಷ್ಟ್ರೀಯ ಖ್ಯಾತ ಗಾಯಕ ಗೋನಾ ಸ್ವಾಮಿ ತಂಡದವರಿಂದ ಸಂಗೀತ ಸಂಜೆ, ನಾಟ್ಯ ಸ್ವರಾಲಯ ಬೆಂಗಳೂರು ಅವರಿಂದ ಹಾಗೂ ಕರ್ನಾಟಕ ಸಂಘದ ಸದಸ್ಯರ ಪುಟ್ಟ ಮಕ್ಕಳಿಂದ ನೃತ್ಯ ಕಾರ್ಯಕ್ರಮ ನಡೆಯಿತು. ಕೋಶಾಧಿಕಾರಿ ಪರ್ಮಿಂದರ್ ಸಿಂಗ್ ಸೋಖಿ, ಜೊತೆ ಕಾರ್ಯದರ್ಶಿ ಅಶೋಕ್ ಶೆಟ್ಟಿ ತೋಡಾರ್, ಜೊತೆ ಕೋಶಾಧಿಕಾರಿ ಕರುಣಾಕರ್ ಶೆಟ್ಟಿ ಪಾವೂರು, ಮಹಿಳಾ ವಿಭಾಗದ ಅಧ್ಯಕ್ಷೆ ಸುರೇಖಾ ಶಿವರಾಮ್ ಶೆಟ್ಟಿ, ಕಾರ್ಯದರ್ಶಿ ಪ್ರತಿಮಾ ಸುರೇಂದ್ರ ಹೆಗ್ಡೆ, ಉಪಾಧ್ಯಕ್ಷೆ ಯಶೋಧಾ ದಯಾನಂದ ಶೆಟ್ಟಿ ಹಾಗೂ ಸದಸ್ಯರು ಉಪಸ್ಥಿತರಿದ್ದು ಸಹಕರಿಸಿದರು.

ಹೊರನಾಡ ಕನ್ನಡಿಗರು ಒಗ್ಗೂಡಿ ಇಂತಹ ಸಾಂಸ್ಕೃತಿಕ ಸಂಭ್ರಮದ ಮುಖಾಂತರ ನಮ್ಮ ಕಲೆ-ಸಂಸ್ಕೃತಿ, ವಿವಿಧ ಆಚರಣೆಗಳನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯಲು ಪ್ರಯತ್ನಶೀಲರಾಗಿರುವುದು ಅಭಿನಂದನೀಯ - ಡಾ. ಶಿವಾನಂದ ಕೆಳಗಿನ ಮನೆ



ನಮ್ಮ ಅಭಿಮಾನದ ದ್ಯೋತಕವಾಗಿರುವ ಕರ್ನಾಟಕದ ಸಂಸ್ಕೃತಿ ತುಂಬಾ ವೈವಿಧ್ಯಮಯವಾಗಿದೆ. ಈ ನಮ್ಮ ಸಂಸ್ಕೃತಿ ಇಡೀ ಭಾರತಕ್ಕೆ ಸಾಂಸ್ಕೃತಿಕ ಕೊಡುಗೆಯನ್ನು ನೀಡಿರುತ್ತದೆ. ಕರ್ನಾಟಕದ ಸಂಸ್ಕೃತಿ ವಿಶ್ವದಾದ್ಯಂತ ಪ್ರಸಾರವನ್ನು ಹೊಂದಿದೆ. ಆದರೆ ಇಂದು ತಂತ್ರಜ್ಞಾನ ಹಾಗೂ ಆಧುನಿಕತೆಯ ಭರಾಟೆಯಲ್ಲಿ ಮೂಲ ಕೃಷಿ ಸಂಸ್ಕೃತಿ ಜೊತೆ ಅನೇಕ ಕಲಾ ಪ್ರಕಾರಗಳು ಮರೆಯಾಗುತ್ತಿದೆ. ಕೃಷಿಗೆ ಸಂಬಂಧಪಟ್ಟ ನೇಗಿಲು, ಸಾಂಪ್ರದಾಯಿಕ ಉಪಕರಣಗಳು ಅಲ್ಲದೆ ಸಾಂಸ್ಕೃತಿಕ ಪರಿಕರಗಳು ಮೂಲೆ ಸೇರುತ್ತಿದೆ. ನಮ್ಮ ಭವ್ಯ ಪರಂಪರೆಯ ಸಂಸ್ಕೃತಿ, ಜನಪದ ಹಾಡುಗಳು, ಕಲೆಗಳು, ನೃತ್ಯಗಳು, ಭೂಮಿಗೆ ಹಬ್ಬ-ಹರಿದಿನಗಳಿಗೆ, ಮಳೆಗಾಲಕ್ಕೆ ಸಂಬಂಧಪಟ್ಟ ಆಚರಣೆಗಳು, ಕಿಂದರಿ ಜೋಗಿ ಮೊದಲಾದವುಗಳು ನಮ್ಮ ಕಣ್ಣ ಮುಂದೆಯೇ ನಮ್ಮಿಂದ ದೂರ ಸರಿಯುತ್ತಿರುವುದು ವಿಷಾದನೀಯ. ನಾವು ಸದ್ಯ ಅತ್ಯಂತ ಸಂದಿಗ್ಧ ಕಾಲಘಟ್ಟದಲ್ಲಿದ್ದೇವೆ. ನಮ್ಮ ಸಂಸ್ಕೃತಿಯೊಂದಿಗೆ ಕಲೆ, ಜನಪದ ಹಾಗೂ ಧಾರ್ಮಿಕ ಆಚರಣೆಗಳನ್ನು ಉಳಿಸಿ ಬೆಳೆಸುವ ಕೆಲಸಗಳು ಆಗಬೇಕಿದೆ. ಅದಕ್ಕೆ ಪೂರಕ ಎಂಬಂತೆ ಹೊರನಾಡ ಕನ್ನಡಿಗರಾದ ನೀವೆಲ್ಲ ಒಗ್ಗೂಡಿ ನಮ್ಮ ಕಲೆ-ಸಂಸ್ಕೃತಿ ವಿವಿಧ ಆಚರಣೆಗಳನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯಲು ಇಂತಹ ಸಾಂಸ್ಕೃತಿಕ ಸಂಭ್ರಮದ ಮೂಲಕ ಪ್ರಯತ್ನಶೀಲರಾಗಿರುವುದು ಅಭಿನಂದನೀಯ ಎಂದು ಕಾರ್ಯಕ್ರಮದ ಉದ್ಘಾಟಕ ರಾಯಚೂರು ಆದಿಕವಿ ವಿಶ್ವವಿದ್ಯಾಲಯದ ಕುಲಪತಿ ಡಾ. ಶಿವಾನಂದ ಕೆಳಗಿನಮನೆ ಹೇಳಿದರು.

ಯುವ ಪೀಳಿಗೆಗೆ ನಮ್ಮ ಸಂಸ್ಕೃತಿ ಹಾಗೂ ಜೀವನ ಮೌಲ್ಯದ ಬಗ್ಗೆ ತಿಳಿಯಪಡಿಸುವ ಅಗತ್ಯವಿದೆ - ಶ್ರೀನಿವಾಸ ಎನ್. ಉಡುಪ



ನಮ್ಮ ಸಂಸ್ಕೃತಿಯೇ ನಮಗೆ ಜೀವಾಳ. ನಮ್ಮ ಭಾಷೆ ಹಾಗೂ ಸಂಸ್ಕೃತಿಗೆ ಅವಿನಾಭಾವ ಸಂಬಂಧವಿದೆ. ನಮ್ಮ ಭಾಷೆ ಉಳಿದರೆ ಅದರೊಟ್ಟಿಗೆ ಸಂಸ್ಕೃತಿಯೂ ಉಳಿದು ಬೆಳೆಯುತ್ತದೆ. ಇಂದಿನ ಆಧುನಿಕ ಯಾಂತ್ರಿಕ, ಆಧುನಿಕ ಯುಗದಲ್ಲಿ ಯುವ ಜನತೆ ಎಳೆಯ ಪ್ರಾಯದಲ್ಲಿಯೇ ತಮ್ಮ ಜೀವನ ಉತ್ಸಾಹವನ್ನು ಕಳೆದುಕೊಳ್ಳುತ್ತಿದ್ದಾರೆ. ಸಂಸ್ಕೃತಿ-ಸಂಸ್ಕಾರದ ಕೊರತೆಯಿಂದ ದಾರಿ ತಪ್ಪಿ ತಮ್ಮ ಜೀವನವನ್ನೇ ಹಾಳು ಮಾಡುತ್ತಿದ್ದಾರೆ. ಮಕ್ಕಳು ಸನ್ಮಾರ್ಗದಲ್ಲಿ ನಡೆಯುವಂತಾಗಬೇಕು. ಹಾಗಾಗಿ ಯುವ ಪೀಳಿಗೆಗೆ ನಮ್ಮ ಸಂಸ್ಕೃತಿ ಹಾಗೂ ಜೀವನ ಮೌಲ್ಯದ ಬಗ್ಗೆ ತಿಳಿಯಪಡಿಸುವ ಅಗತ್ಯವಿದೆ. ಆ ನಿಟ್ಟಿನಲ್ಲಿ ಕರ್ನಾಟಕ ಸಂಘ ಅಂಧೇರಿಯ ಸಮಾಜ ಸೇವೆ ಹಾಗೂ ನಮ್ಮ ಕಲೆ-ಸಂಸ್ಕೃತಿ ಉಳಿದು ಬೆಳೆಯಲು ಮಾಡುತ್ತಿರುವ ವಿಭಿನ್ನ ಚಟುವಟಿಕೆಗಳು ಶ್ಲಾಘನೀಯವಾದುದು. ಈ ಸಂಘ ಉತ್ತರೋತ್ತರ ಅಭಿವೃದ್ಧಿ ಕಾಣಲಿ ಎಂದು ಶ್ರೀ ಉಮಾಮಹೇಶ್ವರಿ ದೇವಸ್ಥಾನ ಜರಿಮೆರಿಯ ಪ್ರಧಾನ ಅರ್ಚಕ ಎಸ್. ಎನ್. ಉಡುಪ ನುಡಿದರು.


ಡಾ. ಅಶೋಕ್ ನರೋಡೆ ಅವರನ್ನು ಗೌರವಿಸಿದಾಗ.


ರಾಜಶೇಖರ ಕರಾಡ್ಕರ್ ಅವರನ್ನು ಗೌರವಿಸಿದಾಗ.

ಬಂಟರ ಸಂಘ ಮುಂಬಯಿ : ವಸ್ಯಾ-ಡಹಾಣು ಪ್ರಾದೇಶಿಕ ಸಮಿತಿಯ ಆಶ್ರಯದಲ್ಲಿ ಶಿಕ್ಷಣ ಹಾಗೂ ಸಮಾಜ ಕಲ್ಯಾಣ ಸಮಿತಿಯಿಂದ ಆರ್ಥಿಕ ಸಹಾಯ

ಸಂಘದ ಚಟುವಟಿಕೆಗಳ ಬಗ್ಗೆ ಪಾಲಕರು ಮಕ್ಕಳಿಗೆ ಅರಿವು ಮೂಡಿಸುವಂತಾಗಬೇಕು - ಪ್ರವೀಣ್ ಭೋಜ ಶೆಟ್ಟಿ



ಬಂಟರ ಸಂಘ ಮುಂಬಯಿಯ ವಸ್ಯಾ-ಡಹಾಣು ಪ್ರಾದೇಶಿಕ ಸಮಿತಿಯ ಆಶ್ರಯದಲ್ಲಿ ಶಿಕ್ಷಣ ಹಾಗೂ ಸಮಾಜ ಕಲ್ಯಾಣ ಸಮಿತಿಯಿಂದ ನಡೆದ ಆರ್ಥಿಕ ನೆರವು ಕಾರ್ಯಕ್ರಮದ ಉದ್ಘಾಟನೆ



ಲಲಿತಾ ಜಯಕರ ಶೆಟ್ಟಿ ವಿರಾರ್ ಅವರನ್ನು ಸನ್ಮಾನಿಸಿದಾಗ



ಸುನಂದಾ ರತ್ನಾಕರ ಶೆಟ್ಟಿ, ದಂಪತಿಯನ್ನು ಸನ್ಮಾನಿಸಿದಾಗ


ಅಧಿಕ ಅಂಕ ಗಳಿಸಿದ ಸಮಾಜದ ವಿದ್ಯಾರ್ಥಿಗಳಿಗೆ ಗೌರವ


ಜಯ ಅಶೋಕ ಶೆಟ್ಟಿ ಅವರನ್ನು ಗೌರವಿಸಿದಾಗ.

(ಚಿತ್ರ, ವರದಿ : ದಿನೇಶ್ ಕುಲಾಲ್)

ನಾಲಾಸೋಪಾರ, ಜೂ. 29- ಮಕ್ಕಳು ಬಂಟರ ಸಂಘದ ಚಟುವಟಿಕೆಗಳಲ್ಲಿ ಯಾವಾಗಲೂ ಭಾಗವಹಿಸಲು ಅಥವಾ ಉಪಸ್ಥಿತರಿರಲು ಸಾಧ್ಯವಾಗದೇ ಇದ್ದಲ್ಲಿ ಮಕ್ಕಳಿಗೆ ಅವರ ಹಿರಿಯರು ಯಾ ತಂದೆ-ತಾಯಂದಿರು ಶಿಕ್ಷಣದ ಜೊತೆಗೆ ಬಂಟರ ಸಂಘದ ಚಟುವಟಿಕೆಗಳ ಬಗ್ಗೆ ಮಾಹಿತಿಯಿತ್ತಲ್ಲಿ ಮುಂದೆ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸಂಘದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಮತ್ತು ಸಂಘಕ್ಕೆ ಸಹಾಯ ನೀಡಲು ಸಾಧ್ಯ ಎಂದು ಶತಮಾನದತ್ತ ಸಾಗುತ್ತಿರುವ ಬಂಟರ ಸಂಘ ಮುಂಬಯಿಯ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿ ನುಡಿದರು.

ಜೂ. 28ರ ಆದಿತ್ಯವಾರದಂದು ನಾಲಾಸೋಪಾರ ಪಶ್ಚಿಮ ಗ್ಯಾಲಾಕ್ಸಿ ಹೋಟೆಲಿನ ಸಭಾಗೃಹದಲ್ಲಿ ಬಂಟರ ಸಂಘ ಮುಂಬಯಿಯ ವಸ್ಯಾ-ಡಹಾಣು ಪ್ರಾದೇಶಿಕ ಸಮಿತಿಯ ಆಶ್ರಯದಲ್ಲಿ ಶಿಕ್ಷಣ ಹಾಗೂ ಸಮಾಜ ಕಲ್ಯಾಣ ಸಮಿತಿಯಿಂದ ನಡೆದ ಸಮಾಜದಲ್ಲಿನ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ, ವಿಧವೆಯರಿಗೆ ಹಾಗೂ ಪ್ರಾದೇಶಿಕ ಸಮಿತಿಯ ವ್ಯಾಪ್ತಿಯಲ್ಲಿ ಹತ್ತು ಹಾಗೂ ಹನ್ನೆರಡನೆಯ ತರಗತಿಯಲ್ಲಿ ಅಧಿಕ ಅಂಕ ಗಳಿಸಿದ ಪರಿಸರದಲ್ಲಿರುವ ಸಮಾಜದ ವಿದ್ಯಾರ್ಥಿಗಳನ್ನು ಗೌರವಿಸುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅವರು, ಪ್ರತಿಯೊಂದು ಪ್ರಾದೇಶಿಕ ಸಮಿತಿಯು ನೂರು ಮಕ್ಕಳನ್ನು ಶೈಕ್ಷಣಿಕ ದತ್ತು ಪಡೆಯುವ ಯೋಜನೆಯಡಿ ಒಳಗೊಳ್ಳುವ ಮೂಲಕ ಹತ್ತು ವರ್ಷಗಳ ನಂತರ ಹತ್ತು ಸಾವಿರಕ್ಕೂ ಅಧಿಕ ಮಕ್ಕಳ ದತ್ತು ಪಡೆದಂತಾಗುವುದು. ಪ್ರಾದೇಶಿಕ ಸಮಿತಿಗಳಿಂದಾಗಿ ಬಂಟರ ಸಂಘ ಮುಂಬಯಿಗೆ ಉತ್ತಮ ಹೆಸರಿದೆ. ಸಂಘದ ನಮ್ಮ ಹಿರಿಯರು ಶಿಕ್ಷಣಕ್ಕೆ ಮಹತ್ವ ನೀಡಿದ್ದು ಅದು ಈಗ ಪ್ರಯೋಜನಕಾರಿಯಾಗಿದೆ. ನಮ್ಮವರ ನಿಸ್ವಾರ್ಥ ಸೇವೆಯಿಂದ ಇದೆಲ್ಲ ಸಾಧ್ಯ ಎಂದರು.

ಶಿಕ್ಷಣ ಹಾಗೂ ಸಮಾಜ ಕಲ್ಯಾಣ ಸಮಿತಿಯ ಕಾರ್ಯಾಧ್ಯಕ್ಷ ಇಂದ್ರಾಳಿ ದಿವಾಕರ ಶೆಟ್ಟಿ ಮತ್ತವರ ತಂಡವು ಪ್ರಾದೇಶಿಕ ಸಮಿತಿ ಹಾಗೂ ಸಮಿತಿಯ ಶಿಕ್ಷಣ ಹಾಗೂ ಸಮಾಜ ಕಲ್ಯಾಣ ಸಮಿತಿಗೆ 22 ಲಕ್ಷಕ್ಕೂ ಅಧಿಕ ಮೊತ್ತದ ಚೆಕ್ಕನ್ನು ಹೊಂದಿದ ನಿಧಿಯನ್ನು ಹಸ್ತಾಂತರಿಸಿದರು.

ಪ್ರಾದೇಶಿಕ ಸಮಿತಿಯ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಮಿತಿಯ ಕಾರ್ಯಾಧ್ಯಕ್ಷೆ ಜಯ ಅಶೋಕ್ ಶೆಟ್ಟಿ ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, ನಾನು ಪ್ರಾದೇಶಿಕ ಸಮಿತಿಯಲ್ಲಿ ಸುಧೀರ್ಘ ಕಾಲದಿಂದ ಕಾರ್ಯ ನಿರ್ವಹಿಸುತ್ತಿದ್ದು ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಮಿತಿಯಲ್ಲಿ ಕಾರ್ಯ ನಿರ್ವಹಿಸಿ ಸಿಕ್ಕಿದ ಸಂತೋಷ ಇತರ ಸಮಿತಿಯಲ್ಲಿ ಸಿಕ್ಕಿಲ್ಲ. ಸಮಿತಿಗೆ ವಿವಿಧ ರೀತಿಯಲ್ಲಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತಾ, ಪ್ರಾದೇಶಿಕ ಸಮಿತಿಯಲ್ಲಿನ ಸಮಾಜ ಬಾಂಧವರು ತಮ್ಮ ಪರಿವಾರದವರ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದರೊಂದಿಗೆ ಅಗತ್ಯ ಬಂದಲ್ಲಿ ಸಂಘದ ಸಹಾಯ ಪಡೆಯಲು ಹಿಂಜರಿಯಬಾರದು ಎಂದರು.

ಹಿರಿಯ ನಾಗರಿಕರಾದ ಸುನಂದಾ ರತ್ನಾಕರ ಶೆಟ್ಟಿ ದಂಪತಿ ಮತ್ತು ಲಲಿತಾ ಜಯಕರ ಶೆಟ್ಟಿ ವಿರಾರ್ ಅವರನ್ನು ಸಂಘದ ಹಿರಿಯ ನಾಗರಿಕ ಸಮಿತಿಯ ವತಿಯಿಂದ ಕೃಷ್ಣ ಶೆಟ್ಟಿ ಮತ್ತು ಡಾ। ಪ್ರಭಾಕರ ಶೆಟ್ಟಿ ಬೋಳ ನೇತೃತ್ವದಲ್ಲಿ ಸನ್ಮಾನಿಸಲಾಯಿತು.

ಪ್ರಾದೇಶಿಕ ಸಮಿತಿಯ ವ್ಯಾಪ್ತಿಯಲ್ಲಿ ಹತ್ತು ಹಾಗೂ ಹನ್ನೆರಡನೆಯ ತರಗತಿಯಲ್ಲಿ ಶೇಕಡಾ ಅಧಿಕ ಅಂಕ ಗಳಿಸಿದ ಪರಿಸರದ ಸಮಾಜದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ವೃತ್ತಿಪರ ಶಿಕ್ಷಣದಲ್ಲಿ ಯಶಸ್ಸು ಗಳಿಸಿದ ಏಳು ಮಂದಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು ಹಾಗೂ ಸಿಎ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿ ಒಬ್ಬಳಿಗೆ ಸಂಘದ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿ ಒಂದು ಲಕ್ಷ ರೂಪಾಯಿ ನೀಡಿ ಆಶೀರ್ವದಿಸಿದರು.

ವೇದಿಕೆಯಲ್ಲಿದ್ದ ಗಣ್ಯರು ದೀಪ ಪ್ರಜ್ವಲಿಸಿ ಕಾರ್ಯಕ್ರಮಕ್ಕೆ ಚಾಲನೆಯಿತ್ತರು.

ಆರಂಭದಲ್ಲಿ ಬಂಟರ ಸಂಘ ರಮಾನಾಥ ಪಯ್ಯಡೆ ಹೋಟೆಲು ಮ್ಯಾನೇಜ್‌ಮೆಂಟ್ ಇದರ ವಿಶಾಲ್ ಕನೋಜ ಹೋಟೆಲು ಮ್ಯಾನೇಜ್‌ಮೆಂಟ್ ಬಗ್ಗೆ ಮಾತನಾಡುತ್ತಾ, ಬಂಟ ಸಮಾಜದ ಮಕ್ಕಳು ಇದರ ಪ್ರಯೋಜನ ಪಡೆಯಲು ವಿನಂತಿಸಿದರು. ಈ ಬಗ್ಗೆ ವಿಡಿಯೋ ಕ್ಲಿಪ್‌ನ್ನು ಪ್ರದರ್ಶಿಸಲಾಯಿತು.

ವೇದಿಕೆಯಲ್ಲಿ ಬಂಟರ ಸಂಘ ಮುಂಬಯಿಯ ಜೊತೆ ಕಾರ್ಯದರ್ಶಿ ಗಿರೀಶ್ ಶೆಟ್ಟಿ ತೆಳ್ಳಾರ್, ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಮಿತಿಯ ಉಪ ಕಾರ್ಯಾಧ್ಯಕ್ಷ ಸುಬ್ಬಯ ಎ. ಶೆಟ್ಟಿ, ಕೋಶಾಧಿಕಾರಿ ಜಯಪ್ರಕಾಶ್ ಶೆಟ್ಟಿ, ಪ್ರಾದೇಶಿಕ ಸಮಿತಿಯ ಸಲಹಾ ಸಮಿತಿಯ ಕಾರ್ಯಾಧ್ಯಕ್ಷ ಹರೀಶ್ ಶೆಟ್ಟಿ ಗುರ್ಮೆ, ಪ್ರಾದೇಶಿಕ ಸಮಿತಿಯ ಉಪ ಕಾರ್ಯಾಧ್ಯಕ್ಷ ಪ್ರವೀಣ್ ಶೆಟ್ಟಿ ಕಣಂಜಾರು, ಕೋಶಾಧಿಕಾರಿ ವಿಜಯ್ ಎಂ. ಶೆಟ್ಟಿ, ಜೊತೆ ಕಾರ್ಯದರ್ಶಿ ನಾರಾಯಣ ಎಂ. ಶೆಟ್ಟಿ, ಜೊತೆ ಕೋಶಾಧಿಕಾರಿ ರತೀಶ್ ಶೆಟ್ಟಿ, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಅರುಣಾ ಶೆಟ್ಟಿ, ಯುವ ವಿಭಾಗದ ಕಾರ್ಯಾಧ್ಯಕ್ಷೆ ವರ್ಷಾ ಎಸ್. ಶೆಟ್ಟಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ದಿವಾಕರ್ ಶೆಟ್ಟಿ ಇಂದ್ರಾಳಿ, ಪ್ರಾದೇಶಿಕ ಸಮಿತಿಯ ಜಯ ಅಶೋಕ ಶೆಟ್ಟಿಯವರನ್ನು ಗೌರವಿಸಲಾಯಿತು. ವಿಜಯ ಶೆಟ್ಟಿ ಕುಕ್ಕೆತ್ತೂರು ಕಾರ್ಯಕ್ರಮವನ್ನು ನಿರೂಪಿಸಿದರು.

ಮಹಿಳಾ ವಿಭಾಗದಿಂದ ಭಜನೆ, ಮಕ್ಕಳಿಂದ ನೃತ್ಯ ಹಾಗೂ ಸಂಗೀತ ಕಾರ್ಯಕ್ರಮ ನಡೆಯಿತು. ಪ್ರಾದೇಶಿಕ ಸಮಿತಿಯ ಕಾರ್ಯದರ್ಶಿ ಜಗನ್ನಾಥ್ ಶೆಟ್ಟಿ ಪಳ್ಳಿ ವಂದನಾರ್ಪಣೆ ಮಾಡಿದರು. ಬಂಟ ಗೀತೆಯ ಬಳಿಕ ಲೀಲಾವತಿ ಆಳ್ವ ಪ್ರಾರ್ಥನೆ ಮಾಡಿದರು. ಶಶಿಧರ ಶೆಟ್ಟಿ ಇನ್ನಂಜೆಯವರಿಂದ ಬೆಳಗ್ಗಿನ ಉಪಹಾರ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಗಿತ್ತು.

ಮೀರಾ-ಭಾಯಂದರ್ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ರವೀಂದ್ರ ಶೆಟ್ಟಿ ಕೊಟ್ರಪ್ಪಾಡಿ ಉಪಸ್ಥಿತರಿದ್ದರು. ಎರ್ಮಾಳ್ ಸುಭಾಷ್ ಶೆಟ್ಟಿ, ಸುಪ್ರೀತ್ ಶೆಟ್ಟಿ ನೀರೆ, ನವೀನ್ ಶೆಟ್ಟಿ ಪಳ್ಳಿ, ಸುರೇಂದ್ರ ಶೆಟ್ಟಿ ಗ್ಯಾಲಕ್ಸಿ, ಧರ್ಮೇಂದ್ರ ಶೆಟ್ಟಿ ಗ್ಯಾಲಕ್ಸಿ, ಅಶೋಕ್ ಶೆಟ್ಟಿ ಸಾಯಿಕೃಪಾ ಮತ್ತಿತರರು ಸಹಕರಿಸಿದರು.

ಸಂಘದ ಕಾರ್ಯಕ್ರಮಗಳಲ್ಲಿ ಯುವ ಸಮುದಾಯ ಸೇರಿಕೊಂಡಾಗ ಸೇವಾಕಾರ್ಯಗಳು ಇನ್ನಷ್ಟು ಬಂಧುಗಳಿಗೆ ತಲುಪಲು ಸಾಧ್ಯವಾಗುತ್ತದೆ - ಮಂಜುನಾಥ ಶೆಟ್ಟಿ ಕೊಡ್ಲಾಡಿ

ವಸ್ಯಾ-ಡಹಾಣು ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ಮಂಜುನಾಥ ಶೆಟ್ಟಿ ಕೊಡ್ಲಾಡಿ ಸ್ವಾಗತಿಸುತ್ತಾ, ಬಂಟರ ಸಂಘ ಮುಂಬಯಿಯ ಎಲ್ಲಾ ಕಾರ್ಯಕ್ರಮಗಳಲ್ಲಿ ಶಿಕ್ಷಣ ಹಾಗೂ ಸಮಾಜ ಕಲ್ಯಾಣ ಸಮಿತಿಯ ಕಾರ್ಯಕ್ರಮವು ಉತ್ತಮ ಕಾರ್ಯಕ್ರಮವಾಗಿದ್ದು ಸಂಘದ ಅಧ್ಯಕ್ಷರ ಮಾರ್ಗದರ್ಶನವು ನಮ್ಮ ಪ್ರತಿಯೊಂದು ಕಾರ್ಯಕ್ರಮಗಳ ಯಸಸ್ಸಿಗೆ ಸಹಕಾರಿಯಾಗುತ್ತಿದೆ ಎನ್ನುತ್ತಾ ಎಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದನೆಗಳು. ಸಂಘದ ಎಲ್ಲಾ ಕಾರ್ಯಕ್ರಮಗಳಲ್ಲಿ ಪಾಲಕರೊಂದಿಗೆ ಮಕ್ಕಳು ಪಾಲ್ಗೊಳ್ಳಬೇಕು. ಸಂಘದ ಕಾರ್ಯಕ್ರಮಗಳಲ್ಲಿ ಯುವ ಸಮುದಾಯ ಸೇರಿಕೊಂಡಾಗ ಸೇವಾಕಾರ್ಯಗಳು ಇನ್ನಷ್ಟು ಬಂಧುಗಳಿಗೆ ತಲುಪಲು ಸಾಧ್ಯವಾಗುತ್ತದೆ ಎಂದು ನುಡಿದರು

ಬಂಟ ಸಮಾಜದ ಉನ್ನತ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಉದ್ಯೋಗ ವಂಚಿತರಾಗದಂತೆ ನೋಡಿಕೊಳ್ಳುತ್ತೇವೆ - ಡಾ. ಆರ್. ಕೆ. ಶೆಟ್ಟಿ

ಬಂಟರ ಸಂಘ ಮುಂಬಯಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ಆರ್. ಕೆ. ಶೆಟ್ಟಿ ಸಂಜೀವಿನಿ ಟ್ರಸ್ಟ್ ಕುರಿತು ಮಾತನಾಡುತ್ತಾ, ಈ ಯೋಜನೆಯ ಮೂಲಕ ನಮ್ಮ ಸಮಾಜದ ನೂರಾರು ಮಕ್ಕಳು ಈಗಾಗಲೇ ಪ್ರಯೋಜನ ಪಡೆದಿದ್ದಾರೆ. ಆದರೆ ವಸ್ಯಾ-ಡಹಾಣು ಪ್ರಾದೇಶಿಕ ವ್ಯಾಪ್ತಿಯಲ್ಲಿ ಕೆಲವೇ ಮಂದಿ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದಿರುವುದು ವಿಷಾದನೀಯ. ಈ ಯೋಜನೆಯಲ್ಲಿ ತರಬೇತಿ ಪೂರ್ಣಗೊಳಿಸಿದ ನಂತರ ವಿದ್ಯಾರ್ಥಿಗಳ ವಿದ್ಯಾರ್ಹತೆಗೆ ಅನುಗುಣವಾಗಿ ಟಾಟಾ ಸಂಸ್ಥೆಯ ಸಹಯೋಗದಲ್ಲಿ ಉದ್ಯೋಗಾವಕಾಶಗಳೂ ಲಭ್ಯವಾಗುತ್ತವೆ. ಅತಿ ಕಡಿಮೆ ಶುಲ್ಕದಲ್ಲಿ ಈ ಯೋಜನೆಗೆ ಪ್ರವೇಶ ಪಡೆಯಬಹುದಾಗಿದ್ದು, ಒಂದು ವೇಳೆ ಶುಲ್ಕ ಪಾವತಿಸಲು ಅಸಾಧ್ಯವಾದರೆ, ಅದರ ವ್ಯವಸ್ಥೆ ಮಾಡಲು ನಾನು ವೈಯಕ್ತಿಕವಾಗಿ ಪ್ರಯತ್ನಿಸುವೆ ಎಂದರು.



ಸಂಘದಿಂದ ಸಹಾಯ ಪಡೆಯುವವರ ಸಂಖ್ಯೆ ಕಡಿಮೆಯಾಗುತ್ತಿದೆ ಇದು ಅಭಿಮಾನ - ಇಂದ್ರಾಳಿ ದಿವಾಕರ ಶೆಟ್ಟಿ

ಸಂಘದ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಮಿತಿಯ ಕಾರ್ಯಾಧ್ಯಕ್ಷ ಇಂದ್ರಾಳಿ ದಿವಾಕರ ಶೆಟ್ಟಿ ಮಾತನಾಡುತ್ತಾ, ಪ್ರವೀಣ್ ಭೋಜ ಶೆಟ್ಟಿ ಅಧ್ಯಕ್ಷೀಯ ಅವಧಿಯಲ್ಲಿ ನನಗೆ ಈ ಜವಾಬ್ದಾರಿ ಸಿಕ್ಕಿದ್ದು ನನ್ನ ಭಾಗ್ಯ. ಅಗತ್ಯವಿದ್ದವರು ಅಂಜಿಕೆ ಮರೆತು ಸಂಘದಿಂದ ಸಹಾಯ ಪಡೆಯಬೇಕು. ಸಹಾಯದ ಮೊತ್ತವೂ ಹೆಚ್ಚಾಗುತ್ತಿದೆ. ಇದೀಗ ನಮ್ಮ ಸಮಾಜದಲ್ಲಿ ಮಕ್ಕಳಿಗೆ ಅನುಕೂಲತೆಯ ಕೊರತೆಯಿಲ್ಲದಿದ್ದು ಸಂಘದಿಂದ ಸಹಾಯ ಪಡೆಯುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಇದು ಸಮಾಜದ ಅಭಿವೃದ್ಧಿಯ ಉತ್ತಮ ಸೂಚಕವಾಗಿದೆ. ಉತ್ತಮ ಶಿಕ್ಷಣ ವಿದ್ಯಾರ್ಥಿಗಳು ಪಡೆಯಬೇಕು. ನಮ್ಮ ಬದುಕಿನಲ್ಲಿ ಶಿಕ್ಷಣ ಒಂದಿದ್ದರೆ ಎಲ್ಲಾ ರೀತಿಯ ಯಶಸ್ವಿಯನ್ನು ಪಡೆಯಬಹುದು ಎಂದರು.

ಯುವ ಜನಾಂಗಕ್ಕೆ ಉತ್ತಮ ಸಂಸ್ಕಾರವನ್ನು ನೀಡಿ ತಪ್ಪು ದಾರಿಯತ್ತ ಹೋಗದಂತೆ ನಿಯಂತ್ರಿಸುವುದು ನಮ್ಮೆಲ್ಲರ ಕರ್ತವ್ಯ - ಶಶಿಧರ ಕೆ. ಶೆಟ್ಟಿ ಇನ್ನಂಜೆ

ಬಂಟರ ಸಂಘ ಮುಂಬಯಿಯ ಜೊತೆ ಕೋಶಾಧಿಕಾರಿ ಶಶಿಧರ ಕೆ. ಶೆಟ್ಟಿ ಇನ್ನಂಜೆ ಮಾತನಾಡುತ್ತಾ, ಬಂಟರ ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ಇಂದಿನ ಮಕ್ಕಳಿಗೆ ತಿಳಿಯುವ ಅವಸ್ಯಕತೆ ಇದೆ. ಆಗಾಗ ಕೇಳಿ ಬರುತ್ತಿರುವ ಮತಾಂತರದ ಬಗ್ಗೆಯೂ ನಾವು ನಮ್ಮ ಯುವ ಜನಾಂಗದಲ್ಲಿ ಜಾಗೃತಿ ಮೂಡಿಸುವ ಬಗ್ಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಿದ್ದು ಸಮಯಾವಕಾಶ ಸಿಕ್ಕಿದಾಗ ಅದನ್ನು ನಡೆಸಲಿದ್ದೇನೆ. ನಮ್ಮ ಸಂಘದಿಂದ ಹಿಂದೆ ನೂರು ರೂಪಾಯಿ ಪಡೆದು ಇದೀಗ ದೊಡ್ಡ ಮಟ್ಟದ ಉದ್ಯಮಿಗಳಾಗಿದ್ದು ಸಂಘಕ್ಕೆ ಸಹಕರಿಸುತ್ತಿದ್ದು ಅಭಿನಂದನೀಯ. ಯುವ ಜನಾಂಗಕ್ಕೆ ಉತ್ತಮ ಸಂಸ್ಕಾರವನ್ನು ನೀಡಿ ತಪ್ಪು ದಾರಿಯತ್ತ ಹೋಗದಂತೆ ನಿಯಂತ್ರಿಸುವುದು ನಮ್ಮೆಲ್ಲರ ಕರ್ತವ್ಯ ಎಂದರು.

ಅಪರಾಧಿಗೆ 60 ದಿನದಲ್ಲಿ ತ್ರಿವಳಿ ಮರಣದಂಡನೆ ಮೂಲಕ ನ್ಯಾಯಾಲಯದಿಂದ 'ಹೊಸ ಮಾನದಂಡ' ; ಫಡ್ನವೀಸ್

ಮುಂಬಯಿ, ಜೂ.29 - ನಸ್ರಾಪುರ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ವಿಶೇಷ ನ್ಯಾಯಾಲಯದ ತೀರ್ಪನ್ನು ತ್ವರಿತ ನ್ಯಾಯದಲ್ಲಿ 'ಹೊಸ ಮಾನದಂಡ' ಎಂದು ಶ್ಲಾಘಿಸಿದ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು, ಅಪರಾಧ ನಡೆದ 60 ದಿನಗಳಲ್ಲಿ ಅಪರಾಧಿಗೆ ತ್ರಿವಳಿ ಮರಣದಂಡನೆ ವಿಧಿಸಲಾಗಿದೆ ಎಂದು ಹೇಳಿದರು.

ಘಟನೆಯ 55ನೇ ದಿನವಾದ ಜೂ.25 ರಂದು ಆರೋಪಿಯನ್ನು ತಪ್ಪಿತಸ್ಥನೆಂದು ಘೋಷಿಸಲಾಗಿದೆ ಮತ್ತು 55 ಸಾಕ್ಷಿಗಳ ವಿಚಾರಣೆ ಹಾಗೂ ಎಲ್ಲಾ ಕಾನೂನು ಕಾರ್ಯವಿಧಾನಗಳನ್ನು ಪೂರ್ಣಗೊಳಿಸಿದ ಮೇಲೆ ಸೋಮವಾರ ಮರಣದಂಡನೆ ವಿಧಿಸಲಾಗಿದೆ ಎಂದು ಅವರು ಮಹಾರಾಷ್ಟ್ರ ವಿಧಾನಸಭೆಯಲ್ಲಿ ನೀಡಿದ ಹೇಳಿಕೆಯಲ್ಲಿ ತಿಳಿಸಿದರು.

ಸದನದಲ್ಲಿ ಮಾತನಾಡಿದ ಗೃಹ ಸಚಿವಾಲಯದ ಮುಖ್ಯಸ್ಥರೂ ಆಗಿರುವ ಫಡ್ನವೀಸ್, ನ್ಯಾಯಾಲಯವು ಹೊಸ ಉದಾಹರಣೆಯನ್ನು ನೀಡಿದೆ ಎಂದು ನಾನು ನಂಬುತ್ತೇನೆ. ಇಂತಹ ಕ್ರೂರ ಅಪರಾಧಿಗಳ ವಿರುದ್ಧ ನಾವು ಪ್ರತಿಬಂಧಕವನ್ನು ಸೃಷ್ಟಿಸಲು ಬಯಸಿದರೆ, ನ್ಯಾಯವನ್ನು ಸಮಯಕ್ಕೆ ಸರಿಯಾಗಿ ನೀಡಬೇಕು ಎಂದು ಹೇಳಿದರು.

ನಿರಂತರ ವಿಚಾರಣೆಗಳನ್ನು ನಡೆಸಿದ್ದಕ್ಕಾಗಿ ಮತ್ತು ಪ್ರಕರಣವನ್ನು ತ್ವರಿತವಾಗಿ ಮುಕ್ತಾಯಗೊಳಿಸುವಂತೆ ಖಚಿತಪಡಿಸಿಕೊಳ್ಳಲು ರಜಾದಿನಗಳನ್ನು ರದ್ದುಗೊಳಿಸಿದ್ದಕ್ಕಾಗಿ ನ್ಯಾಯಾಂಗಕ್ಕೆ, ವಿಶೇಷವಾಗಿ ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶ ನ್ಯಾಯಮೂರ್ತಿ ಸಾಲುಂಖೆಗೆ ಮುಖ್ಯಮಂತ್ರಿ ಧನ್ಯವಾದ ಅರ್ಪಿಸಿದರು.

ಆರೋಪಪಟ್ಟಿಯ ತನಿಖೆ ಮತ್ತು ಸಲ್ಲಿಕೆ ಪೊಲೀಸರ ಜವಾಬ್ದಾರಿಯಾಗಿದ್ದರೂ, ಬಳಿಕದ ಸಮಯವು ಹೆಚ್ಚಾಗಿ ನ್ಯಾಯಾಂಗದ ಕೈಯಲ್ಲಿದೆ ಎಂದು ಅವರು ಹೇಳಿದರು.

ಪುಣೆ ಗ್ರಾಮೀಣ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಸಂದೀಪ್ ಸಿಂಗ್ ಗಿಲ್, ತನಿಖಾ ತಂಡ ಮತ್ತು ಭಾಗಿಯಾಗಿರುವ ಎಲ್ಲಾ ಅಧಿಕಾರಿಗಳನ್ನು ಸೂಕ್ಷ್ಮವಾಗಿ ಸಾಕ್ಷ್ಯಗಳನ್ನು ಸಂಗ್ರಹಿಸಿದ್ದಕ್ಕಾಗಿ ಫಡ್ನವೀಸ್ ಶ್ಲಾಘಿಸಿದರು.

ಎಲ್ಲಾ ಪಾಲುದಾರರು ತ್ವರಿತವಾಗಿ ಕೆಲಸ ಮಾಡಲು ನಿರ್ಧರಿಸಿದರೆ, ಘೋರ ಅಪರಾಧಗಳನ್ನು ಒಳಗೊಂಡ ಅಂತಹ ಪ್ರಕರಣಗಳು ಕೂಡ ಸುಮಾರು ಎರಡು ತಿಂಗಳೊಳಗೆ ಮರಣದಂಡನೆಯ ಹಂತವನ್ನು ತಲುಪಬಹುದು ಎಂದು ಪ್ರಕರಣವು ತೋರಿಸಿದೆ ಎಂದು ಫಡ್ನವೀಸ್ ಹೇಳಿದರು. ಬಲಿಪಶುವಿನ ಕುಟುಂಬದ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿದ ಅವರು, ಬಾಲಕಿಯ ಪೋಷಕರ ದುಃಖವನ್ನು ಏನೂ ಕಡಿಮೆ ಮಾಡಲು ಸಾಧ್ಯವಿಲ್ಲ, ಆದರೆ ನ್ಯಾಯಾಲಯವು ಅಪರಾಧಿಗೆ ಕಠಿಣ ಶಿಕ್ಷೆಯನ್ನು ನೀಡುವುದರಿಂದ ಅವರು ಸ್ವಲ್ಪ ತೃಪ್ತಿಯನ್ನು ಪಡೆಯುತ್ತಾರೆ ಎಂದು ತಿಳಿಸಿದರು.

ಭವಿಷ್ಯದಲ್ಲಿ ಇದೇ ರೀತಿಯ ಪ್ರಕರಣಗಳಲ್ಲಿ ತ್ವರಿತ ತನಿಖೆ ಮತ್ತು ವಿಚಾರಣೆಗೆ ಸರಕಾರ ಶ್ರಮಿಸುವುದನ್ನು ಮುಂದುವರಿಸುತ್ತದೆ. ನ್ಯಾಯಾಲಯದ ತೀರ್ಪಿನ ಬಗ್ಗೆ ಹೆಚ್ಚಿನ ಪ್ರತಿಕ್ರಿಯೆ ನೀಡುವುದು ಸೂಕ್ತವಲ್ಲ ಎಂದು ಅವರು ಹೇಳಿದರು.

ನವಿಮುಂಬಯಿ : ಜಯಂತಿ ಎಸ್. ಶೆಟ್ಟಿ ನಿಧನ



ನವಿಮುಂಬಯಿ, ಜೂ. 29- ಸಿಬಿಡಿ ಬೇಲಾಪುರ ಅಶ್ವಿತ್ ಹೋಟೆಲ್ ಮತ್ತು ಲಕ್ಷ್ಮೀ ಹೋಟೆಲ್‌ನ ಮಾಲಕ ತಿಂಬರ ಸಂಜೀವ ಎಸ್. ಶೆಟ್ಟಿಯವರ ಪತ್ನಿ, ಸಿಬಿಡಿ ಬೇಲಾಪುರ ಸೆಕ್ಟರ್-15ರ ಬೆಳ್ಳಿ ವಿಷ್ಟ ಬಿಲ್ಡಿಂಗ್ ಎ2/2ರ ನಿವಾಸಿ ಜಯಂತಿ ಸಂಜೀವ ಶೆಟ್ಟಿ (62) ಜೂನ್ 29ರ ಸೋಮವಾರದಂದು ನಿಧನರಾಗಿದ್ದಾರೆ.

ಮೂಲತಃ ಕಾಸರಗೋಡು ಉಪ್ಪಳ, ಮಂಗಲ್ಪಾಡಿ ತಿಂಬರ 'ಶ್ರೀಲಕ್ಷ್ಮಿ ನಿವಾಸ' ಕೊಡಿಬೈಲು ಬಾರಿಗೆಮನೆಯವರಾದ ಅವರು, ಮೂವರು ಪುತ್ರರಾದ ಅರುಣ್, ಅಜಿತ್, ಅಶ್ವಿತ್, ಸೊಸೆಯಂದಿರು, ಮೊಮ್ಮಕ್ಕಳು, ಕುಟುಂಬಿಕರು, ಹಿತೈಷಿಗಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಅವರ ಅಂತಿಮ ಯಾತ್ರೆಯಲ್ಲಿ ಬಂಟರ ಸಂಘದ ಉಪಾಧ್ಯಕ್ಷ ಮಹೇಶ್ ಎಸ್. ಶೆಟ್ಟಿ ಮತ್ತು ಬಂಟರ ಸಂಘದ ಪದಾಧಿಕಾರಿಗಳು, ಕನ್ಯಾನ ಸದಾಶಿವ ಶೆಟ್ಟಿ ಹೇರಂಬ, ಸುಪ್ರೀಂ ಹೆರಿಟೇಜ್ ಶಿವರಾಮ ಶೆಟ್ಟಿ, ಸಿಬಿಡಿ ಭಾಸ್ಕರ್ ಶೆಟ್ಟಿ, ವೈದೇಹಿ ಕರಿಯಣ್ಣ ಶೆಟ್ಟಿ, ಶಾಮ್ ಎಸ್. ಶೆಟ್ಟಿ ಶ್ವೇತಾ ಪ್ಯಾಲೇಸ್, ರತ್ನಾಕರ ಶೆಟ್ಟಿ ಮುಂಡ್ಕೂರು, ನವಿಮುಂಬಯಿ ಹೋಟೆಲ್ ಎಸೋಸಿಯನ್ ಅಧ್ಯಕ್ಷ ದಯಾನಂದ್ ಎಸ್. ಶೆಟ್ಟಿ ಮತ್ತು ಸರ್ವ ಪದಾಧಿಕಾರಿಗಳು, ರಾಜಕೀಯ ನೇತಾರರಾದ ಸಂತೋಷ್ ಶೆಟ್ಟಿ ನೆರೊಲ್, ಸುರೇಶ್ ಶೆಟ್ಟಿ ನೆರೊಲ್, ಸಂತೋಷ್ ಶೆಟ್ಟಿ ಪನ್ವೇಲ್ ಮತ್ತು ಗೋಪಾಲ್ ವೈ. ಶೆಟ್ಟಿ ಪರಿಚಯ್, ರಂಜನ್ ಶೆಟ್ಟಿ ಮುಂಬಯಿ ಪ್ಯಾಲೇಸ್, ರಾಜೇಂದ್ರ ಪ್ರಸಾದ್ ಮೂಡ, ಭಾಸ್ಕರ್ ಶೆಟ್ಟಿ ತಾಳಿಪಾಡಿಗುತ್ತು, ರವಿ ಆರ್. ಶೆಟ್ಟಿ ಅರುಣ್, ದಯಾನಂದ್ ಶೆಟ್ಟಿ, ಶಾಂತರಾಮ್ ಶೆಟ್ಟಿ ಸಂಧ್ಯಾ ರೆಸಿಡೆನ್ಸಿ, ಅಪ್ಪಣ್ಣ ಶೆಟ್ಟಿ ಪೊವ್ವಾ ಲಕ್ಷ್ಮೀ, ಹಾಲಾಡಿ ಆದರ್ಶ್ ಶೆಟ್ಟಿ ಮಾಲ್ವಣ್ ತಡ್ಕಾ, ರಮೇಶ್ ಶೆಟ್ಟಿ ಜಾರ್ಕಳ, ಹರೀಶ್ ಪಡುಬಿದ್ರಿ, ನವಿಮುಂಬಯಿ ಪ್ರಾದೇಶಿಕ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು, ಅಶೋಕ್ ಪಕ್ಕಳ, ಬಾಲಕೃಷ್ಣ ಶೆಟ್ಟಿ ಕಬಾನ, ಮಹೇಶ್ ಶಂಕರ್ ಶೆಟ್ಟಿ, ಅರುಣ್ ಶೆಟ್ಟಿ ಪ್ರಣಮ್, ಅರುಣ್ ಶೆಟ್ಟಿ ನಿಮಂತ್ರಣ್, ರಮೇಶ್ ಶೆಟ್ಟಿ ಮೀನಾಕ್ಷಿ, ಕಲಂಬೋಲಿ ಸದಾನಂದ ಶೆಟ್ಟಿ ಸನ್‌ರೈಸ್, ಬಾಲಚಂದ್ರ ರೈ ವರುಣ್, ಸದಾನಂದ ಶೆಟ್ಟಿ ಪನ್ವೇಲ್, ಸಂತೋಷ್ ಶೆಟ್ಟಿ ರಸ್ನಾ ಹಾಗೂ ನವಿಮುಂಬಯಿ ಪರಿಸರದ ಹೆಚ್ಚಿನ ಹೊಟೇಲಿಗರು, ಉದ್ಯಮಿಗಳು, ಬಂಧುಗಳು ಉಪಸ್ಥಿತರಿದ್ದು ಅಂತಿಮ ನಮನ ಸಲ್ಲಿಸಿದರು.

ಗುಡ್ಡೆಕೊಪ್ಲ : ಪುರಂದರಿ ಜಿ. ಕೋಟ್ಯಾನ್ ನಿಧನ



ಮಂಗಳೂರು, ಜೂ. 29- ಗುಡ್ಡೆಕೊಪ್ಲ ಮೊಗವೀರ ಸಂಘ ಮುಂಬಯಿಯ ಕಾರ್ಯದರ್ಶಿ ಗಿರೀಶ್ ಕರ್ಕೇರ ಮೀರಾರೋಡ್ ಅವರ ತಾಯಿ ಪುರಂದರಿ ಜಿ. ಕೋಟ್ಯಾನ್ (96) ಜೂ. 28ರ ಆದಿತ್ಯವಾರದಂದು ಗುಡ್ಡೆಕೊಪ್ಲ 'ಪುರಂದರಿ ನಿವಾಸ'ದಲ್ಲಿ ನಿಧನರಾದರು.

ಮೃತರು ಇಬ್ಬರು ಪುತ್ರಿಯರು, ಐದು ಮಂದಿ ಪುತ್ರರನ್ನು ಹಾಗೂ ಅಪಾರ-ಬಂಧುಗಳನ್ನು ಅಗಲಿದ್ದಾರೆ.

ಅವರ ನಿಧನಕ್ಕೆ ಗುಡ್ಡೆಕೊಪ್ಲ ಮೊಗವೀರ ಸಂಘ ಗುಡ್ಡೆಕೊಪ್ಲದ ಅಧ್ಯಕ್ಷ ಕೇಶವ ಕುಂದರ್, ಗುಡ್ಡೆಕೊಪ್ಲ ಶ್ರೀರಾಮ ಭಜನಾ ಮಂದಿರದ ಅಧ್ಯಕ್ಷ ಸುಧೀರ್ ಶ್ರೀಯಾನ್, ಗುಡ್ಡೆಕೊಪ್ಲ ಮಹಿಳಾ ಸಂಘದ ಅಧ್ಯಕ್ಷೆ ಪ್ರಭಿತಾ ಸಾಲ್ಯಾನ್, ಗುಡ್ಡೆಕೊಪ್ಲ ಮೊಗವೀರ ಸಂಘ ಮುಂಬಯಿ ಇದರ ಕೋಶಾಧಿಕಾರಿ ಪ್ರಕಾಶ್ ಕುಂದರ್, ರಾಯರ ಬಳಗ ಭಜನ ಮಂಡಳಿ ಮೀರಾರೋಡ್‌ನ ಅಧ್ಯಕ್ಷ ಪುರಂದರ ಶ್ರೀಯಾನ್, ಶ್ರೀ ಶನಿಮಹಾತ್ಮ ಪೂಜಾ ಮಿತ್ರ ಮಂಡಳಿ ಬೊರಿವಲಿಯ ಅಧ್ಯಕ್ಷ ಗೋವರ್ಧನ ಸುವರ್ಣ, ಶೆಟ್ಟಿ ಟೆಂಟ್ರಾಕ್ಷನ್ ಮುಂಬಯಿಯ ಮಾಲಕ ಜಗದೀಶ್ ಶೆಟ್ಟಿ ಶೋಕ ವ್ಯಕ್ತಪಡಿಸಿದ್ದಾರೆ.


ಮೂಲ್ಕಿ : ಲಲಿತಾ ನಾರಾಯಣ ಭಟ್ ನಿಧನ



ಮೂಲ್ಕಿ, ಜೂ. 29- ದಿ. ನಾರಾಯಣ ಭಟ್ ಅವರ ಪತ್ನಿ ಲಲಿತಾ ನಾರಾಯಣ ಭಟ್ (88) ಜೂ. 28ರ ಆದಿತ್ಯವಾರ ಸ್ವಗೃಹದಲ್ಲಿ ನಿಧನ ಹೊಂದಿದರು.

ಮೃತರು ಪುತ್ರ, ಇಬ್ಬರು ಪುತ್ರಿಯರನ್ನು, ಸೊಸೆ, ಅಳಿಯಂದಿರು, ಮೊಮ್ಮಗಳು, ಮರಿಮಗಳು ಹಾಗೂ ಅಪಾರ ಬಂಧು-ಬಾಂಧವರನ್ನು ಅಗಲಿರುವರು.

ಕುರ್ಲಾ: ಜಯರಾಮ ಎಂ ಶೆಟ್ಟಿ ನಿಧನ



ಮುಂಬಯಿ, ಜೂ.29- ಕುರ್ಲಾ ನೆಹರೂ ನಗರ ನಿವಾಸಿ ಉದ್ಯಮಿ ಜಯರಾಮ ಎಂ ಶೆಟ್ಟಿ(75) ಅವರು ಸ್ವಗೃಹದಲ್ಲಿ ಜೂ.27 ರಂದು ನಿಧನರಾದರು.

ಮೂಲತ ಸಾಂತೂರು ಜಲಜನಿವಾಸ ಕುಂದಬೆಟ್ಟುಗುತ್ತು ಅಡ್ಪೆ ಕೆಳಗಿನ ಮನೆಯವರಾದ ಇವರು ಮೆನ್ಕ ಶೆಟ್ಟಿ ಮತ್ತು ಜಲಜ ಶೆಟ್ಟಿಯವರ ಪುತ್ರರಾಗಿದ್ದಾರೆ.

ಮೃತರು ಪತ್ನಿ ಶಾರದಾ, ಇಬ್ಬರು ಪುತ್ರಿಯರಾದ ಪ್ರೀತಿ ಸಂತೋಷ್ ಶೆಟ್ಟಿ, ಶುಭಾ ಮನೋಜ್ ಶೆಟ್ಟಿ , ಅಳಿಯಂದಿರು ,ಮೊಮ್ಮಕ್ಕಳ ಸಹಿತ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

ಸುಧಾಕರ ಕರಿಯಣ್ಣ ಶೆಟ್ಟಿ ನಿಧನ



ಮುಂಬಯಿ, ಜೂ. 29- ತುಂಗಾ ವಿಲೇಜ್ ಪೊವ್ವಾಯ ಕಾಝಿ ಮಂಜಿಲ್ ಪ್ರೇಮ್ ನಗರದ ಏಕ್ತಾ ಸೊಸೈಟಿಯ ನಿವಾಸಿ, ನಿಟ್ಟೆ ಪೆರ್ಯಾಡಿ ಹೌಸ್ ಸುಧಾಕರ್ ಶೆಟ್ಟಿ (67) ಅನಾರೋಗ್ಯದಿಂದ ಜೂ. 27ರ ಶನಿವಾರದಂದು ನಿಧನರಾದರು.

ಅಪಾರ ದೈವ ಭಕ್ತರಾದ ಅವರು, ಪತ್ನಿ ಮಲ್ಲಿಕಾ ಎಸ್. ಶೆಟ್ಟಿ, ಮಗಳು ನಯನಾ ಪ್ರವೀಣ್ ಶೆಟ್ಟಿ ಸೇರಿದಂತೆ ಅಪಾರ ಸಂಖ್ಯೆಯ ಬಂಧು -ಮಿತ್ರರನ್ನು ಅಗಲಿದ್ದಾರೆ.



ವಟ ಸಾವಿತ್ರಿ ಸಂದರ್ಭ ಮುಂಬಯಿಯಲ್ಲಿ ವಟ ಪೂರ್ಣಿಮಾ ದಿನವಾದ ಸೋಮವಾರ ಮಹಿಳೆಯರು ಆಲದ ಮರದ ಸುತ್ತ ವಿಧಿಗಳನ್ನು ನಡೆಸಿದರು.ಈ ದಿನ ಮಹಿಳೆಯರು ತಮ್ಮ ಪತಿಯಂದಿರ ಯೋಗಕ್ಷೇಮ, ದೀರ್ಘಾಯುಷ್ಯಕ್ಕಾಗಿ ದಿನವಿಡೀ ಉಪವಾಸ ಆಚರಿಸುತ್ತಾರೆ.

ಸೀಶೆಲ್ಸ್‌ನಲ್ಲಿ ಪ್ರಧಾನಿ ಮೋದಿಯಿಂದ ಭಾರತೀಯ ವಲಸಿಗರ ಭೇಟಿ; ಮಹಾತ್ಮ ಗಾಂಧಿಗೆ ಗೌರವ ಸಲ್ಲಿಕೆ



ವಿಕ್ಟೋರಿಯಾ (ಸೀಶೆಲ್ಸ್), ಜೂ.29 - ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಸೀಶೆಲ್ಸ್‌ನಲ್ಲಿ ಮಹಾತ್ಮಾ ಗಾಂಧಿಗೆ ಗೌರವ ಸಲ್ಲಿಸಿದ ಜತೆಗೆ ಭಾರತೀಯ ವಲಸಿಗ ಜನರನ್ನು ಭೇಟಿಯಾದರು.

ಶಾಂತಿ ಉದ್ಯಾನವನದಲ್ಲಿ ಮೀಸಲಾದ ಪ್ರತಿಮೆಯ ಮೂಲಕ ಗಾಂಧಿಯವರ ಪರಂಪರೆಯನ್ನು ಸೀಶೆಲ್ಸ್‌ನಲ್ಲಿ ಪ್ರಮುಖವಾಗಿ ಗೌರವಿಸಲಾಗುತ್ತದೆ. ಪ್ರಧಾನಿ ಮೋದಿ ಅವರು ಉದ್ಯಾನವನಕ್ಕೆ ಭೇಟಿ ನೀಡಿ ಅಲ್ಲಿ ಪುಷ್ಪನಮನ ಸಲ್ಲಿಸಿದರು ಮತ್ತು ಕೆಲವು ಮಕ್ಕಳೊಂದಿಗೆ ಸಂವಹನ ನಡೆಸಿದರು. 'ಬಾಪು ಅವರ ಆದರ್ಶಗಳು ತಲೆಮಾರುಗಳನ್ನು ಮೀರಿ, ಶಾಂತಿ, ನ್ಯಾಯ ಮತ್ತು ಮಾನವ ಘನತೆಯ ಅನ್ವೇಷಣೆಯಲ್ಲಿ ಜನರನ್ನು ಒಗ್ಗೂಡಿಸುತ್ತವೆ. ಅವರ ಆಲೋಚನೆಗಳು ಉತ್ತಮ ಪ್ರಪಂಚಕ್ಕಾಗಿ ನಮ್ಮ ಸಾಮೂಹಿಕ ಪ್ರಯತ್ನಕ್ಕೆ ಸ್ಫೂರ್ತಿ ನೀಡುತ್ತಲೇ ಇರುತ್ತವೆ' ಎಂದು ಮೋದಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ. ಮೋದಿ ಅವರು ಕಲಾವಿದರಿಂದ ಗಾಯನ ಪ್ರದರ್ಶನವನ್ನು ಕೂಡ ವೀಕ್ಷಿಸಿದರು.

ಪ್ರಧಾನಿಯನ್ನು ಉದ್ಯಾನವನದಲ್ಲಿ ಭಾರತೀಯ ವಲಸಿಗರು ಸಣ್ಣ ಭಾರತೀಯ ಧ್ವಜಗಳನ್ನು ಬೀಸುತ್ತಾ ಸ್ವಾಗತಿಸಿದರು.

ಅರುಲ್ ಮಿಹು ನವಶಕ್ತಿ ವಿನಾಯಕ ದೇವಸ್ಥಾನಕ್ಕೆ ಭೇಟಿ ನೀಡಿದ ಬಳಿಕ ಅವರು ಪೀಸ್ ಪಾರ್ಕ್‌ಗೆ ಹೋಗಿ ಅಲ್ಲಿ ಪ್ರಾರ್ಥನೆ ಸಲ್ಲಿಸಿದರು. 'ಅರುಲ್ಮಿಗು ನವಶಕ್ತಿ ವಿನಾಯಕ ಮಂದಿರವನ್ನು ನಿರ್ಮಿಸಲು ಮತ್ತು ಸೀಶೆಲ್ಸ್‌ನಲ್ಲಿ ಭಾರತೀಯ ಸಂಸ್ಕೃತಿ ಹಾಗೂ ಆಧ್ಯಾತ್ಮಿಕತೆಯ ವಿವಿಧ ಅಂಶಗಳನ್ನು ಜನಪ್ರಿಯಗೊಳಿಸಿದ್ದಕ್ಕಾಗಿ ಸೀಶೆಲ್ಸ್ ಹಿಂದೂ ಕೋವಿಲ್ ಸಂಗಮವನ್ನು ನಾನು ಕೃತಜ್ಞತೆಯಿಂದ ಅಭಿನಂದಿಸುತ್ತೇನೆ' ಎಂದು ಮೋದಿ ಮತ್ತೊಂದು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಇದಕ್ಕೂ ಮೊದಲು, ಮೋದಿ ಭಾರತೀಯ ವಲಸಿಗರ ಗುಂಪಿನೊಂದಿಗೆ ಚರ್ಚೆ ನಡೆಸಿ, ವಿಕ್ಟೋರಿಯಾದಲ್ಲಿ ಅವರೊಂದಿಗೆ ಫೋಟೋಗಳನ್ನು ತೆಗೆದುಕೊಂಡರು. ಸೀಶೆಲ್ಸ್‌ನಲ್ಲಿರುವ ಭಾರತೀಯ ಸಮುದಾಯದ ಸದಸ್ಯರೊಂದಿಗೆ ಅದ್ಭುತ ಸಂವಾದವನ್ನು ನಡೆಸಿದ ಮೋದಿ, ಸೀಶೆಲ್ಸ್‌ನ ಪ್ರಗತಿಗೆ ಅವರ ಪರಿಣಾಮಕಾರಿ ಕೊಡುಗೆಗಳನ್ನು ಶ್ಲಾಘಿಸಿದರು.

ಅದೇ ಸಮಯದಲ್ಲಿ, ಭಾರತದೊಂದಿಗಿನ ಅವರ ಸಂಪರ್ಕವು ಇನ್ನೂ ತುಂಬಾ ಪ್ರಬಲವಾಗಿದೆ ಎಂದು ಪ್ರಧಾನಿ ಹೇಳಿದರು.

ಸೀಶೆಲ್ಸ್ ರಾಷ್ಟ್ರೀಯ ದಿನದ ಸುವರ್ಣ ಮಹೋತ್ಸವ ಆಚರಣೆಯಲ್ಲಿ ಮೋದಿ ಗೌರವಾನ್ವಿತ ಅತಿಥಿಯಾಗಿ ಭಾಗವಹಿಸಿದ್ದರು.

ದ್ವಿಪಕ್ಷೀಯ ಸಂಬಂಧಗಳನ್ನು ಹೆಚ್ಚಿಸಲು ಮತ್ತು ಸುರಕ್ಷಿತ ಹಾಗೂ ಸಮೃದ್ಧ ಹಿಂದೂ ಮಹಾಸಾಗರ ಪ್ರದೇಶಕ್ಕಾಗಿ ಸಾಮಾನ್ಯ ದೃಷ್ಟಿಕೋನವನ್ನು ಮುನ್ನಡೆಸಲು ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನಿ ಅವರೊಂದಿಗೆ ವ್ಯಾಪಕ ಮಾತುಕತೆ ನಡೆಸಿದ ಮೋದಿ ಅವರು, ಸೋಮವಾರ ತಮ್ಮ ಮೂರು ದಿನಗಳ ಸೀಶೆಲ್ಸ್ ಭೇಟಿಯನ್ನು ಮುಕ್ತಾಯಗೊಳಿಸಿದರು.

ಸೀಶೆಲ್ಸ್‌ನ ಉಪಾಧ್ಯಕ್ಷ ಸೆಬಾಸ್ಟಿಯನ್ ಪಿಳ್ಳೆ ಮತ್ತು ಭಾರತೀಯ ವಲಸಿಗರು ಪ್ರಧಾನಿ ಮೋದಿಯವರನ್ನು ವಿಮಾನ ನಿಲ್ದಾಣದಲ್ಲಿ ಬೀಳ್ಕೊಟ್ಟರು. 'ನನ್ನ ಸೀಶೆಲ್ಸ್ ಭೇಟಿಯು ಭಾರತ-ಸೀಶೆಲ್ಸ್ ಸ್ನೇಹವನ್ನು ಹೆಚ್ಚಿಸುವ ಗಣನೀಯ ಫಲಿತಾಂಶಗಳಿಂದ ತುಂಬಿದೆ' ಎಂದು ಮೋದಿ ನಿರ್ಗಮನದ ಬಳಿಕದ ಎಕ್ಸ್ ಪೋಸ್ಟ್‌ನಲ್ಲಿ ಹೇಳಿದರು. ಭಾರತ-ಸೀಶೆಲ್ಸ್ ಸಂಬಂಧಗಳ ಕಳೆದ 50 ವರ್ಷಗಳ ಆಳವಾದ ನಂಬಿಕೆ ಮತ್ತು ಹಂಚಿಕೆಯ ಪ್ರಗತಿಯಿಂದ ಗುರುತಿಸಲ್ಪಟ್ಟಿದೆ ಎಂದು ಮೋದಿ ಹೇಳಿದರು. ಮುಂದಿನ 50 ವರ್ಷಗಳನ್ನು ನಾವೀನ್ಯತೆ, ಸುಸ್ಥಿರತೆ ಮತ್ತು ಹಂಚಿಕೆಯ ಸಮೃದ್ಧಿಯಿಂದ ವ್ಯಾಖ್ಯಾನಿಸಲಾಗುತ್ತದೆ ಎಂದು ಮೋದಿ ತಿಳಿಸಿದರು. ಸೀಶೆಲ್ಸ್ ಸ್ವಾತಂತ್ರ್ಯದ 50 ವರ್ಷಗಳನ್ನು ಆಚರಿಸುವ ಸಮಯದಲ್ಲಿ ರಾಷ್ಟ್ರೀಯ ದಿನಾಚರಣೆಯಲ್ಲಿ ಭಾಗವಹಿಸಲು ನನಗೆ ಸಂತೋಷವಾಗಿದೆ ಎಂದು ಅವರು ನಿರ್ಗಮನದ ಬಳಿಕ ಪೋಸ್ಟ್ ಮಾಡಿದ್ದಾರೆ.

ಮಹಾರಾಷ್ಟ್ರ ಕಾನೂನುಬದ್ಧ ರಾಜ್ಯ, ಇಲ್ಲಿ ಅಪರಾಧಿಗಳಿಗೆ ರಕ್ಷಣೆ ಇಲ್ಲ; ಏಕನಾಥ್ ಶಿಂದೆ



ಮುಂಬಯಿ,ಜೂ.29 - ನಸ್ರಾಪುರ ಬಾಲಕಿ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ಆರೋಪಿಗೆ ನ್ಯಾಯಾಲಯ ಮರಣದಂಡನೆ ಶಿಕ್ಷೆ ವಿಧಿಸಿದೆ. ಶಿವಸೇನೆ ಮುಖ್ಯಸ್ಥ ಹಾಗೂ ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ಅವರು ಈ ತೀರ್ಪಿನ ಬಗ್ಗೆ ತೃಪ್ತಿ ವ್ಯಕ್ತಪಡಿಸಿದರಲ್ಲದೆ, ಮಹಾರಾಷ್ಟ್ರವು ಕಾನೂನುಬದ್ಧ ರಾಜ್ಯವಾಗಿದ್ದು, ನ್ಯಾಯಾಲಯವು ಆರೋಪಿಗೆ ಮರಣದಂಡನೆ ವಿಧಿಸಿರುವುದರಿಂದ ಅಪರಾಧಿಗಳಿಗೆ ಇಲ್ಲಿ ಯಾವುದೇ ವಿನಾಯಿತಿ ಇಲ್ಲ ಎಂದು ತೋರಿಸಿದಂತಾಗಿದೆ ಎಂದು ವಿಧಾನಸಭೆ ಆವರಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ತಿಳಿಸಿದರು.

ಈ ತೀರ್ಪು ನ್ಯಾಯವನ್ನು ತಂದಿದೆ ಮತ್ತು ಮಹಿಳೆಯರು,ಹುಡುಗಿಯರ ಮೇಲೆ ದೌರ್ಜನ್ಯ ಎಸಗುವವರಿಗೆ ಸ್ಪಷ್ಟ ಎಚ್ಚರಿಕೆಯಾಗಿದೆ ಎಂದು ಶಿಂದೆ ಹೇಳಿದರು. ಭವಿಷ್ಯದಲ್ಲಿ ಯಾರೂ ಇಂತಹ ಹೇಯ ಕೃತ್ಯಗಳನ್ನು ಮಾಡಲು ಧೈರ್ಯ ಮಾಡುವುದಿಲ್ಲ ಎಂಬುದಕ್ಕೆ ಇದು ಕಠಿಣ ಎಚ್ಚರಿಕೆ. ಅಂತಹ ಪುರುಷರಿಗೆ ಸಮಾಜದಲ್ಲಿ ಅಥವಾ ಕಾನೂನಿನ ನಿಯಮದಲ್ಲಿ ಸ್ಥಾನವಿಲ್ಲ. ಅವರಿಗೆ ಬದುಕುವ ಹಕ್ಕಿಲ್ಲ. ಮಹಿಳೆಯರು, ಹುಡುಗಿಯರು ಮತ್ತು ಯುವತಿಯರ ಮೇಲಿನ ದೌರ್ಜನ್ಯದ ವಿರುದ್ಧ ಮಹಾಯುತಿ ಸರಕಾರದ ನಿಲುವು ಯಾವಾಗಲೂ ಕಟ್ಟುನಿಟ್ಟಾಗಿದೆ ಎಂದು ಅವರು ತಿಳಿಸಿದರು.

ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ನೇತೃತ್ವದ ರಾಜ್ಯ ಸರಕಾರವು ಮಹಿಳೆಯರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಿದೆ. ಪ್ರತಿಯೊಬ್ಬ ಹುಡುಗಿ ಮತ್ತು ಮಹಿಳೆ ಸುರಕ್ಷಿತ ವಾತಾವರಣದಲ್ಲಿ ಬದುಕಲು ಸರಕಾರ ನಿರಂತರವಾಗಿ ಪರಿಣಾಮಕಾರಿ ಕ್ರಮಗಳನ್ನು ಜಾರಿಗೆ ತರುತ್ತಿದೆ. ತ್ವರಿತ ತನಿಖೆ, ತ್ವರಿತ ನ್ಯಾಯಾಂಗ ಪ್ರಕ್ರಿಯೆ ಮತ್ತು ಕಠಿಣ ಶಿಕ್ಷೆಗೆ ಸರಕಾರ ಬದ್ಧವಾಗಿದೆ ಎಂದು ಭರವಸೆ ನೀಡಿದ ಶಿಂದೆ, ನಸ್ರಾಪುರ ಪ್ರಕರಣದಲ್ಲಿ ಇಂದು ನ್ಯಾಯ ಸಿಕ್ಕಿದೆ ಎಂಬ ಭಾವನೆ ಎಲ್ಲರಲ್ಲೂ ಇದೆ ಎಂದು ಹೇಳಿದರು.

65 ವರ್ಷದ ಅಪರಾಧಿಗೆ ಗಲ್ಲು ಶಿಕ್ಷೆ

ಮೊದಲ ಪುಟದಿಂದ

ಪುಣೆ ಜಿಲ್ಲೆಯ ನಸ್ರಾಪುರ ಗ್ರಾಮದಲ್ಲಿ ಭೀಮರಾವ್ ಕಾಂಬ್ಳೆ ಬಾಲಕಿಗೆ ತಿಂಡಿ ನೀಡುವುದಾಗಿ ಮತ್ತು ಆಕೆಗೆ ನವಜಾತ ಕರುವನ್ನು ತೋರಿಸುವುದಾಗಿ ನಂಬಿಸಿ ಕರೆದೊಯ್ದಿದ್ದ. ದನದ ಹಟ್ಟಿ ಬಳಿಯ ಶೆಡ್‌ಗೆ ಬಾಲಕಿಯನ್ನು ಕರೆದೊಯ್ದಿದ್ದ ಆತ ಆಕೆ ಮೇಲೆ ಲೈಂಗಿಕ ಕೃತ್ಯ ಎಸಗಿದ್ದು ಮತ್ತು ಆಕೆಯನ್ನು ಬಲವಾಗಿ ಒತ್ತಿ ಹಿಡಿದು ಎದೆಗೆ ಗಾಯಗೊಳಿಸಿ ಬರ್ಬರವಾಗಿ ಹತ್ಯೆ ಮಾಡಿದ್ದ.

ಬಾಲಕಿಯನ್ನು ಅತ್ಯಂತ ಅಮಾನುಷವಾಗಿ ಅನಾಗರಿಕವಾಗಿ ಬರ್ಬರವಾಗಿ ಕೊಲೆ ಮಾಡಲಾಗಿದೆ. ದುರ್ದೈವಿ ಬಾಲಕಿ ಅಮಾಯಕ ಮತ್ತು ಅಸಹಾಯಕ ಮಗುವಾಗಿದ್ದಳು. ಕಾಮದಾಸೆಯನ್ನು ತೃಪ್ತಿಪಡಿಸಿಕೊಳ್ಳಲು ಬಾಲಕಿಯನ್ನು ಅಮಾನುಷವಾಗಿ ಕಗ್ಗೊಲೆ ಮಾಡಲಾಗಿದೆ. ಇದು ಅತ್ಯಂತ ಅನಾಗರಿಕ ಕೃತ್ಯವಾಗಿದ್ದು ಆತನಿಗೆ ಯಾವುದೇ ರೀತಿಯಲ್ಲೂ ಕನಿಕರ ತೋರಲು ಸಾಧ್ಯವೇ ಇಲ್ಲ. ಅಪರಾಧವು ಕೇವಲ ನ್ಯಾಯಾಂಗದ ಆತ್ಮಸಾಕ್ಷಿಯನ್ನು ಅಲ್ಲಾಡಿಸಿರುವುದಲ್ಲ ಸಮಾಜದ ಆತ್ಮಸಾಕ್ಷಿಯನ್ನೂ ತಲ್ಲಣಗೊಳಿಸಿದೆ ಎಂದು ನ್ಯಾಯಾಧೀಶ ಸಾಳುಂಕೆ ಅಭಿಪ್ರಾಯಪಟ್ಟಿದ್ದಾರೆ.

ಕಾಂಬ್ಳೆಗೆ ಮರಣದಂಡನೆ ಶಿಕ್ಷೆ ತೀರ್ಪು ನೀಡುವಂತೆ ಕೋರ್ಟಿನಲ್ಲಿ ವಾದಿಸಿದ್ದ ಪ್ರಾಸಿಕ್ಯೂಶನ್ ಆತ ಸುಧಾರಣೆ ಆಗುವವನೇ ಅಲ್ಲ. ಈ ಮೊದಲು 62 ವರ್ಷದ ಮಹಿಳೆ ಮತ್ತು 17 ವರ್ಷದ ಬಾಲಕಿಯ ಮೇಲೆಯೂ ಅತ್ಯಾಚಾರ ನಡೆಸಿದ್ದಾನೆ. ಪ್ರಾಣಿಯೊಂದರ ಜತೆಗೆ ಕೂಡಾ ಆತ ಅನೈಸರ್ಗಿಕ ಲೈಂಗಿಕ ಕೃತ್ಯ ಎಸಗಿದ್ದ ಎಂದು ತಿಳಿಸಿದೆ.

ಅಪರಾಧಿಯ ವಯಸ್ಸು ಮತ್ತು ಆತ ಅಪರಾಧಕ್ಕೆ ಯಾತನೆ ಪಟ್ಟಿದ್ದಾನೆ ಎಂದು ವಾದಿಸಿದ ಆರೋಪಿ ಪರ ವಕೀಲರು ಗರಿಷ್ಠ ಶಿಕ್ಷೆ ನೀಡುವಂತೆ ವಿನಂತಿಸಿಕೊಂಡಿದ್ದರು. ಆದರೆ ನ್ಯಾಯಾಧೀಶರು ಕಾಂಬ್ಳೆಯ ಅಪರಾಧವು ಅಪರೂಪದಲ್ಲಿ ಅಪರೂಪದ ಕೃತ್ಯವಾಗಿದೆ. ಆತನ ವಯಸ್ಸು ಮತ್ತು ಅಪರಾಧಕ್ಕೆ ಯಾತನೆ ಪಟ್ಟಿರುವುದರಿಂದ ಆತನಿಗೆ ಗರಿಷ್ಠ ಶಿಕ್ಷೆಯಿಂದ ರಿಯಾಯಿತಿ ನೀಡಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಇಂತಹ ವಯಸ್ಸಿನಲ್ಲಿಯೂ ಆತನ ಕಾಮದಾಸೆ ಇಂಗಿಲ್ಲ. ಬದಲು ಅತ್ಯಂತ ಅಪಾಯಕಾರಿ ಮಟ್ಟಕ್ಕೆ ತಲುಪಿದೆ. ಬಾಲಕಿಯ ದೇಹದ ಮೇಲೆ ಆಗಿದ್ದ ಗಾಯಗಳು ಅಪರಾಧಿಯ ಅನಾಗರಿಕ ಕ್ರೂರತನಕ್ಕೆ ಸಾಕ್ಷಿಯಾಗಿದೆ. 3 ವರ್ಷದ ಹಸುಳೆ ಮೇಲೆ ಅಪರಾಧಿ ಅತ್ಯಂತ ಅನಾಗರಿಕವಾಗಿ ನಡೆದುಕೊಂಡಿದ್ದಾನೆ ಎಂದು ನ್ಯಾಯಾಧೀಶರು ತೀರ್ಪಲ್ಲಿ ಹೇಳಿದ್ದಾರೆ.

ಅಪರಾಧಿಯು ಮಗುವಿನ ಮೇಲೆ ನಡೆಸಿರುವ ಕ್ರೂರ ವರ್ತನೆಯನ್ನು ಯಾವುದೇ ಭಯವಿಲ್ಲದೆ ಅತ್ಯಂತ ಅಮಾನುಷ ಕ್ರೂರತನದಿಂದ ನಡೆಸಿದ್ದಾನೆ. ಅದರ ಪರಿಣಾಮ ಏನಾಗಬಹುದೆಂದು ಆತ ಭಾವಿಸಿಲ್ಲ. ಏಕೆಂದರೆ ಹಿಂದಿನ ಅಪರಾಧಕ್ಕೆ ಅಪರಾಧಿಯಾದರೂ ಕೋರ್ಟಿನಲ್ಲಿ ಏನೂ ಆಗುವುದಿಲ್ಲ ಎಂಬ ಅನುಭವ ಅವನಿಗೆ ಇತ್ತು ಎಂದು ನ್ಯಾಯಾಧೀಶರು ಹೇಳಿದ್ದಾರೆ.

ನಿರ್ಭಯ ಪ್ರಕರಣದ ಬಳಿಕ ಮಕ್ಕಳ ಮೇಲಿನ ಅಪರಾಧಗಳ ಕುರಿತು ತ್ವರಿತ ವಿಚಾರಣೆಗೆ ವಿಶೇಷ ಕೋರ್ಟ್‌ಗಳ ರಚನೆಯಾದರೂ ಇಂತಹ ಕೃತ್ಯಗಳು ಮುಂದುವರಿಯುತ್ತಿರುವುದರಿಂದ ಸಮಾಜವು ಸಾಮೂಹಿಕವಾಗಿ ಆತ್ಮಸಾಕ್ಷಿಯನ್ನು ಪ್ರಶ್ನಿಸಿಕೊಳ್ಳಬೇಕಾಗಿದೆ ಎಂದು ನ್ಯಾಯಾಧೀಶರು ಅಭಿಪ್ರಾಯಪಟ್ಟಿದ್ದಾರೆ.

ಬಳಿಕ ಕೋರ್ಟಿನ ಹೊರಗೆ ಸುದ್ದಿಗಾರರ ಜತೆಗೆ ಮಾತನಾಡುತ್ತಿದ್ದ ವಿಶೇಷ ಸರಕಾರಿ ವಕೀಲ ಅಜಯ್ ಮಿಸರ್, ಇದೊಂದು ಚಾರಿತ್ರಿಕ ತೀರ್ಪು ಎಂದು ಹೇಳಿದರು. ಈ ಅಪರಾಧವು ಅಪರೂಪದಲ್ಲಿ ಅಪರೂಪದ ಕ್ರೂರ ಕೃತ್ಯ ಎಂದು ಕೋರ್ಟಿನ ಮುಂದೆ ಸಾಬೀತುಪಡಿಸಲು ಸುಪ್ರೀಂಕೋರ್ಟಿನ 12 ಆದೇಶಗಳನ್ನು ಬೊಟ್ಟು ಮಾಡಿದೆ ಎಂದು ಹೇಳಿದರು.

ಆರೋಪಿಯು ಅತ್ಯಂತ ಯೋಜಿತ ರೀತಿಯಲ್ಲಿ ನಡೆಸಿದ್ದ ಬರ್ಬರ ಕೃತ್ಯ ಇದಾಗಿತ್ತು. ಅಪರಾಧಿಯ ವಿಚಾರದಲ್ಲಿ ಯಾವುದೇ ಅನುಕಂಪ ಸಾಧ್ಯವೇ ಇಲ್ಲ. ಇದು ಹೇಯ ಅಪಾಧವಾಗಿದೆ. ಮಗು ಸತ್ತ ಬಳಿಕವೂ ಆಕೆ ಮೇಲೆ ಅಪರಾಧಿ ದೌರ್ಜನ್ಯ ಎಸಗಿದ್ದಾನೆ ಎಂದು ಪ್ರಾಸಿಕ್ಯೂಶನ್ ವಾದಿಸಿದೆ ಎಂದು ಅವರು ಹೇಳಿದರು.

ನ್ಯಾಯಾಲಯ ವಿಚಾರಣೆ ವೇಳೆ ಒಂದೇ ದಿನ ಕೆಲವು ಮಕ್ಕಳು ಸೇರಿದಂತೆ 10 ಸಾಕ್ಷಿಗಳ ಹೇಳಿಕೆ ದಾಖಲಿಸಿಕೊಂಡಿತ್ತು. ಬಾಲಕಿಯ ಅಪಹರಣ, ಲೈಂಗಿಕದೌರ್ಜನ್ಯ, ಅತ್ಯಾಚಾರ ಮತ್ತು ಕೊಲೆ ಸಹಿತ ಎಲ್ಲ ಆರೋಪಗಳನ್ನೂ ಪ್ರಾಸಿಕ್ಯೂಶನ್ ಸಾಬೀತುಪಡಿಸಿತ್ತು. ಪೋಕ್ಸೊ ಕಾಯ್ದೆ ಮತ್ತು ಭಾರತೀಯ ನ್ಯಾಯಸಂಹಿತೆಯ ಎಲ್ಲ ಸೆಕ್ಷನ್‌ಗಳ ಅಡಿಯಲ್ಲಿ ಆರೋಪಿ ಅಪರಾಧಿ ಎಂದು ದೃಢಪಟ್ಟಿದೆ.

ಇದೇ ವೇಳೆ, ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ಅವರು ಪುಣೆಯ ವಿಶೇಷ ಕೋರ್ಟ್ ನೀಡಿದ ಇಂದಿನ ತೀರ್ಪು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗುವ ದುರುಳರಿಗೆ ಒಂದು ಬಲವಾದ ಎಚ್ಚರಿಕೆ ಸಂದೇಶ ನೀಡಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಇದೊಂದು ಚಾರಿತ್ರಿಕ ತೀರ್ಪು ಎಂದು ಉಪಮುಖ್ಯಮಂತ್ರಿ ಸುನೇತ್ರ ಪವಾರ್ ಹೇಳಿದ್ದಾರೆ.

ಅಪರಾಧಿಗೆ ಗಲ್ಲು ಶಿಕ್ಷೆ ತೀರ್ಪಿನಿಂದ ಮಾನಸಿಕವಾಗಿ ತೃಪ್ತಿಯಾಗಿದೆ ಎಂದು ಬಾಲಕಿಯ ತಂದೆ ತಿಳಿಸಿದ್ದಾರೆ. ನ್ಯಾಯಾಲಯದ ತೀರ್ಪು ಅನುಷ್ಠಾನ ಆಗುವುದನ್ನು ನೋಡಲು ನನ್ನ ಕುಟುಂಬ ಬಯಸಿದೆ ಎಂದು ಅವರು ಹೇಳಿದ್ದಾರೆ.

ಗೌರವಾನ್ವಿತ ಕೋರ್ಟಿನ ನಿರ್ಧಾರದಿಂದ ನಮಗೆ ತೃಪ್ತಿಯಾಗಿದೆ. ಅಪರಾಧಿಗೆ ಮರಣದಂಡನೆ ವಿಧಿಸಿದಾಗ ನಮ್ಮ ಬೇಡಿಕೆ ಈಡೇರುತ್ತದೆ ಎಂದು ಬಾಲಕಿಯ ತಂದೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ್ದಾರೆ.

ನಾನು ಯಾವುದೇ ನಿಯಮ ಉಲ್ಲಂಘಿಸಿಲ್ಲ; ಆರ್‌ಎಸ್‌ಎಸ್ ಕಾರ್ಯಕ್ರಮದಲ್ಲಿ ಭಾಗವಹಿಸಿದ ಬಗ್ಗೆ ವಿಶ್ವಾಸ್ ನಂಗ್ರೆ ಪಾಟೀಲ್ ಸ್ಪಷ್ಟನೆ



ಮುಂಬಯಿ,ಜೂ.29 - ನಾಗ್ಪುರದ ಹೊಸ ಪೊಲೀಸ್ ಆಯುಕ್ತ ವಿಶ್ವಾಸ್ ನಂಗ್ರೆ ಪಾಟೀಲ್ ಅವರು ಸಾಮಾನ್ಯ ಹಿಂದೂ ಸಮುದಾಯದ ಕಾರ್ಯಕ್ರಮದಲ್ಲಿ ಭಾಗವಹಿಸುವಾಗ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ನ್ನು ಹೊಗಳಿದ್ದರು.ಅವರ ಭಾಷಣದ ಈ ವೀಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿತ್ತು.ಈ ವೀಡಿಯೊ ವೈರಲ್ ಆದ ಬಳಿಕ ಅವರನ್ನು ಕಾಂಗ್ರೆಸ್ ತೀವ್ರವಾಗಿ ಟೀಕಿಸಿತು.ಮನಸೇ ಮುಖ್ಯಸ್ಥ ರಾಜ್‌ಠಾಕ್ರೆ ಕೂಡ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿ ವಿಶ್ವಾಸ್ ನಂಗ್ರೆ ಪಾಟೀಲ್ ವಿರುದ್ಧ ಟೀಕಾದಾಳಿ ನಡೆಸಿದ್ದರು.ಈ ಮಧ್ಯೆ ಈಗ ವಿಶ್ವಾಸ್ ನಂಗ್ರೆ ಪಾಟೀಲ್ ಸ್ವತಃ ಸ್ಪಷ್ಟನೆಯೊಂದನ್ನು ನೀಡಿದ್ದಾರೆ.

ಎ.19 ರಂದು ಸಂಪಾದದಲ್ಲಿ ನಡೆದ ಕಾರ್ಯಕ್ರಮಕ್ಕೆ ಪ್ರಮುಖ ವ್ಯಕ್ತಿಗಳು ನನಗೆ ಆಹ್ವಾನ ನೀಡಿದ್ದರು. ನನ್ನ ಬಳಿ ಇನ್ನೂ ಆ ಆಹ್ವಾನವಿದೆ. ನಾನು ನಿಯಮಿತವಾಗಿ ರಂಜಾನ್, ಬೌದ್ಧ, ಕ್ರಿಶ್ಚಿಯನ್ ಕಾರ್ಯಕ್ರಮಗಳಿಗೆ ಹಾಜರಾಗುತ್ತೇನೆ, ನನ್ನ ಭಾಷಣದಲ್ಲಿ, ನಾನು ಜ್ಞಾನೇಶ್ವರಿಯ ಬಗ್ಗೆ ವಿವರವಾಗಿ ಮಾತನಾಡಿದೆ.ನಾನು ಮಾದಕ ವಸ್ತುಗಳ ಬಗ್ಗೆಯೂ ಮಾತನಾಡಿದ್ದೇನೆ.ಅದು ರಚನಾತ್ಮಕ ಹಾಗೂ ಉತ್ತಮ ಕಾರ್ಯಕ್ರಮವಾಗಿತ್ತು.ನಾನು ವಂದೇ ಭಾರತ್ ಮತ್ತು ಸಂಘದ ಶತಮಾನೋತ್ಸವದ ಬಗ್ಗೆಯೂ ಮಾತನಾಡಿದ್ದೇನೆ. ನಾನು ಯಾವುದೇ ನಿಯಮಗಳನ್ನು ಉಲ್ಲಂಘಿಸಿಲ್ಲ, ನಾನು ಏನು ಹೇಳಿದರೂ ಅದು ಕಾನೂನಿನ ಚೌಕಟ್ಟಿನೊಳಗೆ ಇದೆ ಎಂದು ವಿಶ್ವಾಸ್ ನಂಗ್ರೆ ಪಾಟೀಲ್ ಈ ಕಾರ್ಯಕ್ರಮದ ಬಗ್ಗೆ ತಿಳಿಸಿದ್ದಾರೆ.

ನಾನು ಮೊದಲ ಬಾರಿಗೆ ಕಿತ್ತಳೆ ನಗರದಲ್ಲಿ ಕೆಲಸ ಮಾಡುತ್ತಿದ್ದೇನೆ.ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ನನ್ನ ಮೇಲೆ ನಂಬಿಕೆ ಇಟ್ಟಿದ್ದಾರೆ, ನಾನು ಕಾನೂನು ಸುವ್ಯವಸ್ಥೆ ಕಾಪಾಡಲು ಪ್ರಯತ್ನಿಸುತ್ತೇನೆ, ಯುವಕರು, ಮಹಿಳೆಯರು, ಹಿರಿಯ ನಾಗರಿಕರ ಸಮಸ್ಯೆಗಳಿಗೆ ಆದ್ಯತೆ ನೀಡಲಾಗುವುದು. ವೃತ್ತಿಪರ ಮತ್ತು ಕೋರ್ ಪೋಲೀಸಿಂಗ್‌ಗೆ ನಾವು ಆದ್ಯತೆ ನೀಡುತ್ತೇವೆ, ಜನರೊಂದಿಗೆ ತಂಡವಾಗಿ ಕೆಲಸ ಮಾಡುವ ಪ್ರಯತ್ನವಿರುತ್ತದೆ. ಐಪಿಎಸ್ ನಮ್ಮ ಹೆಗಲ ಮೇಲೆ ಬರೆಯಲ್ಪಟ್ಟಿದೆ, ಅಂದರೆ ಜನರಿಗೆ ಸೇವೆ ಮಾಡುವುದು.ಇಲ್ಲಿ ಅಪರಾಧಿಗಳು ಭಯಪಡಬೇಕು. ಜನರು ಭಯಪಡುವ ಅಗತ್ಯವಿಲ್ಲ. ನಮಗೆ ಎಲ್ಲರ ಬಗ್ಗೆ ಗೌರವವಿದೆ, ಸಂವಿಧಾನದ ಬಗ್ಗೆ ನನ್ನ ಬದ್ಧತೆ ಇದೆ. ಸಾಮಾಜಿಕ-ಸಾಂಸ್ಕೃತಿಕ ಸಂಸ್ಥೆಗಳ ಕಾರ್ಯಕ್ರಮಗಳಿಗೆ ಹೋಗುವುದು, ಅಲ್ಲಿ ಅವರಿಗೆ ಮಾರ್ಗದರ್ಶನ ನೀಡುವುದು ಮತ್ತು ಅವರಿಗೆ ರಕ್ಷಣೆ ನೀಡುವುದು ನಮ್ಮ ಕರ್ತವ್ಯ ಎಂದು ಅವರು ಹೇಳಿದ್ದಾರೆ.

ಹಣಕಾಸು ಖಾತೆ ಸಾಧ್ಯವಾದಷ್ಟು ಬೇಗ ಎನ್‌ಸಿಪಿ ಕೈಗೆ ಬರಲಿದೆ ; ಜಯ್ ಪವಾರ್

ಮುಂಬಯಿ,ಜೂ.29- ಅಜಿತ್ ಪವಾರ್ ನಿಧನರಾಗಿ 5 ತಿಂಗಳುಗಳು ಕಳೆದಿವೆ. ಉಪಮುಖ್ಯಮಂತ್ರಿ ಹುದ್ದೆಯ ಜೊತೆಗೆ, ಹಣಕಾಸು ಖಾತೆಯ ಜವಾಬ್ದಾರಿಯೂ ಅಜಿತ್ ದಾದಾ ಅವರ ಮೇಲಿತ್ತು. ಆದಾಗ್ಯೂ, ಅವರ ಆಕಸ್ಮಿಕ ಮರಣದ ಬಳಿಕ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಹಣಕಾಸು ಖಾತೆಯ ಜವಾಬ್ದಾರಿಯನ್ನು ತಮ್ಮ ಬಳಿಯೇ ಉಳಿಸಿಕೊಂಡಿದ್ದಾರೆ.

ಫಡ್ನವೀಸ್ ಬಜೆಟ್ ಅಧಿವೇಶನದಲ್ಲಿ ಬಜೆಟ್‌ನ್ನು ಕೂಡ ಮಂಡಿಸಿದ್ದರು. ಆದರೆ ಅದಾದ ಬಳಿಕ ಈ ಖಾತೆಯನ್ನು ಎನ್‌ಸಿಪಿಗೆ ನೀಡುವ ಸಾಧ್ಯತೆ ಇತ್ತು, ಆದರೆ ಎನ್‌ಸಿಪಿ ಇನ್ನೂ ಹಣಕಾಸು ಖಾತೆಯನ್ನು ಪಡೆದಿಲ್ಲ. ಅದೇ ರೀತಿ, ಈಗ ದಿವಂಗತ ಅಜಿತ್ ಪವಾರ್ ಅವರ ಪುತ್ರ ಜಯ್ ಪವಾರ್ ಈ ಖಾತೆಯ ಬಗ್ಗೆ ಪ್ರಮುಖ ಮಾಹಿತಿಯನ್ನು ನೀಡಿದ್ದಾರೆ.

ಇಂದು, ದಿವಂಗತ ಅಜಿತ್ ಪವಾರ್ ಅವರ ಜೊತೆಯಲ್ಲಿ ಮಾಜಿ ಹಾಗೂ ಹಾಲಿ ಜಿಲ್ಲಾ ಪರಿಷತ್ ಮತ್ತು ಪಂಚಾಯತ್ ಸಮಿತಿ ಸದಸ್ಯರಿಗೆ ಬಾರಾಮತಿಯಲ್ಲಿ ಕೃತಜ್ಞತಾ ಸಭೆಯನ್ನು ಆಯೋಜಿಸಲಾಗಿದೆ. ಪಕ್ಷದ ಯುವ ನಾಯಕ ಜಯ್ ಪವಾರ್ ಅವರ ಸಮ್ಮುಖದಲ್ಲಿ ಕೃತಜ್ಞತಾ ಸಭೆ ನಡೆಯಿತು. ಬಾರಾಮತಿ ತಾಲೂಕಿನ ಮಾಜಿ ಹಾಗೂ ಹಾಲಿ ಜಿಲ್ಲಾ ಪರಿಷತ್ ಮತ್ತು ಪಂಚಾಯತ್ ಸಮಿತಿಯ ಹೆಚ್ಚಿನ ಸಂಖ್ಯೆಯ ಸದಸ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಬಾರಾಮತಿ ಪಂಚಾಯತ್ ಸಮಿತಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ಜಯ್ ಪವಾರ್ ಹಣಕಾಸು ಖಾತೆಯ ಬಗ್ಗೆ ದೊಡ್ಡ ಹೇಳಿಕೆ ನೀಡಿದರು.

ಕೃತಜ್ಞತಾ ಸಭೆಯಲ್ಲಿ ಮಾತನಾಡಿದ ಜಯ್ ಪವಾರ್, ಸುನೇತ್ರಾ ಪವಾರ್ ದೇಶದಲ್ಲಿ ಅತಿ ಹೆಚ್ಚು ಮತಗಳಿಂದ ಎಂಎಲ್ಎ ಆಗಿ ಆಯ್ಕೆಯಾಗಿದ್ದಕ್ಕಾಗಿ ಎಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇನೆ ಎಂದು ಹೇಳಿದರು. ಬಾರಾಮತಿಯಲ್ಲಿ ದಾದಾ ಅವರ ಸ್ಮಾರಕವನ್ನು ನಿರ್ಮಿಸಲಾಗುವುದು ಎಂದು ಅವರು ಹೇಳಿದರು.

ಶಿಕ್ಷಣ ಸಚಿವರ ರಾಜೀನಾಮೆಗೆ ಮಹಾ ವಿಪಕ್ಷಗಳ ಆಗ್ರಹ

ಮೊದಲ ಪುಟದಿಂದ

ಈ ವಿಷಯದಲ್ಲಿ ಕಠಿಣ ಕ್ರಮ ಕೈಗೊಳ್ಳುವುದು ಸರಕಾರದ ನಿಲುವಾಗಿದೆ. ಈ ಪರೀಕ್ಷೆಗಳನ್ನು ಪಾರದರ್ಶಕ ರೀತಿಯಲ್ಲಿ ಹೇಗೆ ನಡೆಸುವುದು ಎಂಬುದರ ಕುರಿತು ಕೂಡ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುವುದು ಎಂದು ಅವರು ಹೇಳಿದರು.

ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಶಿವಸೇನೆಯ (ಯುಬಿಟಿ) ಅಂಬಾದಾಸ್ ದಾನ್ವೆ, ಸರಕಾರವು ಇತ್ತೀಚೆಗೆ ನೀಟ್-ಯುಜಿ ಪತ್ರಿಕೆ ಸೋರಿಕೆಯ ಉದಾಹರಣೆಯನ್ನು ಹೊಂದಿರುವಾಗ, ಟಿಇಟಿ ಮತ್ತು ಇತರ ಪರೀಕ್ಷೆಗಳಿಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಏಕೆ ತೆಗೆದುಕೊಳ್ಳಬಾರದು ಎಂದು ಕೇಳಿದರು.

ಕೋಟ್ಯಂತರ ರೂ.ಗಳ ಅಕ್ರಮಗಳು ನಡೆಯುತ್ತಿವೆ ಮತ್ತು ಪತ್ರಿಕೆ ಸೋರಿಕೆ ಹೆಚ್ಚಾಗಿ ನಡೆಯುತ್ತಿದೆ ಎಂದು ಅವರು ಆರೋಪಿಸಿದರು. ಪರೀಕ್ಷೆಗಳನ್ನು ಸರಿಯಾಗಿ ನಡೆಸಲು ಸಾಧ್ಯವಾಗದಿದ್ದರೆ, ಶಿಕ್ಷಣ ಸಚಿವರು ರಾಜೀನಾಮೆ ನೀಡಬೇಕು ಎಂದು ದಾನ್ವೆ ಹೇಳಿದರು. ದೋಷಗಳಿಲ್ಲದೆ ಪರೀಕ್ಷೆಗಳನ್ನು ನಡೆಸುವುದು ಸರಕಾರದ ಜವಾಬ್ದಾರಿ ಎಂದು ಕಾಂಗ್ರೆಸ್ ಸದಸ್ಯ ಸತೇಜ್ ಪಾಟೀಲ್ ನುಡಿದರು.

ಈ ವಿಷಯದಲ್ಲಿ ಸಿಬಿಐ ತನಿಖೆಯ ಅವಶ್ಯಕತೆಯಿದೆ ಎಂದು ಕಾಂಗ್ರೆಸ್‌ನ ಜಯಂತ್ ಅಸ್ಗಾಂವ್ಕರ್ ಒತ್ತಾಯಿಸಿದರೆ, ದೇಶದಲ್ಲಿ ಶಿಕ್ಷಣ ವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ ಎಂದು ಅವರ ಪಕ್ಷದ ಸಹೋದ್ಯೋಗಿ ಧೀರಜ್ ಲಿಂಗಡೆ ಹೇಳಿದರು.

ರಾಜ್ಯದಲ್ಲಿ ಇದನ್ನು ತಡೆಯಲು ಕಾನೂನುಗಳು ಕಠಿಣವಾಗಿಲ್ಲದ ಕಾರಣ ಪತ್ರಿಕೆ ಸೋರಿಕೆ ಸಾಮಾನ್ಯವಾಗಿದೆ ಎಂದು ಎನ್‌ಸಿಪಿ (ಎಸ್‌ಪಿ)ಯ ಅರುಣ್ ಲಾಡ್ ಟೀಕಿಸಿದರು.

ಮಹಾರಾಷ್ಟ್ರದಲ್ಲಿ ಟಿಇಟಿ ಪ್ರಶ್ನೆಪತ್ರಿಕೆಯ ಒಂದು ಭಾಗ ಸೋರಿಕೆಯಾದ ಹಿನ್ನೆಲೆಯಲ್ಲಿ ಥಾಣೆ ಜಿಲ್ಲೆಯ ಪೊಲೀಸರು ಮೂವರನ್ನು ಬಂಧಿಸಿದ ಬಳಿಕ ಕಳೆದ ರವಿವಾರ ನಡೆಯಲಿದ್ದ ಪರೀಕ್ಷೆಯನ್ನು ಮುಂದೂಡಲಾಯಿತು.

ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ಪ್ರಶ್ನೆ ಪತ್ರಿಕೆ ಸೋರಿಕೆಯ ತನಿಖೆಗಾಗಿ ಥಾಣೆ ಜಂಟಿ ಪೊಲೀಸ್ ಆಯುಕ್ತ ಪಂಜಾಬ್‌ರಾವ್ ಉಗಾಳೆ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವನ್ನು ರಚಿಸುವಂತೆ ಆದೇಶಿಸಿದರು.

ಟಿಇಟಿ ಸೇರಿದಂತೆ ಪರೀಕ್ಷಾ ಪೇಪರ್ ಸೋರಿಕೆಯನ್ನು ತಡೆಯುವಲ್ಲಿ ಸರಕಾರ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿ ವಿರೋಧ ಪಕ್ಷಗಳ ಶಾಸಕರು ವಿಧಾನ ಭವನದ ಮೆಟ್ಟಿಲುಗಳ ಮೇಲೆ ಪ್ರತಿಭಟನೆ ನಡೆಸಿ ಬಳಿಕ ಸದನದಿಂದ ಹೊರನಡೆದರು, ಸೋಮವಾರ ಮಹಾರಾಷ್ಟ್ರ ವಿಧಾನಸಭೆಯಲ್ಲಿ ಪ್ರತಿಭಟನೆಗಳು ಭುಗಿಲೆದ್ದವು.

ನಾನಾ ಪಟೋಲೆ ಸೇರಿದಂತೆ ಹಿರಿಯ ನಾಯಕರು ಟಿಇಟಿ ಮತ್ತು ನೀಟ್ ಸೋರಿಕೆಯ ಹಿಂದಿರುವವರು ಬಿಜೆಪಿಗೆ ಸಂಬಂಧ ಹೊಂದಿದ್ದಾರೆ ಎಂದು ಆರೋಪಿಸಿ, ಪರೀಕ್ಷಾ ಪ್ರಕ್ರಿಯೆಯ ಸಮಗ್ರ ತನಿಖೆಗಾಗಿ ಒತ್ತಾಯಿಸಿದರು.

ಟಿಇಟಿ ಪೇಪರ್‌ಸೋರಿಕೆ ಮತ್ತು ಮಹಾರಾಷ್ಟ್ರ ಸಾರ್ವಜನಿಕ ಸೇವಾ ಆಯೋಗದ (ಯುಪಿಎಸ್‌ಸಿ) ಪರೀಕ್ಷೆಗಳನ್ನು ಆನ್‌ಲೈನ್ ಮೋಡ್‌ನಲ್ಲಿ ನಡೆಸುವ ನಿರ್ಧಾರದ ಕುರಿತು ವಿರೋಧ ಪಕ್ಷಗಳ ಸದಸ್ಯರು ರಾಜ್ಯ ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಕಾಂಗ್ರೆಸ್‌ನ ಸತೇಜ್ ಪಾಟೀಲ್, ಶಿವಸೇನೆ (ಯುಬಿಟಿ) ನಾಯಕ ಅಂಬಾದಾಸ್ ದಾನ್ವೆ ಮತ್ತು ಎನ್‌ಸಿಪಿ (ಎಸ್‌ಪಿ) ನಾಯಕ ಜಿತೇಂದ್ರ ಅವ್ಹಾಡ್ ನೇತೃತ್ವದಲ್ಲಿ, ವಿರೋಧ ಪಕ್ಷದ ಶಾಸಕರು ವಿಧಾನ ಭವನದ ಮೆಟ್ಟಿಲುಗಳ ಮೇಲೆ ಪ್ರತಿಭಟನೆ ನಡೆಸಿದರು.

ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ವಿಜಯ್ ವಡೆಟ್ಟಿವಾರ್, ಪದೇ ಪದೇ ಪ್ರಶ್ನೆಪತ್ರಿಕೆ ಸೋರಿಕೆಯಾಗುವುದರಿಂದ ರಾಜ್ಯದ ಮಾನ ಹಾಳಾಗಿದೆ ಮತ್ತು ಲಕ್ಷಾಂತರ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಭವಿಷ್ಯಕ್ಕೆ ಧಕ್ಕೆಯಾಗಿದೆ ಎಂದು ಆರೋಪಿಸಿದರು.

ಸದನವು ಇಂದು ಸಮಾವೇಶಗೊಂಡ ತಕ್ಷಣ, ಪ್ರಶ್ನೆಪತ್ರಿಕೆ ಸೋರಿಕೆಯ ವಿಷಯದ ಕುರಿತು ಚರ್ಚಿಸಲು ಕಲಾಪಗಳನ್ನು ಸ್ಥಗಿತಗೊಳಿಸುವಂತೆ ವಡೆಟ್ಟಿವಾರ್ ಒತ್ತಾಯಿಸಿದರು.

ಲಕ್ಷಾಂತರ ಅಭ್ಯರ್ಥಿಗಳು ಹಲವಾರು ವರ್ಷಗಳಿಂದ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿದ್ದರೂ ಸರಕಾರವು ಪಾರದರ್ಶಕ ರೀತಿಯಲ್ಲಿ ಪರೀಕ್ಷೆಗಳನ್ನು ನಡೆಸುವಲ್ಲಿ ವಿಫಲವಾಗಿರುವುದನ್ನು ಅವರು ಪ್ರಶ್ನಿಸಿದರು.

ಭಾರೀ ಮಳೆಯಿಂದ ಸಾಮಾನ್ಯ ಜನಜೀವನ ಅಸ್ತವ್ಯಸ್ತ

ಮೊದಲ ಪುಟದಿಂದ

ನಗರದಾದ್ಯಂತ ಸಾಧಾರಣ ಮಳೆಯಾಗಿದೆ. ಮಾಟುಂಗಾದಲ್ಲಿ ಅತಿ ಹೆಚ್ಚು 53.4 ಮಿ.ಮೀ., ನಂತರ ರಾವ್ಳಿ ಕ್ಯಾಂಪ್‌ನಲ್ಲಿ 46.72 ಮಿ.ಮೀ., ದಾದರ್ ಅಗ್ನಿಶಾಮಕ ಠಾಣೆಯಲ್ಲಿ 45.6 ಮಿ.ಮೀ., ಮಲಬಾರ್ ಹಿಲ್‌ನಲ್ಲಿ 37.2 ಮಿ.ಮೀ. ಮತ್ತು ನಾಯರ್ ಆಸ್ಪತ್ರೆ ಪ್ರದೇಶದಲ್ಲಿ 33.77 ಮಿ.ಮೀ. ಮಳೆಯಾಗಿದೆ.

ಮುಂಬಯಿಗೆ 'ಆರೆಂಜ್ ಎಚ್ಚರಿಕೆ', ಪಾಲ್ಘರ್‌ಗೆ 'ರೆಡ್ ಅಲರ್ಟ್'

ಭಾರೀ ಮಳೆಯಾಗುವ ಸಾಧ್ಯತೆಯ ಹಿನ್ನೆಲೆಯಲ್ಲಿ ದೇಶದ ಆರ್ಥಿಕ ರಾಜಧಾನಿ ಮುಂಬೈಗೆ 'ಆರೆಂಜ್ ಎಚ್ಚರಿಕೆ' ನೀಡಲಾಗಿದೆ. ಸೋಮವಾರ ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಈ ಮಾಹಿತಿಯನ್ನು ನೀಡಿದೆ.

ಐಎಂಡಿ ಪ್ರಕಾರ, ಈ ಅವಧಿಯಲ್ಲಿ ಗುಡುಗು, ಮಿಂಚು ಮತ್ತು ಬಲವಾದ ಗಾಳಿಯೊಂದಿಗೆ ಧಾರಾಕಾರ ಮಳೆಯಾಗುವ ನಿರೀಕ್ಷೆಯಿದೆ.

ಹವಾಮಾನ ಇಲಾಖೆಯ ಇತ್ತೀಚಿನ ಜಿಲ್ಲಾವಾರು ಮುನ್ಸೂಚನೆಯ ಪ್ರಕಾರ, ಮುಂಬೈನ ಕೆಲವು ಸ್ಥಳಗಳಲ್ಲಿ ಶುಕ್ರವಾರದವರೆಗೆ ಭಾರೀ ಮಳೆಯಾಗುವ ನಿರೀಕ್ಷೆಯಿದೆ.

ಮಂಗಳವಾರ ಸ್ವಲ್ಪ ಸಮಾಧಾನಕರ ಅಂಶವಿರುತ್ತದೆ, ಗುಡುಗು ಸಹಿತ ಮಳೆ ಮತ್ತು ಗಂಟೆಗೆ 40 ಕಿಲೋಮೀಟರ್ ವೇಗದಲ್ಲಿ ಗಾಳಿ ಬೀಸುವ ಕಾರಣ 'ಎಲ್ಲೋ ಎಚ್ಚರಿಕೆ' ಜಾರಿಯಲ್ಲಿರುತ್ತದೆ.

ಸೋಮವಾರ ಮತ್ತು ಬುಧವಾರದಂದು ಪ್ರತ್ಯೇಕ ಸ್ಥಳಗಳಲ್ಲಿ ಭಾರೀ ಮಳೆ, ಮಿಂಚು - ಗುಡುಗು ಸಹಿತ ಮಳೆ ಮತ್ತು ಬಿರುಗಾಳಿ ಬೀಸುವ ಸಾಧ್ಯತೆ ಇದೆ ಎಂದು ಐಎಂಡಿ ಮುನ್ಸೂಚನೆ ನೀಡಿದೆ. ಗುರುವಾರ ಮತ್ತು ಶುಕ್ರವಾರದಂದು ಪ್ರತ್ಯೇಕ ಸ್ಥಳಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇದೆ.

ನೆರೆಯ ಪಾಲ್ಘರ್ ಜಿಲ್ಲೆಗೆ ಸೋಮವಾರ 'ರೆಡ್ ಅಲರ್ಟ್' ಘೋಷಿಸಲಾಗಿದ್ದು, ಮುಂದಿನ ಐದು ದಿನಗಳವರೆಗೆ ರಾಯಗಢಕ್ಕೆ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ.

ಮಹಾರಾಷ್ಟ್ರ ಶಾಲೆಗಳಲ್ಲಿ ಮರಾಠಿ ಕಡ್ಡಾಯ

ಮೊದಲ ಪುಟದಿಂದ

ಶಾಲೆಯು ಮರಾಠಿ ಕಲಿಸುತ್ತಿಲ್ಲ ಎಂದು ಯಾವುದೇ ದೂರು ಬಂದರೆ, ತನಿಖೆ ನಡೆಸಲಾಗುವುದು. ಉಲ್ಲಂಘನೆ ಕಂಡುಬಂದಲ್ಲಿ ಮೊದಲು ಶಾಲೆಗೆ 1 ಲಕ್ಷ ರೂ. ದಂಡ ವಿಧಿಸುವ ನೋಟಿಸ್ ನೀಡಲಾಗುತ್ತದೆ. ಅದು ಇನ್ನೂ ಪಾಲಿಸಲು ವಿಫಲವಾದರೆ, ಸರಕಾರದ ಹೊಸ 2026 ಜಿಆರ್ ಶಾಲೆಯ ಮಾನ್ಯತೆಯನ್ನು ರದ್ದುಗೊಳಿಸಲು ನಮಗೆ ಅಧಿಕಾರ ನೀಡುತ್ತದೆ ಎಂದು ಅವರು ಹೇಳಿದರು.

2026ರ ಸರಕಾರಿ ನಿರ್ಣಯದ ಮೂಲಕ ಮಾನ್ಯತೆ ಹಿಂಪಡೆಯುವ ನಿಬಂಧನೆಯನ್ನು ಮೊದಲ ಬಾರಿಗೆ ಪರಿಚಯಿಸಲಾಗಿದೆ ಎಂದ ಭೂಸೆ ಅವರು,ಇದು ಮರಾಠಿ ಭಾಷಾ ನೀತಿಯನ್ನು ಜಾರಿಗೊಳಿಸುವುದನ್ನು ಹೆಚ್ಚು ಕಠಿಣಗೊಳಿಸುತ್ತದೆ ಎಂದರು.

ವರುಣ್ ಸರ್ದೇಸಾಯಿ (ಶಿವಸೇನೆ-ಯುಬಿಟಿ) ಮತ್ತು ನಿತಿನ್ ರಾವುತ್ (ಕಾಂಗ್ರೆಸ್) ರಂತಹ ವಿರೋಧ ಪಕ್ಷದ ಸದಸ್ಯರು ನೀತಿಯ ಪರಿಣಾಮಕಾರಿತ್ವವನ್ನು ಪ್ರಶ್ನಿಸಿದರಲ್ಲದೆ, ನಿಯಮಗಳನ್ನು ಉಲ್ಲಂಘಿಸಿದ ಶಾಲೆಗಳು ಎಷ್ಟು ಕಂಡುಬಂದಿವೆ, ಎಷ್ಟು ಶಾಲೆಗಳಿಗೆ ದಂಡ ವಿಧಿಸಲಾಗಿದೆ ಅಥವಾ ಮಾನ್ಯತೆ ರದ್ದುಗೊಳಿಸಲಾಗಿದೆ ಮತ್ತು 2020ರಲ್ಲಿ ಮರಾಠಿಯನ್ನು ಕಡ್ಡಾಯಗೊಳಿಸಿದ ಬಳಿಕ ಸರಕಾರವು ಕಠಿಣ ಜಾರಿ ಕ್ರಮಗಳನ್ನು ಪರಿಚಯಿಸಲು ಸುಮಾರು 5 ವರ್ಷಗಳ ಕಾಲ ಏಕೆ ಕಾಯಬೇಕಾಯಿತು ಎಂದು ಕೇಳಿದರು.

ಕ್ರಮ ಕೈಗೊಳ್ಳಲಾದ ಶಾಲೆಗಳ ಹೆಸರುಗಳನ್ನು ಬಹಿರಂಗಪಡಿಸಲು ಕೋರಿದ ಸರ್ದೇಸಾಯಿ,ರಿಯಾಯಿತಿ ದರದಲ್ಲಿ ಸರಕಾರಿ ಭೂಮಿಯನ್ನು ಪಡೆದ ಆದರೆ ಮರಾಠಿಯನ್ನು ಕಲಿಸಲು ವಿಫಲವಾದ ಸಂಸ್ಥೆಗಳು ಹೆಚ್ಚುವರಿ ಕ್ರಮವನ್ನು ಎದುರಿಸಬೇಕಾಗುತ್ತದೆಯೇ ಎಂದು ಪ್ರಶ್ನಿಸಿದರು.

ಸುನಿಲ್ ಪ್ರಭು (ಶಿವಸೇನೆ-ಯುಬಿಟಿ) ರಂತಹ ಕೆಲವು ಶಾಸಕರು ಅಸ್ತಿತ್ವದಲ್ಲಿರುವ 1 ಲಕ್ಷ ರೂ. ದಂಡವನ್ನು 10 ಲಕ್ಷ ರೂ.ಗಳಿಗೆ ಹೆಚ್ಚಿಸಬೇಕೆಂದು ಒತ್ತಾಯಿಸಿದರು.

ನಿಯಮ ಜಾರಿಯನ್ನು ಬೆಂಬಲಿಸುವಂತೆ ಶಾಸಕರಿಗೆ ಮನವಿ ಮಾಡಿದ ಭೂಸೆ, ಶಾಸಕರು ತಮ್ಮ ಕ್ಷೇತ್ರಗಳಲ್ಲಿನ ಶಾಲೆಗಳಿಗೆ ಭೇಟಿ ನೀಡಬೇಕು ಮತ್ತು ಬೋಧನಾ ಮಾಧ್ಯಮವನ್ನು ಲೆಕ್ಕಿಸದೆ ಪ್ರತಿ ಸಂಸ್ಥೆಯಲ್ಲಿ ಮರಾಠಿಯನ್ನು ಕಲಿಸಲಾಗುತ್ತಿದೆ ಎಂದು ಖಚಿತಪಡಿಸಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಕಾನೂನನ್ನು ಜಾರಿಗೊಳಿಸಲು ವಿಫಲರಾದ ಅಧಿಕಾರಿಗಳು ಸ್ವತಃ ಕ್ರಮವನ್ನು ಎದುರಿಸಬೇಕಾಗುತ್ತದೆ ಎಂದು ಅವರು ಎಚ್ಚರಿಸಿದರು. ಶಾಲೆಗಳು ಕೂಡ ರಾಷ್ಟ್ರಗೀತೆಯಂತೆಯೇ 'ಜೈ ಜೈ ಮಹಾರಾಷ್ಟ್ರ ಮಾಝಾ' ಎಂಬ ರಾಜ್ಯ ಗೀತೆಯನ್ನು ಗೌರವದಿಂದ ಹಾಡುವ ನಿರೀಕ್ಷೆಯಿದೆ ಮತ್ತು ಸರಕಾರವು ಈ ಅವಶ್ಯಕತೆಯ ಬಗ್ಗೆ ಜಾಗೃತಿ ಮೂಡಿಸುವುದನ್ನು ಮುಂದುವರಿಸುತ್ತದೆ ಎಂದು ಸಚಿವರು ಹೇಳಿದರು.

ಜಪ್ತಿ ಮಾಡಿದ್ದ ಮದ್ಯದ ಲೆಕ್ಕದಲ್ಲಿ ಭಾರೀ ವ್ಯತ್ಯಾಸ ; ಇಬ್ಬರು ಅಬಕಾರಿ ಅಧಿಕಾರಿಗಳ ಮನೆ-ಕಚೇರಿಗಳ ಮೇಲೆ ಲೋಕಾಯುಕ್ತ ದಾಳಿ

ಬೆಂಗಳೂರು, ಜೂ. 29 - ಕಳೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಬಾರ್ ಹಾಗೂ ವೈನ್ ಶಾಪ್‌ಗಳ ಮೇಲೆ ನಡೆದ ದಾಳಿಯ ವೇಳೆ ಜಪ್ತಿ ಮಾಡಲಾಗಿದ್ದ ಕೋಟ್ಯಂತರ ಮೌಲ್ಯದ ಮದ್ಯದ ಲೆಕ್ಕದಲ್ಲಿ ಭಾರೀ ಪ್ರಮಾಣದ ವ್ಯತ್ಯಾಸ ಪತ್ತೆಯಾದ ಹಿನ್ನೆಲೆಯಲ್ಲಿ, ಇಬ್ಬರು ಪ್ರಭಾವೀ ಅಬಕಾರಿ ಅಧಿಕಾರಿಗಳ ಮನೆ ಹಾಗೂ ಕಚೇರಿಗಳ ಮೇಲೆ ಲೋಕಾಯುಕ್ತ ದಾಳಿ ನಡೆದಿದೆ.

ಹೊರಮಾವು ವಲಯದ ಅಬಕಾರಿ ಇನ್‌ಸ್ಪೆಕ್ಟರ್ ಸುಧೀರ್ ಕುಮಾರ್ ಹಾಗೂ ಅಬಕಾರಿ ಉಪ ಅಧೀಕ್ಷಕ (ಡಿವೈಎಸ್‌ಪಿ) ಅಬೂಬಕರ್ ಎ. ಮುಜಾವರ್ ಅವರ ನಿವಾಸ ಮತ್ತು ಕಚೇರಿ ಸೇರಿ ಐದು ಕಡೆಗಳಲ್ಲಿ ಇಂದು ಬೆಳಗಿನ ಜಾವ ಏಕಕಾಲಕ್ಕೆ ಶೋಧ ಕಾರ್ಯಾಚರಣೆ ನಡೆಯಿತು.



ಲೋಕಾಯುಕ್ತ ಎಸ್.ಪಿ. ಶಿವ ಪ್ರಕಾಶ್ ದೇವರಾಜ್ ಅವರ ನೇತೃತ್ವದಲ್ಲಿ ವಿಶೇಷ ತಂಡವು ದಾಖಲೆಗಳು, ಆಸ್ತಿಪಾಸ್ತಿ ವಿವರಗಳು ಹಾಗೂ ಬ್ಯಾಂಕ್ ಖಾತೆಗಳ ಪರಿಶೀಲನೆ ನಡೆಸುತ್ತಿದೆ.

2023ರ ಜನವರಿ 4ರಂದು, ಚುನಾವಣಾ ಪೂರ್ವಸಿದ್ಧತೆಯ ಭಾಗವಾಗಿ ಬೆಂಗಳೂರಿನ ಪ್ರಮುಖ ಬಾರ್ ಹಾಗೂ ರೆಸ್ಟೋರೆಂಟ್‌ಗಳ ಮೇಲೆ ಅಬಕಾರಿ ಇಲಾಖೆ ದಾಳಿ ನಡೆಸಿತ್ತು. ಶೋಭಾ ಎಂಬವರ ಅಧಿಕೃತ ದೂರಿನ ಮೇರೆಗೆ ನಡೆದ ಈ ಕಾರ್ಯಾಚರಣೆಯಲ್ಲಿ, ನಿಯಮ ಬಾಹಿರವಾಗಿ ಸಂಗ್ರಹಿಸಿದ್ದ ಮದ್ಯವನ್ನು ವಶಪಡಿಸಿಕೊಂಡಿದ್ದರು. ಆದರೆ, ಸರ್ಕಾರಿ ದಾಸ್ತಾನು ಕೊಠಡಿಗೆ ಒಪ್ಪಿಸುವಾಗ ಭಾರೀ ಪ್ರಮಾಣದ ಮದ್ಯ ಲಪಟಾಯಿಸಿ ಲೆಕ್ಕದಲ್ಲಿ ವ್ಯತ್ಯಾಸ ತೋರಿಸಿರುವುದು ತನಿಖೆಯಿಂದ ಬೆಳಕಿಗೆ ಬಂದಿದೆ.

ಸರ್ಕಾರದ ವಶದಲ್ಲಿದ್ದ ಮದ್ಯವನ್ನು ದುರುಪಯೋಗಪಡಿಸಿಕೊಂಡು ಕರ್ತವ್ಯ ಲೋಪ ಎಸಗಿರುವ ಕುರಿತು ಲೋಕಾಯುಕ್ತ ಪೊಲೀಸರು ಇಬ್ಬರು ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮಿಸ್‌ಕಂಡಕ್ಟ್ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿದ್ದಾರೆ.

ಈ ಬೆಳವಣಿಗೆ ಅಬಕಾರಿ ಇಲಾಖೆಯ ಭ್ರಷ್ಟಾಚಾರದ ಜಾಲವನ್ನು ಬಯಲಿಗೆಳೆದಿದ್ದು, ಇಲಾಖೆಯೊಳಗೆ ತಲ್ಲಣ ಉಂಟಾಗಿದೆ. ಹೆಚ್ಚಿನ ತನಿಖೆ ಪ್ರಗತಿಯಲ್ಲಿದೆ.

ಪ್ರಧಾನಿ ಹುದ್ದೆಗೆ ಅಪಮಾನಿಸಿದ ಹರಿಪ್ರಸಾದ್ ಹೇಳಿಕೆ ನಿಂದನೀಯ : ಎನ್. ರವಿಕುಮಾರ್



ಬೆಂಗಳೂರು, ಜೂ. 29 - ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಕೆಪಿಸಿಸಿ ಮುಖಂಡ ಬಿ.ಕೆ. ಹರಿಪ್ರಸಾದ್ ಅವರು, ಆಕಳನ್ನು (ಹಸುವನ್ನು) ಕೊಂದವನು ಜೈಲಿಗೆ ಹೋಗುತ್ತಾನೆ, ಆದರೆ, ಮನುಷ್ಯರನ್ನು ಕೊಂದವನು ಮುಖ್ಯಮಂತ್ರಿ ಮತ್ತು ಪ್ರಧಾನಮಂತ್ರಿ ಆಗುತ್ತಾನೆ. ನೈಜ ಕಾಂಗ್ರೆಸ್ ಕಾರ್ಯಕರ್ತರು ಇದಕ್ಕೆ ಅವಕಾಶ ನೀಡಬಾರದು ಎಂದು ನೀಡಿರುವ ಅತ್ಯಂತ ನಿಂದನೀಯ, ಪ್ರಜಾಪ್ರಭುತ್ವ ವಿರೋಧಿ ಹಾಗೂ ಪ್ರಚೋದನಾಕಾರಿ ಹೇಳಿಕೆಯನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ತೀವ್ರವಾಗಿ ಖಂಡಿಸಿದ್ದಾರೆ.

ಈ ಕುರಿತು ಜಂಟಿ ಮಾಧ್ಯಮ ಪ್ರಕಟಣೆ ಬಿಡುಗಡೆ ಮಾಡಿರುವ ಅವರು, ದೇಶದ ಮತದಾರ ಪ್ರಭು ತನಗಿರುವ ಸಾಂವಿಧಾನಿಕ ಹಕ್ಕನ್ನು ಬಳಸಿ, ಸಂಪೂರ್ಣ ವಿವೇಚನೆಯಿಂದ ಬಹುಮತ ನೀಡಿ ಪ್ರಧಾನಿ ಹಾಗೂ ಮುಖ್ಯಮಂತ್ರಿಗಳನ್ನು ಆಯ್ಕೆ ಮಾಡಿದ್ದಾರೆ. ಹರಿಪ್ರಸಾದ್ ಅವರ ಮಾತುಗಳು ಕೇವಲ ವ್ಯಕ್ತಿಗಳ ಮೇಲಿನ ದ್ವೇಷವಲ್ಲ, ಇಡೀ ದೇಶದ ಮತದಾರರಿಗೆ ಹಾಗೂ ಭಾರತದ ಸಂವಿಧಾನಕ್ಕೆ ಮಾಡಿದ ಘೋರ ಅಪಮಾನ ಎಂದಿದ್ದಾರೆ.

ರಕ್ತಸಿಕ್ತ ಇತಿಹಾಸ ಯಾರದ್ದು?:

ಕೊಲೆಗಡುಕರ ಮತ್ತು ಹಿಂಸೆಯ ಇತಿಹಾಸ ಯಾರದ್ದು ಎಂಬುದು ಇಡೀ ಜಗತ್ತಿಗೆ ತಿಳಿದಿದೆ. 1984ರ ಸಿಖ್ಖರ ಮಾರಣಹೋಮ ಯಾರ ಆಡಳಿತದಲ್ಲಿ ನಡೆಯಿತು? ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿ ಸಾಕ್ಷಾತ್ ಸಂವಿಧಾನವನ್ನೇ ಕಟುಕನಂತೆ ಹೊಸಕಿ ಹಾಕಿದ್ದು ಇದೇ ಕಾಂಗ್ರೆಸ್ ಅಲ್ಲವೇ? ಇಂತಹ ಇತಿಹಾಸವಿಟ್ಟುಕೊಂಡು ಕಾಂಗ್ರೆಸ್ ನಾಯಕರು ಇಂದು ದೇಶಪ್ರೇಮಿಗಳ ಬಗ್ಗೆ ನೀತಿಪಾಠ ಮಾಡಲು ಹೊರಟಿರುವುದು ಹಾಸ್ಯಾಸ್ಪದ.

ಗೋಹತ್ಯೆ ತಡೆ ಕಾನೂನನ್ನು ವಿರೋಧಿಸುವ ಮೂಲಕ ಭಾರತೀಯರ ಸಾಂಸ್ಕೃತಿಕ ಹಾಗೂ ಧಾರ್ಮಿಕ ಭಾವನೆಗಳೊಂದಿಗೆ ಸದಾ ಚೆಲ್ಲಾಟವಾಡುವ ಕಾಂಗ್ರೆಸ್‌ನ ತುಷ್ಟೀಕರಣದ ರಾಜಕಾರಣವನ್ನು ದೇಶದ ಜನ ಈಗಾಗಲೇ ತಿರಸ್ಕರಿಸಿದ್ದಾರೆ. ಗೋಮಾತೆಯನ್ನು ಪೂಜಿಸುವ ಕೋಟ್ಯಂತರ ಜನರ ಭಾವನೆಗಳಿಗೆ ಕಾಂಗ್ರೆಸ್ ನಿರಂತರವಾಗಿ ಧಕ್ಕೆ ತರುತ್ತಿದೆ ಎಂದು ಹೇಳಿದ್ದಾರೆ.

ಹರಿಪ್ರಸಾದ್ ಅವರೇ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ತೀರ್ಪನ್ನು ಗೌರವಿಸುವುದನ್ನು ಕಲಿಯಿರಿ. ಮೊದಲು ನಿಮ್ಮ ನಾಲಿಗೆಯ ಮೇಲೆ ಹಿಡಿತವಿರಲಿ. ಇಂತಹ ಹಗುರ ಹಾಗೂ ಸಮಾಜದ ಶಾಂತಿ ಕದಡುವ ಹೇಳಿಕೆಗಳನ್ನು ರಾಜ್ಯದ ಪ್ರಜ್ಞಾವಂತ ಜನತೆ ಎಂದಿಗೂ ಸಹಿಸುವುದಿಲ್ಲ. ಇಂತಹ ಪ್ರಜಾಪ್ರಭುತ್ವ ವಿರೋಧಿ ಮತ್ತು ದ್ವೇಷದ ಹೇಳಿಕೆಗಳನ್ನು ಒಪ್ಪಬಾರದು ಹಾಗೂ ದೇಶವನ್ನು ಒಡೆಯುವ ಇಂತಹ ನಾಯಕರ ವಿರುದ್ಧ ಧ್ವನಿ ಎತ್ತಬೇಕು ಎಂದು ಎನ್. ರವಿಕುಮಾರ್ ಕರೆ ನೀಡಿದ್ದಾರೆ.

ರಾಯಚೂರು : ಕಟ್ಟಡವೊಂದರ ಮೇಲ್ಛಾವಣಿ ಕುಸಿದು ಮೂವರು ವಿದ್ಯಾರ್ಥಿಗಳು ಮೃತ್ಯುವಶ

ರಾಯಚೂರು, ಜೂ.29 - ಜಿಲ್ಲೆಯ ದೇವದುರ್ಗ ಪಟ್ಟಣದ ಬಸ್ ನಿಲ್ದಾಣದ ಸಮೀಪ ಸಂಭವಿಸಿದ ಭೀಕರ ದುರಂತದಲ್ಲಿ ಕಟ್ಟಡವೊಂದರ ಮೇಲ್ಛಾವಣಿ ಕುಸಿದು ಮೂವರು ವಿದ್ಯಾರ್ಥಿಗಳು ಮೃತಪಟ್ಟಿದ್ದು, ಮೂವರು ವಿದ್ಯಾರ್ಥಿಗಳು ಗಂಭೀರವಾಗಿ ಗಾಯಗೊಂಡಿದ್ದಾರೆ.

ಮೃತರನ್ನು ನಾಗರಾಜ ಕ್ಯಾದಿಗೇರಾ (22), ರವಿಕುಮಾರ ಸಮುದ್ರ (21) ಹಾಗೂ ಅರ್ಜುನ ಎಂದು ಗುರುತಿಸಲಾಗಿದೆ. ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಅರ್ಜುನ ಅವರನ್ನು ಹೆಚ್ಚಿನ ಚಿಕಿತ್ಸೆಗೆ ರಾಯಚೂರಿನ ರಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತಪಟ್ಟಿದ್ದಾರೆ.

ಗಾಯಗೊಂಡಿರುವ ಪ್ರಭು ಮಾತ್ಪಳ್ಳಿ, ಅಭಿಷೇಕ್ ಎಚ್.ಎನ್. ತಾಂಡ ಹಾಗೂ ಉಮೇಶ ಕರಿಗುಡ್ಡ ಅವರನ್ನು ದೇವದುರ್ಗ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಪೊಲೀಸರ ಮಾಹಿತಿ ಪ್ರಕಾರ, ಪಟ್ಟಣದ ಬಸ್ ನಿಲ್ದಾಣದ ಪಕ್ಕದಲ್ಲಿರುವ ಸಾಜಿದ್ ಎಂಬವರಿಗೆ ಸೇರಿದ ಕಟ್ಟಡದ ಮೇಲ್ಛಾವಣಿ ಏಕಾಏಕಿ ಕುಸಿದು ಈ ದುರಂತ ಸಂಭವಿಸಿದೆ. ಮೃತರು ಮತ್ತು ಗಾಯಾಳುಗಳೆಲ್ಲರೂ ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ವಸತಿ ನಿಲಯದ ವಿದ್ಯಾರ್ಥಿಗಳಾಗಿದ್ದಾರೆ.

ವಿದ್ಯಾರ್ಥಿಗಳು ಕಿರುಚಿತ್ರವೊಂದರ ಪೋಸ್ಟರ್‌ಗಳನ್ನು ವೀಕ್ಷಿಸುತ್ತಾ ಕಟ್ಟಡದ ಛಾವಣಿಯ ಕೆಳಭಾಗದಲ್ಲಿ ನಿಂತು ಮಾತನಾಡುತ್ತಿದ್ದ ವೇಳೆ ಏಕಾಏಕಿ ಮೇಲ್ಛಾವಣಿ ಕುಸಿದಿದೆ ಎಂದು ತಿಳಿದುಬಂದಿದೆ. ಪರಿಣಾಮ ಕೆಲವರು ಅವಶೇಷಗಳಡಿ ಸಿಲುಕಿಕೊಂಡಿದ್ದರು.

ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕಾಗಮಿಸಿ ತುರ್ತು ಕಾರ್ಯಾಚರಣೆ ನಡೆಸಿದರು. ಅವಶೇಷಗಳಡಿ ಸಿಲುಕಿದ್ದ ವಿದ್ಯಾರ್ಥಿಗಳನ್ನು ಹೊರತೆಗೆದು ಆಸ್ಪತ್ರೆಗೆ ಸಾಗಿಸಲಾಯಿತು. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ರವಾನಿಸಲಾಗಿದೆ.

ಘಟನಾ ಸ್ಥಳಕ್ಕೆ ಪಟ್ಟಣ ಪೊಲೀಸ್ ಠಾಣೆಯ ಪಿಐ ಮಂಜುನಾಥ, ತಹಶೀಲ್ದಾರ್ ನಾಗಮ್ಮ ಕಟ್ಟಿಮನಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಆಸ್ಪತ್ರೆಗೆ ಭೇಟಿ ನೀಡಿದ ಶಾಸಕಿ ಕರೆಮ್ಮ ಜಿ. ನಾಯಕ ಹಾಗೂ ತಹಶೀಲ್ದಾರ್ ನಾಗಮ್ಮ ಕಟ್ಟಿಮನಿ ಗಾಯಾಳುಗಳ ಆರೋಗ್ಯ ವಿಚಾರಿಸಿ, ಮೃತ ವಿದ್ಯಾರ್ಥಿಗಳ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕಟ್ಟಡ ಕುಸಿತಕ್ಕೆ ಕಾರಣಗಳ ಕುರಿತು ತನಿಖೆ ಕೈಗೊಳ್ಳಲಾಗಿದೆ. ವಿದ್ಯಾರ್ಥಿಗಳ ಸಾವಿನಿಂದ ಪಟ್ಟಣದಲ್ಲಿ ಶೋಕದ ವಾತಾವರಣ ನಿರ್ಮಾಣವಾಗಿದೆ.

ರಸ್ತೆ ಅಪಘಾತಗಳಲ್ಲಿ ಮೃತಪಟ್ಟವರಲ್ಲಿ ಬೆಂಗಳೂರಿಗೆ ಮೊದಲ ಸ್ಥಾನ!



ಬೆಂಗಳೂರು, ಜೂ. 29 - ಸಿಲಿಕಾನ್ ಸಿಟಿ ಬೆಂಗಳೂರು ರಸ್ತೆ ಸುರಕ್ಷತೆಯಲ್ಲಿ ಮತ್ತೊಮ್ಮೆ ಆತಂಕಕಾರಿ ದಾಖಲೆ ಬರೆದಿದೆ.

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಬಿಡುಗಡೆ ಮಾಡಿದ 2024ರ ರಸ್ತೆ ಅಪಘಾತಗಳ ವರದಿ ಪ್ರಕಾರ, ದೇಶದ ಪ್ರಮುಖ ನಗರಗಳಲ್ಲಿ ರಸ್ತೆ ಅಪಘಾತಗಳು ಹಾಗೂ ಅತಿ ವೇಗದ ಚಾಲನೆಯಿಂದ ಸಂಭವಿಸಿದ ದುರಂತಗಳಲ್ಲಿ ಬೆಂಗಳೂರು ಮೊದಲ ಸ್ಥಾನದಲ್ಲಿದೆ.

ನಗರದ ನೇರ ಮತ್ತು ಸುಸ್ಥಿತಿಯಲ್ಲಿರುವ ರಸ್ತೆಗಳಲ್ಲಿ 4,161 ಅಪಘಾತಗಳು ಸಂಭವಿಸಿದ್ದು, 766 ಜನರು ಸಾವನ್ನಪ್ಪಿದ್ದಾರೆ ಮತ್ತು 3,463 ಜನರು ಗಾಯಗೊಂಡಿದ್ದಾರೆ. ತಿರುವು ರಸ್ತೆಗಳಲ್ಲಿ 415 ಅಪಘಾತಗಳು ಸಂಭವಿಸಿ 87 ಮಂದಿ ಮೃತಪಟ್ಟಿದ್ದಾರೆ. ಗುಂಡಿಗಳಿಂದಾಗಿ 2 ಅಪಘಾತಗಳು ಸಂಭವಿಸಿ ಇಬ್ಬರು ಸಾವನ್ನಪ್ಪಿದ್ದಾರೆ. ನಿರ್ಮಾಣ ಹಂತದಲ್ಲಿರುವ ರಸ್ತೆಗಳಲ್ಲಿ 21 ಅಪಘಾತಗಳು ಸಂಭವಿಸಿ 6 ಮಂದಿ ಜೀವ ಕಳೆದುಕೊಂಡಿದ್ದಾರೆ.

ಅತಿ ವೇಗದ ಚಾಲನೆಯಿಂದಾಗಿ 4,290 ಅಪಘಾತಗಳು ಸಂಭವಿಸಿದ್ದು, 776 ಜನರು ಬಲಿಯಾಗಿದ್ದಾರೆ. ಮದ್ಯಪಾನ ಮಾಡಿ ವಾಹನ ಚಲಾಯಿಸಿದ ಪರಿಣಾಮ 129 ಅಪಘಾತಗಳು ಸಂಭವಿಸಿ 45 ಮಂದಿ ಸಾವನ್ನಪ್ಪಿದ್ದಾರೆ.

2024ರಲ್ಲಿ ಬೆಂಗಳೂರಿನಲ್ಲಿ ಒಟ್ಟು 4,769 ಅಪಘಾತಗಳು ದಾಖಲಾಗಿದ್ದು, 894 ಜನರು ಸಾವನ್ನಪ್ಪಿದ್ದಾರೆ ಮತ್ತು 4,022 ಜನರು ಗಾಯಗೊಂಡಿದ್ದಾರೆ. ದೆಹಲಿ 5,657 ಅಪಘಾತಗಳೊಂದಿಗೆ ಮೊದಲ ಸ್ಥಾನದಲ್ಲಿದೆ. 2023ಕ್ಕಿಂತ ಅಪಘಾತಗಳ ಸಂಖ್ಯೆ ಸ್ವಲ್ಪ ಕಡಿಮೆಯಾದರೂ, 2020ಕ್ಕಿಂತ ಗಣನೀಯವಾಗಿ ಹೆಚ್ಚಾಗಿದೆ.

ನಗರದಲ್ಲಿ ದ್ವಿಚಕ್ರ ವಾಹನ ಅಪಘಾತಗಳ ಪ್ರಮಾಣ ಹೆಚ್ಚು. 2,175 ಪ್ರಕರಣಗಳಲ್ಲಿ 467 ಸವಾರರು ಮೃತಪಟ್ಟಿದ್ದಾರೆ. ಪಾದಚಾರಿಗಳಿಗೆ ಸಂಬಂಧಿಸಿದಂತೆ 216 ಅಪಘಾತಗಳು ಸಂಭವಿಸಿದ್ದು, 241 ಮಂದಿ ಬಲಿಯಾಗಿದ್ದಾರೆ. ಬಹುತೇಕ ಅಪಘಾತಗಳು ಹವಾಮಾನವು ಸ್ವಚ್ಛವಾಗಿದ್ದ ಸಂದರ್ಭದಲ್ಲೇ ನಡೆದಿರುವುದು ವರದಿಯ ವಿಶೇಷ ಅಂಶವಾಗಿದೆ.

ವಿದ್ಯುತ್ ನಿಗಮಗಳ ಖಾಸಗೀಕರಣ ಬೇಡ ಎನ್ನುವ ಬಗ್ಗೆ ಸಂಪುಟ ಸಭೆಯಲ್ಲಿ ತೀರ್ಮಾನ : ಸಿಎಂ ಡಿ ಕೆ ಶಿವಕುಮಾರ್

ಡಿಕೆ ಡಿಕೆ... ಎಂಬ ನಿಮ್ಮ ಈ ಘೋಷಣೆ 2028 ರ ಚುನಾವಣೆಯಲ್ಲಿ ಮೊಳಗಬೇಕು

ಬೆಂಗಳೂರು, ಜೂ. 29 - ವಿದ್ಯುತ್ ನಿಗಮಗಳನ್ನು ಖಾಸಗೀಕರಣ ಮಾಡದಿರುವ ವಿಚಾರವಾಗಿ ನಾನೊಬ್ಬನೇ ತೀರ್ಮಾನ ಮಾಡಲು ಸಾಧ್ಯವಿಲ್ಲ. ಈ ಬಗ್ಗೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡಿ, ನಿಮ್ಮ ಅಭಿಪ್ರಾಯದ ಮೇರೆಗೆ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಭರವಸೆ ನೀಡಿದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ ಹಾಗೂ ಅಸೋಸಿಯೇಷನ್ ಒಕ್ಕೂಟದವರು ಬೆಂಗಳೂರು ಅರಮನೆ ಮೈದಾನದಲ್ಲಿ ಸೋಮವಾರ ಏರ್ಪಡಿಸಿದ್ದ ಅಭಿನಂದನೆ ಸಮಾರಂಭದಲ್ಲಿ ಶಿವಕುಮಾರ್ ಮಾತನಾಡಿದ ಅವರು, ವಿದ್ಯುತ್ ನಿಗಮಗಳನ್ನು ಖಾಸಗೀಕರಣ ಮಾಡಬಾರದು ಎಂದು ನೀವು ಹೋರಾಟ ಮಾಡುತ್ತಿದ್ದೀರಿ. ನಾನು ಏನು ಮಾತನಾಡಲಿದ್ದೇನೆ ಎಂದು ಎಲ್ಲರೂ ನೋಡುತ್ತಿದ್ದಾರೆ. ಇದು ಪ್ರಸ್ತಾಪವಾಗಿದ್ದು 2003ರಲ್ಲಿ, ಈ ಕುರಿತ ಕಾನೂನು ತಂದವರು ಯಾರು? ಬಿಜೆಪಿ ಸರ್ಕಾರ. ನೀವು ಯಾರೂ ಆಗ ಅದರ ವಿರುದ್ಧ ಧ್ವನಿ ಎತ್ತಲಿಲ್ಲ. ಯಾರೂ ಹೋರಾಟ ಮಾಡಲಿಲ್ಲ, ಧಿಕ್ಕಾರ ಹೇಳಲಿಲ್ಲ. ನನ್ನ ಬಳಿ ಹಾಗೂ ಜಾರ್ಜ್ ಅವರ ಬಳಿ ಬಂದು ಖಾಸಗೀಕರಣಕ್ಕೆ ಅವಕಾಶ ನೀಡಬೇಡಿ ಎಂದು ಹೇಳುತ್ತಿದ್ದೀರಿ. ನೀವು ಸದಾ ನನ್ನ ಜೊತೆ ಇರುತ್ತೀರಿ ಎಂದು ಹೇಳುತ್ತಿದ್ದೀರಿ. ತಪ್ಪು ಮಾಡಿದವರ ವಿರುದ್ಧ ಧಿಕ್ಕಾರ ಹೇಳಿದಾಗ, ಒಳ್ಳೆಯ ಕೆಲಸ ಮಾಡಿದವರಿಗೆ ಜೈಕಾರ ಹೇಳಿದಾಗ ಮಾತ್ರ ಅದಕ್ಕೆ ಗೌರವ ಬರುತ್ತದೆ ಎಂದು ತಿಳಿಸಿದರು.

ಬಿಜೆಪಿ ತಂದಿರುವ ಕಾನೂನು ಸರಿ ಇಲ್ಲ ಎಂದು ನಿಮ್ಮ ಸಂಘಟನೆಗಳ ಅಧ್ಯಕ್ಷರುಗಳು ಎಂದಾದರೂ ಮಾತನಾಡಿದ್ದಾರಾ? ಬಿಜೆಪಿಯವರು ಎಲ್ಲಾ ವಿಚಾರದಲ್ಲೂ ಟೀಕೆಗಳನ್ನು ಮಾಡಿಕೊಂಡು ಇದ್ದಾರೆ. ಅವರ ಟೀಕೆಗಳೆಲ್ಲಾ ಸಾಯುತ್ತವೆ, ನಮ್ಮ ಕೆಲಸಗಳು ಮಾತ್ರ ಉಳಿಯುತ್ತವೆ. ನೀವೆಲ್ಲರೂ ನಮ್ಮ ಸರ್ಕಾರದ ಹೆಬ್ಬೆಟ್ಟು. ಮುಂಬೈ, ದೆಹಲಿ ಸೇರಿದಂತೆ ಅನೇಕ ನಗರಗಳಲ್ಲಿ ಖಾಸಗೀಕರಣ ಮಾಡಲಾಗಿದೆ. ನೂರಾರು ವರ್ಷಗಳಿಂದ ವಿದ್ಯುತ್ ಲೈನ್ ಎಳೆದವರು ನೀವು, ಬೆಂಬಲ ಕೊಟ್ಟಿದ್ದು ಸರ್ಕಾರ. ಈಗ ಖಾಸಗಿ ಕಂಪೆನಿಯವರು ದುಡ್ಡು ಮಾಡಲು, ಸಂಪರ್ಕ ನೀಡುವ ಅಧಿಕಾರ ಅವರಿಗೆ ನೀಡಬೇಕಂತೆ? ಎಂದರು.

ನಂಬಿಕೆ ಮನುಷ್ಯನ ಶ್ರೇಷ್ಠ ಗುಣ. ನಿಮ್ಮ ಮೇಲೆ ನಂಬಿಕೆ ಇಟ್ಟು ನಾನು ಮುಂದಿನ ಸಚಿವ ಸಂಪುಟದಲ್ಲಿ ತೀರ್ಮಾನ ಮಾಡುತ್ತೇನೆ. ನೀವು ಮೋಸ ಮಾಡಿದರೆ ನಾನು ವಾಜಪೇಯಿ ಅವರ ಸರ್ಕಾರದ ತೀರ್ಮಾನದ ಕಡೆ ಮುಖ ಮಾಡುತ್ತೇನೆ. ಅದಕ್ಕೆ ಅವಕಾಶ ಮಾಡಿಕೊಡಬೇಡಿ. ನಮ್ಮ ನಿಮ್ಮ ಸಂಬಂಧ ಗಟ್ಟಿಯಾಗಿರಬೇಕು ಎಂದರು.

ಇಂಧನ ಇಲಾಖೆಯಲ್ಲಿ ಈ ಹಿಂದೆಯೂ ಕ್ರಾಂತಿಕಾರಿ ಬದಲಾವಣೆ ತಂದಿದ್ದೇವೆ, ಈಗಲೂ ಜಾರ್ಜ್ ಅವರ ನೇತೃತ್ವದಲ್ಲಿ ಅನೇಕ ಯೋಜನೆ ತೀರ್ಮಾನ ಮಾಡಿದ್ದಾರೆ. ಈ ಮಧ್ಯೆ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರದಲ್ಲಿ ಇಂಧನ ಉತ್ಪಾದನೆ ಹೆಚ್ಚಿಸಲು ಯಾವುದಾದರೂ ಯೋಜನೆ ತರಲಾಯಿತೇ? ಇಲಾಖೆಗೆ ಹೊಸ ಭವನ ಕಟ್ಟಿದರೇ? ಕಳೆದ ನಮ್ಮ ಸರ್ಕಾರದ ವೇಳೆ ಇಂಧನ ಭವನ ಕಟ್ಟಲಾಯಿತು.



ರೇಸ್ ಕೋರ್ಸ್ ರಸ್ತೆ ಬಳಿ ಖಾಲಿ ಜಾಗದಲ್ಲಿ ಇಂಧನ ಭವನ ನಿರ್ಮಿಸಿ ಸಾಕ್ಷಿಗುಡ್ಡೆ ನಿರ್ಮಿಸಿದ್ದೇವೆ. ಕ್ರೆಡೆಲ್ ಕಟ್ಟಡ ನೋಡಿದ್ದೀರಾ? ನಾವು ಅವಕಾಶ ಸಿಕ್ಕಾಗೆಲ್ಲಾ ಸಾಕ್ಷಿಗುಡ್ಡೆ ನೀಡಿದ್ದೇವೆ ಎಂದು ಹೇಳಿದರು.

7 ವರ್ಷಕ್ಕೊಮ್ಮೆ ವೇತನ ಪರಿಷ್ಕರಣೆ ಮಾಡಲಾಗುತ್ತಿತ್ತು. ನಾನು ಅದನ್ನು ಐದು ವರ್ಷಕ್ಕೆ ಇಳಿಸಿದೆ. ನಾನು ಒಂದೇ ಬಾರಿಗೆ ಎಷ್ಟು ಪರ್ಸೆಂಟ್ ವೇತನ ಹೆಚ್ಚಿಸಿದೆ? ನೀವು ಅದನ್ನು ನೆನಪಿಟ್ಟುಕೊಂಡಿದ್ದೀರೋ.. ಮರೆತಿದ್ದೀರೋ? ನಮ್ಮ ತೀರ್ಮಾನ ನಿಮ್ಮ ಬದುಕಿಗೆ ಅನುಕೂಲವಾಯಿತಲ್ಲವೇ? ನಾನು ಯಾವತ್ತೂ ಇಂಜಿನಿಯರ್‌ಗಳಿಂದ ಪೆನ್ಸಿಲ್‌ನಲ್ಲಿ ಬರೆಸಿ, ನಂತರ ಅದನ್ನು ತಿದ್ದುವ ಕೆಲಸ ಮಾಡಿಲ್ಲ. ನಾನು ಒಬ್ಬರಿಂದ ಒಂದು ರೂಪಾಯಿ ಲಂಚ ಪಡೆಯದೇ 25 ಸಾವಿರ ಜನರನ್ನು ಇಲಾಖೆಯಲ್ಲಿ ನೇಮಕ ಮಾಡಿದೆ.

ಇದನ್ನು ನೀವು ಸ್ಮರಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಇಂಧನ ಇಲಾಖೆ ಸಿಬ್ಬಂದಿ ಕತ್ತಲನ್ನು ದೂರ ಮಾಡುವ ಕಾಯಕ ಜೀವಿಗಳು

ದೀಪ ಉರಿಯುವಾಗ ಅದರ ಬೆಳಕು ಕಾಣುತ್ತದೆ. ಅದರ ಹಿಂದೆ ಇರುವ ಬತ್ತಿ ಹಾಗೂ ಎಣ್ಣೆ ಯಾರಿಗೂ ಕಾಣುವುದಿಲ್ಲ. ನೀವೆಲ್ಲರೂ ಕತ್ತಲನ್ನು ದೂರ ಮಾಡುವ ಕಾಯಕ ಜೀವಿಗಳು. ಹಗಲು ರಾತ್ರಿ ಎನ್ನದೇ ನೀವು ಶ್ರಮಿಸುತ್ತಿದ್ದೀರಿ. ಜನರು ತಮ್ಮ ಶಾಸಕರ ದೂರವಾಣಿ ಸಂಪರ್ಕ ಹೊಂದಿರುತ್ತಾರೋ ಇಲ್ಲವೋ ಆದರೆ, ಪವರ್‌ಮ್ಯಾನ್ ಹಾಗೂ ಇಂಜಿನಿಯರ್‌ಗಳ ದೂರವಾಣಿ ಸಂಪರ್ಕ ಇಟ್ಟುಕೊಂಡೇ ಇರುತ್ತಾರೆ. ನಿಮಗೆ ಸರ್ಕಾರವನ್ನು ಅಧಿಕಾರಕ್ಕೆ ತರುವ ಹಾಗೂ ಸರ್ಕಾರವನ್ನು ಅಧಿಕಾರದಿಂದ ತೆಗೆಯುವ ಸಾಮರ್ಥ್ಯವಿದೆ ಎಂದು ನನಗೆ ಅರಿವಿದೆ ಎಂದರು.

ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ನಾನು ಇಂಧನ ಇಲಾಖೆ ಜವಾಬ್ದಾರಿ ತೆಗೆದುಕೊಂಡಾಗ ಈ ಇಲಾಖೆ ಹೇಗಿತ್ತು, ಈಗ ಹೇಗಾಗಿದೆ ಎಂದು ನೀವು ನೋಡಬಹುದು. ನಾನು ಈ ಜವಾಬ್ದಾರಿ ತೆಗೆದುಕೊಳ್ಳುವಾಗ ಅನೇಕರು ನನಗೆ ಈ ಖಾತೆ ಬೇಡ, ಕೆಟ್ಟ ಹೆಸರು ಬರುತ್ತದೆ ಎಂದು ಸಲಹೆ ನೀಡಿದ್ದರು. ನನಗೆ ಇತಿಹಾಸ ಓದುವುದು, ಸ್ಮರಿಸುವುದರಲ್ಲಿ ನಂಬಿಕೆ ಇಲ್ಲ. ಇತಿಹಾಸ ಸೃಷ್ಟಿಸುವುದರಲ್ಲಿ ಹೆಚ್ಚು ನಂಬಿಕೆ. ಇದನ್ನು ಗಮನದಲ್ಲಿಟ್ಟುಕೊಂಡು ನಾನು ಕೆಲಸ ಮಾಡಿದೆ. ಇಂದು ಕರ್ನಾಟಕದಲ್ಲಿ ನಾನು ಕೈಗೊಂಡಿರುವ ತೀರ್ಮಾನ ದೇಶಕ್ಕೆ ಮಾದರಿಯಾಗಿರುವ ತೀರ್ಮಾನ. ನಾನು ಇಲಾಖೆ ಜವಾಬ್ದಾರಿ ಪಡೆದಾಗ ಶೇ.19 ರಷ್ಟು ಇಂಧನ ಸೋರಿಕೆ ವರ್ಗಾವಣೆ ವೇಳೆ ಆಗುತ್ತಿತ್ತು. ಈಗ ಅದು ಶೇ.10ಗೆ ಇಳಿಸಲಾಗಿದೆ ಎಂದು ವಿವರಿಸಿದರು.

ಗಡಿಯಲ್ಲಿ ಸೈನಿಕರು, ಶಾಲೆಯಲ್ಲಿ ಶಿಕ್ಷರು, ಕಾರ್ಖಾನೆಯಲ್ಲಿ ಕಾರ್ಮಿಕ, ಹೊಲದಲ್ಲಿ ಕೃಷಿಕನಿರುತ್ತಾನೆ. ಇವರೆಲ್ಲರಿಗೂ ಬೆಳಕು ನೀಡುತ್ತಿರುವ ಧೀಮಂತ ಸಿಬ್ಬಂದಿ ನೀವು. ನಿಮ್ಮ ಸೇವೆಯನ್ನು ಎಲ್ಲರೂ ಸ್ಮರಿಸುತ್ತಾರೆ. ಇಂದಿರಾ ಗಾಂಧಿ ಅವರ ಕಾಲದಲ್ಲಿ ನಿಮ್ಮ ಸಂಸ್ಥೆಗಳಿಗೆ ಹೊಸ ರೂಪ ನೀಡಲಾಯಿತು. ನಿಮ್ಮ ಆಡಳಿತ ವ್ಯವಸ್ಥೆ ಪ್ರತಿನಿಧಿ ನಮ್ಮ ಸರ್ಕಾರದ ಜೊತೆಯಲ್ಲಿ ಇರಬೇಕು ಎಂದು ತೀರ್ಮಾನ ಮಾಡಿದವರು ಶ್ರೀಮತಿ ಇಂದಿರಾ ಗಾಂಧಿ ಎಂಬುದನ್ನು ಮರೆಯಬಾರದು. ನಾವು ನಮ್ಮ ಮೂಲ ಮರೆತರೆ ಯಶಸ್ಸು ಸಾಧಿಸಲು ಸಾಧ್ಯವಿಲ್ಲ. ನಿಮ್ಮ ಇಲಾಖೆಯ ಸಿಬ್ಬಂದಿ ಧ್ವನಿಯನ್ನು ವ್ಯವಸ್ಥೆಯಲ್ಲಿ, ಇಲಾಖೆಯ ಮಂಡಳಿಯಲ್ಲಿ ಪ್ರಸ್ತಾಪಿಸುವ ಶಕ್ತಿ ಕೊಟ್ಟಿದ್ದು ಇಂದಿರಾ ಗಾಂಧಿಯವರು ಎಂದು ತಿಳಿಸಿದರು.

ನೀವು ನಮ್ಮನ್ನು ಕಾಳಜಿ ಮಾಡಿದರೆ, ನಾವು ನಿಮ್ಮನ್ನು ಕಾಳಜಿ ಮಾಡುತ್ತೇವೆ

ನೀವು ಡಿಕೆ, ಡಿಕೆ ಎಂದು ಕೂಗಿದಾಕ್ಷಣ ನಾನು ಹಿಗ್ಗುವುದಿಲ್ಲ, ಜಗ್ಗುವುದಿಲ್ಲ. ನಮ್ಮದು ಏನಿದ್ದರೂ ಗೀವ್ ಆ್ಯಂಡ್ ಟೇಕ್ (ಕೊಡು, ಕೊಳ್ಳುವ), ಶೇರಿಂಗ್ ಆ್ಯಂಡ್ ಕೇರಿಂಗ್ ಪದ್ಧತಿ. ನೀವು ನಮಗೆ ಕಾಳಜಿ ತೋರಬೇಕು, ನಾವು ನಿಮಗೆ ಕಾಳಜಿ ತೋರಬೇಕು. ಈ ಒಪ್ಪಂದಕ್ಕೆ ನೀವು ಬದ್ಧರಾಗಿರುತ್ತೀರಾ? 2028ರಲ್ಲಿ ನಿಮ್ಮ ಸರ್ಕಾರ ಮತ್ತೆ ಅಧಿಕಾರಕ್ಕೆ ಬರಬೇಕು ತಾನೆ? ನುಡಿದಂತೆ ನಡೆಯಬೇಕು, ಕೊಟ್ಟ ಮಾತು ಉಳಿಸಿಕೊಳ್ಳಬೇಕು. ಈಗಾಗಲೇ ನಮ್ಮ ಸಚಿವರಾದ ಜಾರ್ಜ್ ಅವರು ಎಲ್ಲಾ ಎಸ್ಕಾಂ ಅಧ್ಯಕ್ಷರುಗಳು ಡಿ.ಕೆ. ಶಿವಕುಮಾರ್ ಕಾಲದಲ್ಲಿ ಯಾವುದೇ ಕಾರಣಕ್ಕೂ ಖಾಸಗೀಕರಣ ಆಗಬಾರದು ಎಂದು ನನಗೆ ಕಿವಿಯಲ್ಲಿ ಹೇಳಿದ್ದಾರೆ. ಈ ವಿಚಾರದಲ್ಲಿ ನನ್ನ ಅಭಿಪ್ರಾಯ ನಾನು ಈಗಾಗಲೇ ಹೇಳಿದ್ದು, ಈ ವಿಚಾರವನ್ನು ನಾನೊಬ್ಬನೇ ತೀರ್ಮಾನ ಮಾಡುವುದಿಲ್ಲ. ನಿಮ್ಮ ಅಭಿಪ್ರಾಯವೇ ನನ್ನ ಅಭಿಪ್ರಾಯ. ನೀವು ನನ್ನ ಮೇಲೆ ಇಟ್ಟಿರುವ ನಂಬಿಕೆ ಉಳಿಸಿಕೊಳ್ಳುತ್ತೇನೆ ಎಂದು ವಾಗ್ದಾನ ನೀಡಿದರು.

ಚಿಕ್ಕಬಳ್ಳಾಪುರ ಹೋಂ ಸ್ಟೇನಲ್ಲಿ ಬೆಂಗಳೂರಿನ ಯುವತಿ ಸಾವು: ಇದು ಲವ್ ಜಿಹಾದ್ ಕೊಲೆ ಎಂದ ತಾಯಿ

ಚಿಕ್ಕಬಳ್ಳಾಪುರ, ಜು. 29 - ಜಿಲ್ಲೆಯ ನಂದಿಗಿರಿಧಾಮ ಪೊಲೀಸ್ ಠಾಣಾ ವ್ಯಾಪ್ತಿಯ ಮುದ್ದೇನಹಳ್ಳಿ ಬಳಿಯ ಹೋಂ ಸ್ಟೇ ಒಂದರಲ್ಲಿ ಬೆಂಗಳೂರು ಮೂಲದ ಯುವತಿಯೊಬ್ಬಳು ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ಬೆಳಕಿಗೆ ಬಂದಿದೆ.

ಮೃತ ಯುವತಿಯನ್ನು ಸಾಯಿ ಸುರಭಿ ಎಂದು ಗುರುತಿಸಲಾಗಿದ್ದು, ಈಕೆಯ ಪ್ರಿಯಕರ ಎನ್ನಲಾದ ಕೇರಳ ಮೂಲದ ಸಂಜೀತ್ ಅಲಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಮಗಳ ಸಾವಿನ ಬೆನ್ನಲ್ಲೇ ತಾಯಿ ಗೀತಾ ಅವರು ಮಾಧ್ಯಮಗಳ ಎದುರು ಕಣ್ಣೀರು ಹಾಕಿದ್ದು, ಇದೊಂದು ಲವ್ ಜಿಹಾದ್ ಕೊಲೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

ಬೆಂಗಳೂರು ಮೂಲದ ಸಾಯಿ ಸುರಭಿ ಹಾಗೂ ಕೇರಳದ ಕೋಝಿಕ್ಕೋಡ್ ನಿವಾಸಿ, ಕ್ಯಾಬ್ ಡ್ರೈವರ್ ಸಂಜೀತ್ ಅಲಿ ಕಳೆದ ಶನಿವಾರ ಮುದ್ದೇನಹಳ್ಳಿ ಬಳಿಯ ಹೋಂ ಸ್ಟೇಗೆ ಬಂದು ತಂಗಿದ್ದರು. ಇಂದು (ಸೋಮವಾರ) ಚೆಕ್-ಔಟ್ ಸಮಯ ಮುಗಿದರೂ ರೂಮ್ ತೆರೆಯದಿದ್ದಾಗ ಹೋಂ ಸ್ಟೇ ಕೇರ್‌ಟೇಕರ್ ಬಂದು ಪರಿಶೀಲಿಸಿದಾಗ ಪ್ರಕರಣ ಬೆಳಕಿಗೆ ಬಂದಿದೆ. ಸ್ಥಳಕ್ಕೆ ಚಿಕ್ಕಬಳ್ಳಾಪುರ ಎಸ್‌ಪಿ ಕುಶಾಲ್ ಚೌಕ್ಸಿ ಹಾಗೂ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಯುವತಿಯ ಶವ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ನೇಣು ಹಾಕಿದ್ದ ಹಗ್ಗವನ್ನು ಕತ್ತರಿಸಿದ ಸ್ಥಿತಿಯಲ್ಲಿ ಇತ್ತು. ಅಲ್ಲದೆ, ಸ್ಥಳದಲ್ಲಿ ಕೆಲವು ಮಾತ್ರೆಗಳು ಪತ್ತೆಯಾಗಿದ್ದು, ವಿಷ ಸೇವಿಸಿರುವ ಸಾಧ್ಯತೆಗಳೂ ದಟ್ಟವಾಗಿವೆ. ರೂಮ್‌ನಲ್ಲಿ ಒಂದು ಡೈರಿ ಸಿಕ್ಕಿದ್ದು, ಅದರಲ್ಲಿ ಹಲವು ವಿಚಾರಗಳನ್ನು ಬರೆಯಲಾಗಿದೆ. ಇದರ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ನನ್ನ ಮಗಳನ್ನು ಕೊಂದುಬಿಟ್ಟ

ಸಾಯಿ ಸುರಭಿ ಬೆಂಗಳೂರಿನ ದಯಾನಂದ ಸಾಗರ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಸ್ನೇಹಿತರ ಮೂಲಕ ಕೇರಳ ಮೂಲದ ಕ್ಯಾಬ್ ಡ್ರೈವರ್ ಸಂಜೀತ್ ಅಲಿ ಪರಿಚಯವಾಗಿದ್ದ. ಪರಿಚಯ ಬೆಳೆದಂತೆ ಆಕೆಯನ್ನು ಪ್ರೀತಿಸುವುದಾಗಿ ಹೇಳಿ ಸಂಜೀತ್ ಕಿರುಕುಳ ನೀಡಲು



ಆರಂಭಿಸಿದ್ದ. ಇದರಿಂದ ಬೇಸತ್ತು ಆಕೆಗೆ ಬೇರೆ ಕಡೆ ವಿದ್ಯಾಭ್ಯಾಸ ಕೊಡಿಸಿದರೂ, ಆತ ಅಲ್ಲೂ ಹುಡುಕಿಕೊಂಡು ಬಂದು ಕಾಟ ಕೊಡುವುದನ್ನು ಮುಂದುವರಿಸಿದ್ದ. ಅವನು ನನ್ನ ಮಗಳನ್ನು ಸಂಪೂರ್ಣವಾಗಿ ಮರಳು ಮಾಡಿದ್ದ ಅಷ್ಟೇ ಅಲ್ಲದೆ, ಆಕೆಯನ್ನು ಡ್ರಗ್ಸ್ ಅಡಿಕ್ಟ್ ಮಾಡಿದ್ದ. ನಾನು ಕಷ್ಟಪಟ್ಟು ಎರಡು ಮೂರು ಕಡೆ ಚಿಕಿತ್ಸೆ ಕೊಡಿಸಿ ಆಕೆಯನ್ನು ಗುಣಮುಖಳನ್ನಾಗಿ ಮಾಡಿದ್ದೆ. ಇತ್ತೀಚೆಗೆ ಆಕೆ ತುಂಬಾ ಚೆನ್ನಾಗಿ, ಆರೋಗ್ಯವಾಗಿದ್ದಳು ಎಂದು ತಾಯಿ ಗೀತಾ ಕಣ್ಣೀರು ಹಾಕಿದ್ದಾರೆ.

ಇತ್ತೀಚೆಗಷ್ಟೇ ಮುದ್ದೇನಹಳ್ಳಿಯಲ್ಲಿ ಸಿಯೋಥೆರಪಿಸ್ಟ್ ಆಗಿ ಕೆಲಸಕ್ಕೆ ಸೇರಿದ್ದ ಸಾಯಿ ಸುರಭಿ, ಶನಿವಾರದಂದು ಅಲ್ಲಿ ಸತ್ಸಂಗ ಇದೆ, ನಾನು ಅಲ್ಲೇ ಇರುತ್ತೇನೆ ಎಂದು ತಾಯಿಗೆ ಹೇಳಿ ಹೋಗಿದ್ದಳು. ಆದರೆ ಸಂಜೀತ್ ಅಲಿ ಮತ್ತೊಮ್ಮೆ ಆಕೆಯನ್ನು ಹುಡುಕಿಕೊಂಡು ಬಂದು ಮರಳು ಮಾಡಿ ಹೋಂ ಸ್ಟೇಗೆ ಕರೆದೊಯ್ದಿದ್ದಾನೆ. ಅವನೇ ಸಂಚು ರೂಪಿಸಿ ನನ್ನ ಮಗಳನ್ನು ಕೊಲೆ ಮಾಡಿದ್ದಾನೆ ಎಂದು ತಾಯಿ ಗೀತಾ ಆಕ್ರೋಶ ಹೊರಹಾಕಿದ್ದು, ಆರೋಪಿಗೆ ಕಠಿಣ ಶಿಕ್ಷೆಯಾಗಬೇಕೆಂದು ಒತ್ತಾಯಿಸಿದ್ದಾರೆ.

ಪೊಲೀಸರು ಕ್ರಮ ಕೈಗೊಂಡಿಲ್ಲ:

ಸಂಜೀತ್ ಅಲಿ ವಿರುದ್ಧ ನಾವು ದೂರು ನೀಡಿದ್ದರೂ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ. ಪೊಲೀಸರು ಆತನ ವಿರುದ್ಧ ಕ್ರಮ ಕೈಗೊಂಡಿದ್ದರೆ ಸುರಭಿ ಬದುಕಿರುತ್ತಿದ್ದಳು ಎಂದು ಮಾವ ಶಂಕರನಾರಾಯಣ ಪಬ್ಲಿಕ್ ಟಿವಿಗೆ ತಿಳಿಸಿದ್ದಾರೆ.

ದಾಖಲಾಗಿತ್ತು ನಾಪತ್ತೆ ಕೇಸ್

ಕಳೆದ ವರ್ಷ ಸುರಭಿ ಮನೆಗೆ ಬಾರದೇ ನಾಪತ್ತೆಯಾಗಿದ್ದಳು. ಪುತ್ರಿ ನಾಪತ್ತೆಯಾದ ಹಿನ್ನೆಲೆಯಲ್ಲಿ ಬನಶಂಕರಿ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಕೇಸ್ ದಾಖಲಾಗಿತ್ತು. ಬಳಿಕ ಪೊಲೀಸರು ಸ್ನೇಹಿತರ ಮನೆಯಲ್ಲಿದ್ದ ಸುರಭಿಯನ್ನ ಪತ್ತೆ ಮಾಡಿ ಪೋಷಕರ ಬಳಿ ಒಪ್ಪಿಸಿದ್ದರು.

ವಿಜಯೇಂದ್ರರನ್ನು ಅಧ್ಯಕ್ಷ ಸ್ಥಾನದಿಂದ ಕಿತ್ತು ಹಾಕಿ ; ಡಿವಿಎಸ್ ಆಡಿಯೋ ಸಂಭಾಷಣೆ ವೈರಲ್

ಬೆಂಗಳೂರು, ಜೂ. 29 - ಬಿ.ವೈ. ವಿಜಯೇಂದ್ರ ಅವರನ್ನು ರಾಜ್ಯಾಧ್ಯಕ್ಷ ಸ್ಥಾನದಿಂದ ಕಿತ್ತು ಹಾಕಿ ಎಂದು ಕೇಂದ್ರದ ಮಾಜಿ ಸಚಿವ ಡಿ.ವಿ. ಸದಾನಂದ ಗೌಡ ಅನಾಮಧೇಯ ವ್ಯಕ್ತಿಯೊಬ್ಬರ ಜೊತೆ ನಡೆಸಿರುವ ಆಡಿಯೋ ಸಂಭಾಷಣೆ ಭಾರೀ ವಿವಾದ ಸೃಷ್ಟಿಸಿದೆ.



ಕೇಂದ್ರದ ಪ್ರಮುಖ ವ್ಯಕ್ತಿಯೊಬ್ಬರ ಜೊತೆ ಸುಮಾರು 3 ನಿಮಿಷಗಳ ಕಾಲ ದೂರವಾಣಿ ಮೂಲಕ ಮಾತನಾಡಿರುವ ಈ ಆಡಿಯೋ ವೈರಲ್ ಆಗಿದ್ದು, ಪಕ್ಷದಲ್ಲಿ ವಿಜಯೇಂದ್ರ ಅವರನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲು ಪಿತೂರಿ ನಡೆಯುತ್ತಿದೆ ಎಂಬುದಕ್ಕೆ ಇದು ಪುಷ್ಟಿ ಒದಗಿಸಿದೆ.

ಅಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ಕಿತ್ತು ಹಾಕಿ ಜೂನ್, ಜುಲೈ, ಆಗಸ್ಟ್ ತಿಂಗಳು ಮುಗಿದ ನಂತರ ಅವರ ಅಧ್ಯಕ್ಷ ಸ್ಥಾನದ ಅವಧಿ ಮುಗಿಯಲಿದೆ. ಅಲ್ಲಿಯ ತನಕ ಕಾದು ಬಿವೈವಿ ಅವರನ್ನು ಕಿಕ್ ಔಟ್ ಮಾಡಿ ಎಂದು ಡಿವಿಎಸ್ ಮಾತನಾಡಿದ್ದಾರೆ.

ಎರಡು ತಿಂಗಳು ನಾವು ಕಾಯೋಣ. ನವೆಂಬರ್‌ಗೆ ಹೇಗಿದ್ದರೂ ವಿಜಯೇಂದ್ರ ಅವಧಿ ಮುಗಿಯಲಿದೆ. ಅವರು ಕಿಕ್ ಔಟ್ ಆದರೆ ಎಲ್ಲಾ ಸಮಸ್ಯೆಗಳು ಇತ್ಯರ್ಥವಾಗಲಿದೆ. ಅನಗತ್ಯವಾಗಿ ಇದು ನಾವೇಕೆ ಗೊಂದಲ ಸೃಷ್ಟಿಸಿಕೊಳ್ಳೋಣ. ಹೈಕಮಾಂಡ್ ನಾಯಕರು ಸೂಕ್ತ ಕಾಲದಲ್ಲಿ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆಂದು ಹೇಳಿದ್ದಾರೆ. ಈಗಲೇ ಕಿತ್ತು ಹಾಕಿದರೆ ನಾವು ಲಿಂಗಾಯಿತರ ವಿರೋಧಿ ಎಂದು ಸಾಬೀತಾಗುತ್ತದೆ. ನವೆಂಬರ್‌ನಲ್ಲಿ ಅಧಿಕಾರ ಮುಗಿಯುತ್ತಿದ್ದಂತೆ ಕಿತ್ತು ಹಾಕಿಬಿಡಿ. ಆಗ ಯಾವ ಗೊಂದಲವೂ ಇರುವುದಿಲ್ಲ ಎಂದಿದ್ದಾರೆ.

ವಿಜಯೇಂದ್ರ ಮುಂದುವರಿಯುವುದರಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಮತ್ತು ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಕೈವಾಡ ಇದೆಯೇ? ಎಂದು ಅನಾಮಧೇಯ ವ್ಯಕ್ತಿ ಕೇಳಿದಾಗ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಆಟವಾಡುತ್ತಿದ್ದಾರೆ. ನೋಡೋಣ ಏನಾಗುತ್ತದೆ ಎಂದು ಡಿವಿಎಸ್ ಹೇಳಿದ್ದಾರೆ.

ನಾನು ದೇವರನ್ನು ನಂಬುವ ವ್ಯಕ್ತಿ. ಈಗಲೂ ನಾನು ಹೋದರೆ ಬಸ್ ನಿಲ್ದಾಣ, ಆಟೋ ಸ್ಟಾಂಡ್‌ಗಳಲ್ಲಿ 40 ರಿಂದ 50 ಸಾವಿರ ಜನ ಸೇರುತ್ತಾರೆ ಎನ್ನುವ ಮೂಲಕ ಪರೋಕ್ಷವಾಗಿ ತಾವು ಅಧ್ಯಕ್ಷ ಸ್ಥಾನಕ್ಕೆ ಸಿದ್ದ ಎಂದು ಹೇಳಿಕೊಂಡಿದ್ದಾರೆ. ನಾನು ಈ ಹಿಂದೆ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸಿದ್ದೇನೆ. ಆಗ ನಾನು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗಿದ್ದೆ. ಈಗ ಎಲ್ಲವೂ ವಿರುದ್ಧವಾಗಿ ನಡೆಯುತ್ತಿವೆ ಎಂದು ಅನಾಮಧೇಯ ವ್ಯಕ್ತಿಗೆ ಹೇಳಿದ್ದಾರೆ.

ಬಿಜೆಪಿ ವಕ್ತಾರ ಎಂ.ಜಿ. ಮಹೇಶ್ 6 ವರ್ಷಗಳ ಕಾಲ ಪಕ್ಷದಿಂದ ಉಚ್ಚಾಟನೆ



ಬೆಂಗಳೂರು, ಜೂ.29 - ಬಿಜೆಪಿ ರಾಜ್ಯ ಘಟಕದ ವಕ್ತಾರ ಎಂ.ಜಿ ಮಹೇಶ್ ಅವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ 6 ವರ್ಷಗಳ ಅವಧಿಗೆ ಉಚ್ಚಾಟಿಸಲಾಗಿದೆ.

ಜೂನ್ 19ರಂದು ನಡೆದ ಪಕ್ಷದ ಪ್ರಮುಖರ ಸಭೆಯಲ್ಲಿ ಬಿಜೆಪಿ ಹೈಕಮಾಂಡ್ ಮತ್ತು ರಾಜ್ಯ ನಾಯಕರ ವಿರುದ್ಧ ಅವಹೇಳನಕಾರಿ ಆರೋಪ ಮಾಡಿದ್ದ ಹಿನ್ನಲೆಯಲ್ಲಿ ಉಚ್ಚಾಟನೆ ಮಾಡಲಾಗಿದೆ.

ಅವಹೇಳನಕಾರಿ ಆರೋಪ ಹಿನ್ನೆಲೆಯಲ್ಲಿ ಎಂಜಿ ಮಹೇಶ್ ಅವರಿಗೆ ರಾಜ್ಯ ಶಿಸ್ತು ಸಮಿತಿಯು ನೋಟಿಸ್ ಜಾರಿ ಮಾಡಿ ಸ್ಪಷ್ಟೀಕರಣ ಕೇಳಿತ್ತು. ಇದೀಗ ಮಹೇಶ್ ನೀಡಿದ ಸ್ಪಷ್ಟೀಕರಣ ಸಮಂಜಸವಾಗಿಲ್ಲ ಎಂದು ತಕ್ಷಣದಿಂದ ಜಾರಿಗೆ ಬರುವಂತೆ ಅವರನ್ನು ಪಕ್ಷದ ಎಲ್ಲಾ ಜವಾಬ್ದಾರಿಗಳಿಂದ ಮುಕ್ತಗೊಳಿಸಿ, 6 ವರ್ಷಗಳ ಕಾಲ ಉಚ್ಚಾಟನೆ ಮಾಡಲಾಗಿದೆ ಎಂದು ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜು ಪಾಟೀಲ್ ತಿಳಿಸಿದ್ದಾರೆ.

ಮಂಗಳೂರು : ಉದ್ಯಮಿಯ ಕಾರು ತಡೆದು 20 ಲಕ್ಷ ಮೌಲ್ಯದ ಚಿನ್ನ ದೋಚಿದ ದುಷ್ಕರ್ಮಿಗಳು

ಮಂಗಳೂರು, ಜು. 29 - ಉದ್ಯಮಿಯೊಬ್ಬರ ಕಾರನ್ನು ರಾಷ್ಟ್ರೀಯ ಹೆದ್ದಾರಿಯಲ್ಲಿ ಅಡ್ಡಗಟ್ಟಿ, ಅವರ ಪತ್ನಿ ಹಾಗೂ ಮಗನನ್ನು ಕಾರಿನ ಸಮೇತ ಅಪಹರಿಸಿ 20 ಲಕ್ಷ ರೂ.ಮೌಲ್ಯದ ಚಿನ್ನಾಭರಣ, ಬೆಲೆಬಾಳುವ ವಸ್ತುಗಳು ಮತ್ತು ಕಾರನ್ನು ದೋಚಿದ ಘಟನೆ ಸೋಮವಾರ ಮುಂಜಾನೆ ಬೈಕಂಪಾಡಿ ಸಮೀಪದ ದ್ವಾರ ಹೋಟೆಲ್ ಬಳಿ ನಡೆದಿದೆ.

ಉದ್ಯಮಿ ಮುಂಬಯಿಯಲ್ಲಿ ತಮ್ಮ ಸ್ನೇಹಿತನ ಮದುವೆ ಮುಗಿಸಿ ಮರಳುತ್ತಿದ್ದರು. ಕೇರಳದ ಪಯ್ಯನ್ನೂರು ನಿವಾಸಿ ಹಾಗೂ ಉದ್ಯಮಿ ವಿಕಾಸ್ ಅವರು ಪತ್ನಿ ಮತ್ತು ಮಗನೊಂದಿಗೆ ಕಾರಿನಲ್ಲಿ ಸ್ವಗ್ರಾಮಕ್ಕೆ ತೆರಳುತ್ತಿದ್ದರು. ಮುಂಜಾನೆ ಸುಮಾರು 2.30ರ ವೇಳೆಗೆ ರಾಷ್ಟ್ರೀಯ ಹೆದ್ದಾರಿ-66ರ ಬೈಕಂಪಾಡಿ ದ್ವಾರ ಹೋಟೆಲ್ ಸಮೀಪ ತಲುಪುತ್ತಿದ್ದಾಗ, ಎರಡು ಇನ್ನೋವಾ ಹಾಗೂ ಒಂದು ಸ್ವಿಫ್ಟ್ ಕಾರಿನಲ್ಲಿ ಬಂದಿದ್ದ 7 ರಿಂದ 8 ಮಂದಿ ದುಷ್ಕರ್ಮಿಗಳು ಅವರ ಕಾರನ್ನು ಅಡ್ಡಗಟ್ಟಿ ನಿಲ್ಲಿಸಿದ್ದಾರೆ.

ಬಳಿಕ ಉದ್ಯಮಿ ವಿಕಾಸ್ ಅವರನ್ನು ಕಾರಿನಿಂದ ಕೆಳಗಿಳಿಸಿದ ಆರೋಪಿಗಳು, ಅವರ ಪತ್ನಿ ಮತ್ತು ಮಗನನ್ನು ಕಾರಿನ ಸಮೇತ ಅಪಹರಿಸಿ ಸ್ಥಳದಿಂದ ಪರಾರಿಯಾಗಿದ್ದಾರೆ.

ನಂತರ ಪಣಂಬೂರು ಬೀಚ್ ರಸ್ತೆಯ ನಿರ್ಜನ ಪ್ರದೇಶಕ್ಕೆ ಕರೆದೊಯ್ದ ದುಷ್ಕರ್ಮಿಗಳು, ವಿಕಾಸ್ ಅವರ ಪತ್ನಿ ಹಾಗೂ ಮಗನಿಗೆ ಬೆದರಿಕೆ ಹಾಕಿ ಅವರ ಬಳಿಯಿದ್ದ ಚಿನ್ನಾಭರಣ, ಬೆಲೆಬಾಳುವ ವಸ್ತುಗಳನ್ನು ದೋಚಿದ್ದಾರೆ. ಬಳಿಕ ತಾಯಿ ಮತ್ತು ಮಗನನ್ನು ರಸ್ತೆಯಲ್ಲೇ ಬಿಟ್ಟು, ಉದ್ಯಮಿಯ ಕಾರಿನೊಂದಿಗೆ ಪರಾರಿಯಾಗಿದ್ದಾರೆ ಎಂದು ತಿಳಿದು ಬಂದಿದೆ.

ಘಟನೆಯ ಬಳಿಕ ಉದ್ಯಮಿ ವಿಕಾಸ್ ಅವರು ಪಣಂಬೂರು ಪೊಲೀಸ್ ಠಾಣೆಗೆ ದೂರು ನೀಡಿದ್ದು, ಅದರಂತೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಗಳ ಪತ್ತೆಗಾಗಿ ತನಿಖೆ ಆರಂಭಿಸಿದ್ದಾರೆ. ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದ್ದು, ದುಷ್ಕರ್ಮಿಗಳ ಬಂಧನಕ್ಕೆ ವಿಶೇಷ ತಂಡಗಳನ್ನು ರಚಿಸಿ ಶೋಧ ಕಾರ್ಯ ಮುಂದುವರಿಸಲಾಗಿದೆ.

ದೇವೇಂದ್ರ ಫಡ್ನವೀಸ್‌ರ ಕುರ್ಚಿಯನ್ನು ರಕ್ಷಿಸುವಂತೆ ಸಾಯಿಬಾಬಾನನ್ನು ಪ್ರಾರ್ಥಿಸಿದ್ದೇನೆ ; ಉದ್ಧವ್ ಠಾಕ್ರೆ

ಮುಂಬಯಿ,ಜೂ.29- ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರ ಕುರ್ಚಿಯನ್ನು ರಕ್ಷಿಸುವಂತೆ ಸಾಯಿಬಾಬಾನನ್ನು ಪ್ರಾರ್ಥಿಸಿದ್ದೇನೆ, ಅವರ ವಿಳಾಸ ಕಡಿತಗೊಳ್ಳುವ ಸಾಧ್ಯತೆ ಹೆಚ್ಚಿದೆ ಎಂದು ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಹೇಳಿದ್ದಾರೆ.

ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ದ ಪಾತ್ರದ ಬಗ್ಗೆಯೂ ಪ್ರತಿಕ್ರಿಯಿಸಿದ ಅವರು, ದೇವೇಂದ್ರ ಫಡ್ನವೀಸ್ ಪ್ರಧಾನಿ ಹುದ್ದೆಗೆ ಸ್ಪರ್ಧಿಸಬಹುದು ಎಂದು ಕೆಲವರು ಭಾವಿಸುತ್ತಾರೆ, ಆದ್ದರಿಂದ ಅವರ ವಿಳಾಸವನ್ನು ಈಗಲೇ ಕಡಿತಗೊಳಿಸಬಹುದು ಎಂದು ಸುಳಿವು ನೀಡಿದರು.



ಶಿರ್ಡಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಶಿವಸೇನೆ (ಯುಬಿಟಿ) ಮುಖ್ಯಸ್ಥ,ನಾನು ಶಿರ್ಡಿಯ ಸಾಯಿ ದೇವಸ್ಥಾನಕ್ಕೆ ಹೋದಾಗ, ಮಾಧ್ಯಮಗಳು ಎಂದಿನಂತೆ ನಾನು ಏನು ಪ್ರಾರ್ಥಿಸಿದೆ ಎಂದು ಕೇಳಿದರು. ಅದಕ್ಕೆ ನಾನು ಹೇಳಿದೆ, ಈ ದೇಶ ಮತ್ತು ರಾಜ್ಯಕ್ಕೆ ಸಂಭವಿಸಿರುವ ಬಿಕ್ಕಟ್ಟು ನಿವಾರಣೆಯಾಗಲಿ, ಈ ಭ್ರಷ್ಟ ಆಡಳಿತವನ್ನು ಸಮಾಧಿ ಮಾಡಬೇಕು, ದೇಶವು ಶಾಂತಿಯುತ ಹಾಗೂ ಸಮೃದ್ಧ ದಿನವನ್ನು ಹೊಂದಬೇಕು ಎಂದು ಮಾತ್ರ ನಾನು ಪ್ರಾರ್ಥಿಸಿದೆ ಎಂದರು.

ಪತ್ರಕರ್ತರು ಸಾಯಿಬಾಬಾನಲ್ಲಿ ತಾವು ಇನ್ನೇನು ಕೇಳಿದಿರಿ ಎಂದು ಮತ್ತೆ ಕೇಳಿದರು.ಅದಕ್ಕೆ ನಾನು ದೇವೇಂದ್ರ ಫಡ್ನವೀಸ್ ಅವರ ಕುರ್ಚಿಯನ್ನು ರಕ್ಷಿಸಿ, ಅವರ ವಿಳಾಸವನ್ನು ಕಡಿತಗೊಳಿಸುವ ಸಾಧ್ಯತೆ ಇದೆ ಎಂದು ಹೇಳಿದ್ದಾಗಿ ಠಾಕ್ರೆ ಹೇಳಿದರು. ಕಳೆದ ನಾಲ್ಕು ದಿನಗಳಿಂದ ಇದು ನನ್ನ ಮನಸ್ಸಿನಲ್ಲಿದೆ, ಇದು ಪ್ರಕೃತಿಯ ನಿಯಮ. ನಾನು ಯಾರ ಬಗ್ಗೆಯೂ ಕೆಟ್ಟದಾಗಿ ಯೋಚಿಸುವವನಲ್ಲ. ನಾನು ಯಾರಿಗೂ ಕೆಟ್ಟದ್ದನ್ನು ಬಯಸುವುದಿಲ್ಲ, ಮತ್ತು ನಾನು ಅದನ್ನು ಬಯಸಬಾರದು ಎಂದು ಸಾಯಿಬಾಬಾನಲ್ಲಿ ಪ್ರಾರ್ಥಿಸಿದೆ.ಆದರೆ ಎಲ್ಲರಿಗೂ ಒಂದು ಅಂತ್ಯವಿದೆ ಎಂದು ಅವರು ತಿಳಿಸಿದರು.

2029ರಲ್ಲಿ ಏನಾಗುತ್ತದೆ ಮತ್ತು ಮೋದಿ ಬಳಿಕ ನಮ್ಮ ಉತ್ತರಾಧಿಕಾರಿ ಯಾರು ಎಂಬ ಬಗ್ಗೆ ದಿಲ್ಲಿಯಲ್ಲಿ ಚರ್ಚೆ ಆರಂಭವಾಗಿದೆ. ಎಲ್ಲರ ಮನಸ್ಸಿನಲ್ಲಿಯೂ ಬೀಜಗಳು ಮೊಳಕೆಯೊಡೆಯಲು ಆರಂಭಿಸಿವೆ. ಅದು ಸಂಭವಿಸಿದಲ್ಲಿ, ದೇವೇಂದ್ರ ಫಡ್ನವೀಸ್ ಹೆಸರು ಸ್ಪರ್ಧೆಯಲ್ಲಿ ಬರಬಾರದು ಎಂಬ ಕಾರಣಕ್ಕೆ ಅವರ ವಿಳಾಸವನ್ನು ಈಗಲೇ ಕತ್ತರಿಸಬೇಕು ಎಂದು ಕೆಲವರು ಯೋಚಿಸುತ್ತಿದ್ದಾರೆ.ಆದ್ದರಿಂದ ಅವರು ದಿಲ್ಲಿಗೆ ಬಾರದಂತೆ ನೋಡಿಕೊಳ್ಳಲು ಸೂಚಿಸಲಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹೇಳಿದರು.

ಪ್ರಧಾನಿ ಹುದ್ದೆಯ ಸ್ಪರ್ಧೆಯಲ್ಲಿ ಯಾರು ಇದ್ದಾರೆಂದು ನಿಮಗೆ ತಿಳಿದಿದೆ, ಅಮಿತ್ ಶಾಹ ಶಿವಸೇನಾ ಮುಖ್ಯಸ್ಥರಿಗೆ ಸುಪಾರಿ ನೀಡಿದ್ದಾರೆ. ಮಿಂಧೆ (ಶಿಂದೆ) ಗುಂಪು, ಎಸೆನ್ಶಿಯಲ್ ಗುಂಪು ಇಲ್ಲಿ ಭಾಗಿಯಾಗಬೇಕೇ ಎಂದು ಠಾಕ್ರೆ ಲೇವಡಿ ಮಾಡಿದರು.

ನಿತಿನ್ ಗಡ್ಕರಿ ಮತ್ತು ದೇವೇಂದ್ರ ಫಡ್ನವೀಸ್ ಅವರಂತಹ ನಾಯಕರ ವಿರುದ್ಧದ ಈ ರಾಜಕೀಯ ಕುತಂತ್ರಗಳನ್ನು ಆರ್‌ಎಸ್‌ಎಸ್ ನಿಜವಾಗಿಯೂ ಒಪ್ಪಿಕೊಳ್ಳುತ್ತದೆಯೇ ಎಂದು ಅವರು ಕೇಳಿದರು.

ಮಹಾರಾಷ್ಟ್ರ ರಾಜಕೀಯದಲ್ಲಿ ಬಿಜೆಪಿ ನಾಯಕರ ನಡುವೆ ಆಂತರಿಕ ಕಲಹವಿದೆ ಎಂಬ ಮಾತುಗಳು ಕೇಳಿಬರುತ್ತಿವೆ. ಈ ಹಿನ್ನೆಲೆಯಲ್ಲಿ ಠಾಕ್ರೆ ನೇರವಾಗಿ ಕೇಂದ್ರ ಸಚಿವ ಗಡ್ಕರಿ ಮತ್ತು ಮುಖ್ಯಮಂತ್ರಿ ಫಡ್ನವೀಸ್ ಅವರನ್ನು ಹೆಸರಿಸಿ ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸಿದ್ದಾರೆ.

ಇಂದು ಶಿರ್ಡಿಗೆ ಭೇಟಿ ನೀಡಿ ಸಾಯಿಬಾಬಾ ದರ್ಶನ ಪಡೆದ ಠಾಕ್ರೆ ತನ್ನ ಪಕ್ಷದ ಬಂಡಾಯ ಸಂಸದರ ಕ್ಷೇತ್ರಗಳಲ್ಲಿ ನಡೆಸುತ್ತಿರುವ ಸಭೆಯ ಭಾಗವಾಗಿ ಸಂಸದ ಭೌಸಾಹೇಬ್ ವಾಕ್ಚೋರೆ ಅವರ ಕ್ಷೇತ್ರವನ್ನು ತಲುಪಿದರು.

ಭೌಸಾಹೇಬ್ ವಾಕ್ಚೋರೆಯನ್ನು ತೀವ್ರವಾಗಿ ಟೀಕಿಸಿದ ಠಾಕ್ರೆ,ಕೆಲವರ ರಕ್ತ ಮತ್ತು ರಕ್ತನಾಳಗಳಲ್ಲಿ ದ್ರೋಹವಿದೆ. ಈ ದೇಶದ್ರೋಹಿ 2009ರಲ್ಲಿ ಆಯ್ಕೆಯಾದರು. ಇದು ಶಿರ್ಡಿ. ಇದು ಪವಿತ್ರ ಕ್ಷೇತ್ರ. ನಂಬಿಕೆ ಮತ್ತು ತಾಳ್ಮೆ ಮುಖ್ಯ. ಎಲ್ಲೋ ನಂಬಿಕೆ ಇರಬೇಕು. ನಮಗೆ ಸಾಯಿಬಾಬಾ, ಕೆಲಸ ಮತ್ತು ಕೇಸರಿ ಮೇಲೆ ನಂಬಿಕೆ ಇದೆ. ಅವರಿಗೆ ಯಾವುದರಲ್ಲೂ ನಂಬಿಕೆ ಇಲ್ಲ. ತಾಳ್ಮೆಯ ಕುರುಹು ಇಲ್ಲ. ಏನೇ ನಡೆದರೂ ಒಳ್ಳೆಯದಕ್ಕಾಗಿ ಎಂದು ನಾವು ಹೇಳುತ್ತೇವೆ ಎಂದರು.

ಮ್ಯಾನ್ಮಾರ್‌ನಲ್ಲಿ ಸಿಕ್ಕಿಬಿದ್ದ 800 ಭಾರತೀಯ ಯುವಕರು; ಮಹಾರಾಷ್ಟ್ರದ 25 ಜನ ಒತ್ತೆಯಾಳು

ಉದ್ಯೋಗದ ಆಮಿಷವೊಡ್ಡಿ ವಿದೇಶಕ್ಕೆ ಕರೆದೊಯ್ದು ಆನ್‌ಲೈನ್ ವಂಚನೆ ಜಾಲದಲ್ಲಿ ಕೆಲಸ ಮಾಡಲು ಒತ್ತಾಯ

ಮುಂಬಯಿ, ಜೂ. 29 - ಮ್ಯಾನ್ಮಾರ್-ಥೈಲ್ಯಾಂಡ್-ಲಾವೋಸ್ ಗಡಿಯಲ್ಲಿರುವ ಕುಖ್ಯಾತ 'ಗೋಲ್ಡನ್ ಟ್ರಯಾಂಗಲ್' ಪ್ರದೇಶದಿಂದ ಆಘಾತಕಾರಿ ಮಾಹಿತಿ ಬೆಳಕಿಗೆ ಬಂದಿದೆ. ನೂರಾರು ಭಾರತೀಯ ಯುವಕರನ್ನು ಉದ್ಯೋಗದ ಆಮಿಷವೊಡ್ಡಿ ವಿದೇಶಕ್ಕೆ ಕರೆದೊಯ್ದು ಆನ್‌ಲೈನ್ ವಂಚನೆ ಜಾಲದಲ್ಲಿ ಕೆಲಸ ಮಾಡಲು ಒತ್ತಾಯಿಸಲಾಗುತ್ತಿದೆ ಎಂಬ ಗಂಭೀರ ಆರೋಪಗಳನ್ನು ಮಾಡಲಾಗಿದೆ. ಸುಮಾರು 800 ಭಾರತೀಯ ಯುವಕರು ಈ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದಾರೆ. ಅವರಲ್ಲಿ 25 ಮಂದಿ ಮಹಾರಾಷ್ಟ್ರದವರು ಎಂದು ಹೇಳಲಾಗಿದೆ. ಬೀಡ್‌ನ ಯುವಕನೊಬ್ಬ ತನ್ನ ಸ್ನೇಹಿತರಿಗೆ ಫೋನ್ ಕರೆಯ ಮೂಲಕ ಈ ಸಂಪೂರ್ಣ ಜಾಲದ ರೋಮಾಂಚಕಾರಿ ವಿಷಯ ಬಹಿರಂಗಪಡಿಸಿದ್ದಾರೆ.

ಬೀಡ್‌ನ ಈ ಯುವಕ ಅನಿಮೇಷನ್ ಡಿಸೈನರ್ ಆಗಿದ್ದು, ಉದ್ಯೋಗ ಹುಡುಕುತ್ತಿರುವಾಗ ವಾಟ್ಸಾಪ್‌ನಲ್ಲಿ ವಿದೇಶದಲ್ಲಿ ಉದ್ಯೋಗಕ್ಕಾಗಿ ಜಾಹೀರಾತು ಬಂದಿತು. ಬ್ಯಾಂಕಾಕ್‌ನಲ್ಲಿ ಸಾಮಾಜಿಕ ಮಾಧ್ಯಮ ನಿರ್ವಹಣೆಯಲ್ಲಿ ಕೆಲಸವಿದೆ ಎಂದು ಹೇಳಿ ಥೈಲ್ಯಾಂಡ್‌ಗೆ ಕರೆಸಲಾಯಿತು. ಆದರೆ ಅಲ್ಲಿಗೆ ತಲುಪಿದ ನಂತರ ಅವರನ್ನು ವಂಚಿಸಲಾಯಿತು. ಕಾಡಿನ ಮೂಲಕ ವಾಹನದಲ್ಲಿ ಮ್ಯಾನ್ಮಾರ್‌ಗೆ ಅಕ್ರಮವಾಗಿ ಕರೆದೊಯ್ಯಲಾಯಿತು. ಅವರ ಎಲ್ಲಾ ದಾಖಲೆಗಳನ್ನು ಬಂದೂಕು ತೋರಿಸಿ ಕಿತ್ತುಕೊಂಡು ಆನ್‌ಲೈನ್ ವಂಚನೆ ಮಾಡಲು ಒತ್ತಾಯಿಸಲಾಯಿತು.

ಬಲಿಪಶು ತನ್ನ ಸ್ನೇಹಿತರಿಗೆ ನೀಡಿದ ಮಾಹಿತಿಯ ಪ್ರಕಾರ, ನೂರಾರು ಭಾರತೀಯ ಯುವಕರನ್ನು ಮ್ಯಾನ್ಮಾರ್‌ನ ಶಿಬಿರಗಳಲ್ಲಿ ಬಂಧಿಸಲಾಗಿದೆ. ಆನ್‌ಲೈನ್ ಹಣಕಾಸು ವಂಚನೆ ಮಾಡಲು ಅವರನ್ನು ಒತ್ತಾಯಿಸಲಾಗುತ್ತದೆ. ಅವರು ಕೆಲಸ ಮಾಡಲು ನಿರಾಕರಿಸಿದರೆ ಅವರನ್ನು ಹೊಡೆಯಲಾಗುತ್ತದೆ. ಇದಲ್ಲದೆ, ಅವರಿಗೆ ಆಹಾರವನ್ನು ನೀಡಲಾಗುವುದಿಲ್ಲ ಮತ್ತು ಕೊಲ್ಲುವ ಬೆದರಿಕೆ ಹಾಕಲಾಗುತ್ತದೆ ಎಂದು ಅವರು ಗಂಭೀರ ಆರೋಪ ಮಾಡಿದ್ದಾರೆ.

ಬಿಹಾರದ ಯುವಕನನ್ನು ಕೊಲೆ ಮಾಡಲಾಗಿದೆ ಎಂದು ಅವರು ಹೇಳಿಕೊಂಡಿದ್ದಾರೆ. ಮಹಾರಾಷ್ಟ್ರದ 20 ರಿಂದ 30 ಯುವಕರು ಈ ಸ್ಥಳದಲ್ಲಿ ಸಿಕ್ಕಿಬಿದ್ದಿದ್ದಾರೆ ಎಂದು ಅವರು ತಮ್ಮ ಸ್ನೇಹಿತರಿಗೆ ತಿಳಿಸಿದ್ದಾರೆ. ನಮಗೆ ಕೇವಲ 10 ನಿಮಿಷಗಳ ಕಾಲ ಮೊಬೈಲ್ ಫೋನ್ ಬಳಸಲು ಅವಕಾಶವಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಸೈಬರ್ ಪೊಲೀಸರಲ್ಲಿ ಪ್ರಕರಣ ದಾಖಲು:

ಈ ಆಘಾತಕಾರಿ ಮಾಹಿತಿಯನ್ನು ದೃಢಪಡಿಸಿದ ನಂತರ, ಬಲಿಪಶುವಿನ ಕುಟುಂಬ ಬೀಡ್ ಸೈಬರ್ ಪೊಲೀಸರ ಬಳಿ ಧಾವಿಸಿತು. ಈ ಪ್ರಕರಣದಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಆರಂಭಿಸಲಾಗಿದೆ. ರಾಜ್ಯ ಪೊಲೀಸ್ ಆಡಳಿತವು ವಿದೇಶಾಂಗ ಸಚಿವಾಲಯದೊಂದಿಗೆ ಪತ್ರವ್ಯವಹಾರವನ್ನು ಪ್ರಾರಂಭಿಸಿದೆ ಎಂದು ವರದಿಯಾಗಿದೆ.


ಎಲ್ಲರನ್ನೂ ಸುರಕ್ಷಿತವಾಗಿ ಭಾರತಕ್ಕೆ ಕರೆತನ್ನಿ:

ಸಂತ್ರಸ್ತನ ಸ್ನೇಹಿತ ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯನಾಗಿರುವುದರಿಂದ ಸಹಾಯಕ್ಕಾಗಿ ತನ್ನನ್ನು ಸಂಪರ್ಕಿಸಲಾಗಿದೆ ಎಂದು ಹೇಳಿದರು. ಯುವಕ ವಾಟ್ಸಾಪ್ ಧ್ವನಿ ಕರೆಯ ಮೂಲಕ ಇಡೀ ಘಟನೆಯನ್ನು ವಿವರಿಸಿ ತನ್ನನ್ನು ಮತ್ತು ಇತರ ಭಾರತೀಯರನ್ನು ರಕ್ಷಿಸುವಂತೆ ವಿನಂತಿಸಿದರು. ಅದರ ನಂತರ, ಕುಟುಂಬಕ್ಕೆ ಧೈರ್ಯ ತುಂಬುವ ಮೂಲಕ ಪೊಲೀಸರಿಗೆ ದೂರು ಸಲ್ಲಿಸಲಾಯಿತು. ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ಮತ್ತು ಕೇಂದ್ರ ಸರ್ಕಾರವು ತಕ್ಷಣ ಮಧ್ಯಪ್ರವೇಶಿಸಿ ಎಲ್ಲಾ ಭಾರತೀಯರನ್ನು ಸುರಕ್ಷಿತವಾಗಿ ಮನೆಗೆ ಕರೆತರಬೇಕೆಂದು ಅವರು ಒತ್ತಾಯಿಸಿದರು.

'ಪ್ರಥಮ ಪೂಜೆ'ಯೊಂದಿಗೆ ವಾರ್ಷಿಕ ಅಮರನಾಥ ಯಾತ್ರೆಗೆ ಚಾಲನೆ ನೀಡಿದ ಜಮ್ಮು-ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್

ಶ್ರೀನಗರ, ಜೂ. 29 - ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಸೋಮವಾರ ದಕ್ಷಿಣ ಕಾಶ್ಮೀರದ ಪವಿತ್ರ ಅಮರನಾಥ ಗುಹಾ ದೇವಾಲಯದಲ್ಲಿ 'ಪ್ರಥಮ ಪೂಜೆ' ನೆರವೇರಿಸಿದರು. ಜುಲೈ 3 ರಂದು ಪ್ರಾರಂಭವಾಗುವ ವಾರ್ಷಿಕ ಅಮರನಾಥ ಯಾತ್ರೆಯ ಔಪಚಾರಿಕ ಆರಂಭಿಸಿದರು.

ಅಧಿಕೃತ ಹೇಳಿಕೆಯ ಪ್ರಕಾರ, ಸಿನ್ಹಾ ಬಾಬಾ ಬರ್ಫಾನಿಯ ಆಶೀರ್ವಾದವನ್ನು ಪಡೆದರು ಮತ್ತು ಎಲ್ಲರ ಶಾಂತಿ, ಸಮೃದ್ಧಿ, ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ ಪ್ರಾರ್ಥಿಸಿದರು. ಬಾಬಾ ಬರ್ಫಾನಿಯ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ತೀರ್ಥಯಾತ್ರೆಯಲ್ಲಿ ಭಾಗವಹಿಸಿ ಈ ಆಧ್ಯಾತ್ಮಿಕ ಪ್ರಯಾಣವನ್ನು ಅನುಭವಿಸಬೇಕೆಂದು ಅವರು ಒತ್ತಾಯಿಸಿದರು.



ಭಕ್ತರಿಗೆ ಸುರಕ್ಷಿತ, ಸುಗಮ ಮತ್ತು ಸ್ಮರಣೀಯ ಯಾತ್ರೆಯನ್ನು ಖಚಿತಪಡಿಸಿಕೊಳ್ಳಲು ಆಡಳಿತ, ಶ್ರೀ ಅಮರನಾಥ ದೇಗುಲ ಮಂಡಳಿ, ಸೇನೆ, ಪೊಲೀಸ್, ಭದ್ರತಾ ಪಡೆಗಳು, ಸ್ಥಳೀಯ ಸಮುದಾಯಗಳು, ಸೇವಾ ಪೂರೈಕೆದಾರರು ಮತ್ತು ಸ್ವಯಂಸೇವಕರು ಸಂಪೂರ್ಣ ಸಮನ್ವಯದಿಂದ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಸಿನ್ಹಾ ಹೇಳಿದರು.

ಸುಧಾರಿತ ಮೂಲಸೌಕರ್ಯ, ಉತ್ತಮ ಸೌಲಭ್ಯಗಳು ಮತ್ತು ಜನರ ಅಮೂಲ್ಯ ಸಹಕಾರದೊಂದಿಗೆ, ಆಧ್ಯಾತ್ಮಿಕವಾಗಿ ತೃಪ್ತಿಕರ ತೀರ್ಥಯಾತ್ರೆಗಾಗಿ ಯಾತ್ರಿಕರನ್ನು ಸ್ವಾಗತಿಸಲು ಅಧಿಕಾರಿಗಳು ಸಂಪೂರ್ಣವಾಗಿ ಸಿದ್ಧರಾಗಿದ್ದಾರೆ ಎಂದು ಅವರು ತಿಳಿಸಿದರು.

ಶ್ರೀ ಅಮರನಾಥಜಿ ದೇವಾಲಯ ಮಂಡಳಿ (ಎಸ್‌ಎಎಸ್‌ಬಿ) ಪ್ರತಿ ವರ್ಷ ಜ್ಯೇಷ್ಠ ಪೂರ್ಣಿಮೆಯಂದು ಗುಹಾ ದೇವಾಲಯದಲ್ಲಿ 'ಪ್ರಥಮ ಪೂಜೆ'ಯನ್ನು ಆಯೋಜಿಸುತ್ತದೆ.

ವಾರ್ಷಿಕ 57 ದಿನಗಳ ಯಾತ್ರೆ ಜುಲೈ 3 ರಂದು ದಕ್ಷಿಣ ಕಾಶ್ಮೀರದ ಅನಂತನಾಗ್ ಜಿಲ್ಲೆಯ 48 ಕಿಮೀ ಸಾಂಪ್ರದಾಯಿಕ ಪಹಲ್ಗಾಮ್ ಟ್ರ್ಯಾಕ್ ಮತ್ತು ಮಧ್ಯ ಕಾಶ್ಮೀರದ ಗಂಡರ್ಬಾಲ್ ಜಿಲ್ಲೆಯ 14 ಕಿಮೀ ಬಾಲ್ಟಾಲ್ ಮಾರ್ಗ ಎಂಬ ಅವಳಿ ಮಾರ್ಗಗಳಿಂದ ಪ್ರಾರಂಭವಾಗಲಿದೆ.

ಮೊದಲ ಬ್ಯಾಚ್ ಯಾತ್ರಿಕರನ್ನು ಜುಲೈ 2 ರಂದು ಜಮ್ಮುವಿನ ಭಗವತಿ ನಗರ ಮೂಲ ಶಿಬಿರದಿಂದ ಚಾಲನೆ ನೀಡಲಾಗುವುದು. ಇದು ಆಗಸ್ಟ್ 28 ರಂದು ರಕ್ಷಾ ಬಂಧನದಂದು ಮುಕ್ತಾಯಗೊಳ್ಳಲಿದೆ.

ಯಾತ್ರೆಯು ಆಗಸ್ಟ್ 28 ರಂದು ರಕ್ಷಾ ಬಂಧನದಂದು ಮುಕ್ತಾಯಗೊಳ್ಳಲಿದೆ. ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ನಳಿನ್ ಪ್ರಭಾತ್, ವಿಶೇಷ ಡಿಜಿ (ಸಮನ್ವಯ) ಎಸ್‌ಜೆಎಂ ಗಿಲಾನಿ, ಎಸ್‌ಎಎಸ್‌ಬಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಮಂದೀಪ್ ಭಂಡಾರಿ ಮತ್ತು ಕಾಶ್ಮೀರ ವಿಭಾಗೀಯ ಆಯುಕ್ತ ಅಂಶುಲ್ ಗರ್ಗ್ ಕೂಡ ಸಿನ್ಹಾ ಅವರೊಂದಿಗೆ ಗುಹಾ ದೇವಾಲಯಕ್ಕೆ ತೆರಳಿದರು.

ಜಮ್ಮುವಿನಲ್ಲಿ, ಹೊಸದಾಗಿ ಅಭಿವೃದ್ಧಿಪಡಿಸಲಾದ ತಾವಿ ನದಿ ದಂಡೆಯಲ್ಲಿ ನಡೆದ 'ಮಹಾ ಯಜ್ಞ'ದಲ್ಲಿ ಹಲವಾರು ಸಾಧುಗಳು, ಧಾರ್ಮಿಕ ಸಂಸ್ಥೆಗಳ ಮುಖ್ಯಸ್ಥರು ಮತ್ತು ಹಿರಿಯ ನಾಗರಿಕ ಮತ್ತು ಪೊಲೀಸ್ ಅಧಿಕಾರಿಗಳು ವೇದ ಮಂತ್ರಗಳು ಮತ್ತು ಪವಿತ್ರ ಅಗ್ನಿಗೆ ಅರ್ಪಣೆಗಳ ನಡುವೆ ಭಾಗವಹಿಸಿದ್ದರು.

ಯಾತ್ರೆ ನೋಂದಣಿ ಮತ್ತು ಯಾತ್ರಿಕ ಸೌಲಭ್ಯ ಸೇವೆಗಳನ್ನು ಜನದಟ್ಟಣೆಯ ರೈಲ್ವೆ ನಿಲ್ದಾಣ ಪ್ರದೇಶದಿಂದ ನದಿ ದಂಡೆಗೆ ಸ್ಥಳಾಂತರಿಸಲಾಗಿದೆ, ಅಲ್ಲಿ ಅಧಿಕಾರಿಗಳು ಭಕ್ತರಿಗೆ ನೋಂದಣಿ ಕೌಂಟರ್‌ಗಳು, ಲಂಗಾರ್‌ಗಳು ಮತ್ತು ಇತರ ಸೌಲಭ್ಯಗಳನ್ನು ಸ್ಥಾಪಿಸಿದ್ದಾರೆ.

ಜಮ್ಮುವಿನ ರಾಮ ದೇವಾಲಯದ ಮುಖ್ಯಸ್ಥ ಮಹಂತ್ ರಾಮೇಶ್ವರ ದಾಸ್, ನಗರದಲ್ಲಿ ಪ್ರಥಮ ಪೂಜೆಯನ್ನು ನಡೆಸುವುದು ತೀರ್ಥಯಾತ್ರೆಯನ್ನು ಪ್ರಾರಂಭಿಸಲು ಮಹತ್ವದ ಮಾರ್ಗವಾಗಿದೆ ಎಂದು ಹೇಳಿದರು. ''ಭಾರತದ ಜನರು ಈ ಉಪಕ್ರಮವನ್ನು ಪೂರ್ಣ ಹೃದಯದಿಂದ ಸ್ವಾಗತಿಸುತ್ತಾರೆ. ಲಕ್ಷಾಂತರ ಭಕ್ತರು ಸೇರಬಹುದಾದ ವಿಶಾಲವಾದ ಜಾಗವನ್ನು ತಾವಿ ನದಿ ದಂಡೆ ನೀಡುತ್ತದೆ. ಇಂದಿನಿಂದ, ನೋಂದಣಿಗಳನ್ನು ಎಲ್ಲಾ ಅಗತ್ಯ ಸೌಲಭ್ಯಗಳೊಂದಿಗೆ ಇಲ್ಲಿ ನಡೆಸಲಾಗುವುದು'' ಎಂದು ಅವರು ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಹಿಂದಿನ ವರ್ಷಗಳಲ್ಲಿ ಯಾತ್ರಿಕರು ಎದುರಿಸುತ್ತಿದ್ದ ತೊಂದರೆಗಳನ್ನು ನೆನಪಿಸಿಕೊಂಡ ದಾಸ್, ಅನೇಕ ಭಕ್ತರು ರೈಲ್ವೆ ನಿಲ್ದಾಣದ ಬಳಿ ಅಸಮರ್ಪಕ ವಸತಿ ಸೌಕರ್ಯಗಳಲ್ಲಿ ಉಳಿಯಬೇಕಾಯಿತು, ಕೆಲವರು ಪಾದಚಾರಿ ಮಾರ್ಗಗಳಲ್ಲಿ ರಾತ್ರಿಗಳನ್ನು ಕಳೆಯಬೇಕಾಯಿತು ಎಂದು ಹೇಳಿದರು. ''ಈಗ ವ್ಯವಸ್ಥೆಗಳು ಉತ್ತಮವಾಗಿವೆ ಮತ್ತು ಸುಧಾರಿಸುತ್ತಲೇ ಇರುತ್ತವೆ. ಬಾಬಾ ಅವರ ಯಾತ್ರೆಗೆ ಯಾವಾಗಲೂ ಅಪಾರ ಉತ್ಸಾಹವಿದೆ ಮತ್ತು ಈ ವರ್ಷ ಯಾತ್ರಿಕರ ಸಂಖ್ಯೆ ಹಿಂದೆಂದಿಗಿಂತಲೂ ಹೆಚ್ಚಾಗಿರುತ್ತದೆ ಎಂದು ನಾನು ನಂಬುತ್ತೇನೆ'' ಎಂದು ಅವರು ಹೇಳಿದರು.

ಜ್ಯೇಷ್ಠ ಪೂರ್ಣಿಮೆಯಂದು ವಿಶೇಷ ಪ್ರಾರ್ಥನೆಗಳು ವಾರ್ಷಿಕ ಸಂಪ್ರದಾಯವಾಗಿದೆ ಮತ್ತು ಈ ವರ್ಷ ತಾವಿ ನದಿ ದಂಡೆಯಲ್ಲಿ ಹೊಸ ನೋಂದಣಿ ವ್ಯವಸ್ಥೆಗಳ ಉದ್ಘಾಟನೆಯೊಂದಿಗೆ ಹೊಂದಿಕೆಯಾಯಿತು ಎಂದು ವಿಶ್ವ ಹಿಂದೂ ಪರಿಷತ್‌ನ ಜಮ್ಮು, ಕಾಶ್ಮೀರ ಮತ್ತು ಲಡಾಖ್ ಘಟಕದ ಅಧ್ಯಕ್ಷ ರಾಜೇಶ್ ಗುಪ್ತಾ ಹೇಳಿದರು. ''ನಮ್ಮ ಏಕೈಕ ಪ್ರಾರ್ಥನೆ ಎಂದರೆ ಹೆಚ್ಚಿನ ಸಂಖ್ಯೆಯ ಯಾತ್ರಿಕರು ಯಾತ್ರೆಯನ್ನು ಕೈಗೊಳ್ಳುತ್ತಾರೆ ಮತ್ತು ಅದು ಶಾಂತಿಯುತವಾಗಿ, ಸುರಕ್ಷಿತವಾಗಿ ಮತ್ತು ಯಾವುದೇ ಅಡೆತಡೆಗಳಿಲ್ಲದೆ ಪೂರ್ಣಗೊಳ್ಳುತ್ತದೆ'' ಎಂದು ಗುಪ್ತಾ ಹೇಳಿದರು.

ಲೋಕಲ್ ರೈಲುಗಳ ಸುರಕ್ಷತೆ: ಪೊಲೀಸರ ಗಸ್ತು ಹೆಚ್ಚಳ, ಸಿಸಿಟಿವಿ ಜಾಲ ವಿಸ್ತರಣೆಗೆ ಯೋಜನೆ

ಮುಂಬಯಿ, ಜೂ.29 - ಇತ್ತೀಚೆಗೆ ಚಲಿಸುವ ಲೋಕಲ್ ರೈಲಿನಲ್ಲಿ ಯುವಕನ ಹತ್ಯೆಯ ಬಳಿಕ ದೊರೆತ ಪ್ರತಿಕ್ರಿಯೆಯಾಗಿ, ಪ್ರಯಾಣಿಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಮಹಾರಾಷ್ಟ್ರ ಸರಕಾರವು ಮುಂಬಯಿ ಉಪನಗರ ರೈಲ್ವೆ ಜಾಲದಾದ್ಯಂತ ಸಿಸಿಟಿವಿ ಕ್ಯಾಮೆರಾ ವ್ಯಾಪ್ತಿಯನ್ನು ವಿಸ್ತರಿಸುವ ಮತ್ತು ಪೊಲೀಸ್ ಗಸ್ತು ಬಲಪಡಿಸುವತ್ತ ಗಮನಹರಿಸಲಿದೆ.

ಸಿಸಿಟಿವಿ ದೃಶ್ಯಾವಳಿಗಳು ಮತ್ತು ಮುಖ ಗುರುತಿಸುವಿಕೆ ವ್ಯವಸ್ಥೆಯನ್ನು ಬಳಸಿಕೊಂಡು ಪ್ರಯಾಣಿಕನನ್ನು ಚಾಕುವಿನಿಂದ ಇರಿದು ಕೊಲೆ ಮಾಡಿದ ಆರೋಪಿಯನ್ನು 15 ಗಂಟೆಗಳ ಒಳಗೆ ಬಂಧಿಸಲಾಗಿದೆ ಎಂದು ಗೃಹ ಖಾತೆ ರಾಜ್ಯ ಸಚಿವ ಯೋಗೇಶ್ ಕದಮ್ ಸೋಮವಾರ ವಿಧಾನಸಭೆಗೆ ತಿಳಿಸಿದರು.

ಜೂ.23 ರಂದು ಚರ್ಚ್‌ಗೇಟ್- ನಾಲಸೋಪರ ಲೋಕಲ್ ರೈಲಿನ ಪ್ರಥಮ ದರ್ಜೆ ಕೋಚ್‌ನಲ್ಲಿ ಮಾಯಾಂಕ್ ಲೋಹರ್ ಅವರ ಹತ್ಯೆಗೆ ಸಂಬಂಧಿಸಿದಂತೆ ವಿರೋಧ ಪಕ್ಷಗಳು ನೀಡಿದ ಮುಂದೂಡಿಕೆ ಸೂಚನೆ ಮೇಲೆ ಅವರು ಪ್ರತಿಕ್ರಿಯಿಸುತ್ತಿದ್ದರು.

ಪೊಲೀಸರು ಸಿಸಿಟಿವಿ ದೃಶ್ಯಾವಳಿಗಳನ್ನು ವಿಶ್ಲೇಷಿಸಿ ಮುಖ ಗುರುತಿಸುವಿಕೆ ತಂತ್ರಜ್ಞಾನವನ್ನು ಬಳಸಿದ ಬಳಿಕ ಆರೋಪಿಯನ್ನು 15 ಗಂಟೆಗಳ ಒಳಗೆ ಪತ್ತೆಹಚ್ಚಿ ಬಂಧಿಸಲಾಯಿತು ಎಂದು ಕದಮ್ ಹೇಳಿದರು. ಆರೋಪಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದು ಕದಮ್ ಸದನಕ್ಕೆ ತಿಳಿಸಿದರು.

ರೈಲ್ವೆ ಪೊಲೀಸರು ಸುಮಾರು 20 ಪೊಲೀಸ್ ಠಾಣೆಗಳಿಂದ ಮೀಸಲಾದ ಮೇಲ್ವಿಚಾರಣೆಯ ಮೂಲಕ 24/7 ಕಣ್ಗಾವಲು ಕಾಯುತ್ತಿದ್ದಾರೆ ಎಂದು ಅವರು ಹೇಳಿದರು.

ಪೊಲೀಸ್ ಸಿಬ್ಬಂದಿಗಳ ಕುರಿತಾದ ಕಳವಳಗಳಿಗೆ ಪ್ರತಿಕ್ರಿಯಿಸಿದ ಕದಮ್, ರೈಲ್ವೆ ಪೊಲೀಸ್ ಕಮಿಷನರೇಟ್‌ನಲ್ಲಿ 4,175 ಮಂಜೂರಾದ ಹುದ್ದೆಗಳಿವೆ, ಸಾಕಷ್ಟು ಬಲವಿಲ್ಲ ಎಂಬ ಸಲಹೆಗಳನ್ನು ತಳ್ಳಿಹಾಕಿದರು. ಮಹಾರಾಷ್ಟ್ರ ಸರಕಾರವು ಉಪನಗರ ರೈಲ್ವೆ ಜಾಲದಲ್ಲಿ ಸಿಸಿಟಿವಿ ಕ್ಯಾಮೆರಾಗಳ ಸಂಖ್ಯೆಯನ್ನು ಹೆಚ್ಚಿಸುವಂತೆ ಕೋರಿ ಕೇಂದ್ರಕ್ಕೆ ಪತ್ರ ಬರೆದಿದೆ ಎಂದು ಸಚಿವರು ಹೇಳಿದರು. ಮುಂಬಯಿಯ ಲೋಕಲ್ ರೈಲು ಕಾರ್ಯಾಚರಣೆಗಳ ಪ್ರಮಾಣವನ್ನು ಎತ್ತಿ ತೋರಿಸಿದ ಸಚಿವರು, ಪ್ರತಿದಿನ ಸುಮಾರು 75 ರಿಂದ 80 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಾರೆ, ಇದರಿಂದಾಗಿ ಪ್ರತಿಯೊಬ್ಬ ಪ್ರಯಾಣಿಕರ ದೈಹಿಕ ತಪಾಸಣೆ ಅಸಾಧ್ಯವಾಗುತ್ತದೆ ಎಂದು ಹೇಳಿದರು.

ಮುಂದಿನ ವರ್ಷದಿಂದ ಆನ್‌ಲೈನ್‌ನಲ್ಲಿ ಟಿಇಟಿ ಪರೀಕ್ಷೆ ; ಸಚಿವ ದಾದಾ ಭೂಸೆ ಮಾಹಿತಿ

ಮುಂಬಯಿ,ಜೂ.29- ಪ್ರಶ್ನೆಪತ್ರಿಕೆ ಸೋರಿಕೆಯ ಹಿನ್ನೆಲೆಯಲ್ಲಿ ರದ್ದುಗೊಳಿಸಲಾದ ಟಿಇಟಿ ಪರೀಕ್ಷೆಯ ಹೊಸ ದಿನಾಂಕವನ್ನು ಮಹಾರಾಷ್ಟ್ರ ರಾಜ್ಯ ಪರೀಕ್ಷಾ ಮಂಡಳಿಯ ಅಧಿಕೃತ ವೆಬ್‌ಸೈಟ್‌ನಲ್ಲಿ ಶೀಘ್ರದಲ್ಲೇ ಪ್ರಕಟಿಸಲಾಗುವುದು. ಭವಿಷ್ಯದಲ್ಲಿ ಇಂತಹ ಘಟನೆಗಳನ್ನು ತಡೆಗಟ್ಟಲು,ಸರಕಾರವು ಈಗ ಈ ಪರೀಕ್ಷೆಯನ್ನು ಆನ್‌ಲೈನ್‌ನಲ್ಲಿ ನಡೆಸಲು ಸಿದ್ಧತೆಗಳನ್ನು ಆರಂಭಿಸಿದೆ. ಶಿಕ್ಷಣ ಸಚಿವ ದಾದಾ ಭೂಸೆ ಈ ಸಂಬಂಧ ವಿಧಾನಸಭೆಯಲ್ಲಿ ಮಾಹಿತಿ ನೀಡಿದರು.

ಟಿಇಟಿ ಪತ್ರಿಕೆ ಸೋರಿಕೆ ಪ್ರಕರಣದ ಬಗ್ಗೆ ಇಂದು ವಿಧಾನಸಭೆಯಲ್ಲಿ ಚರ್ಚೆ ನಡೆಯಿತು.ಈ ಸಂದರ್ಭದಲ್ಲಿ ಮಾತನಾಡಿದ ಶಿಕ್ಷಣ ಸಚಿವ ದಾದಾ ಭೂಸೆ, ಟಿಇಟಿ ಪತ್ರಿಕೆ ಸೋರಿಕೆ ಬಗ್ಗೆ ಮಾಹಿತಿ ಬಂದಿದ್ದು, ಪೊಲೀಸರು ಬಲೆ ಬೀಸಿ ಪತ್ರಿಕೆ ಮಾರಾಟ ಮಾಡಲು ಬರುತ್ತಿದ್ದ ಮೂವರನ್ನು ವಶಕ್ಕೆ ಪಡೆದಿದ್ದಾರೆ.ಅವರನ್ನು ವಿಚಾರಣೆ ನಡೆಸಿದಾಗ, ಅವರೊಂದಿಗೆ ಟಿಇಟಿ ಪತ್ರಿಕೆಗಳು ಪತ್ತೆಯಾಗಿವೆ ಎಂದರು.

ಈ ಪತ್ರಿಕೆಗಳನ್ನು ದೊಡ್ಡ ಮೊತ್ತದ ಹಣಕ್ಕೆ ಮಾರಾಟ ಮಾಡಬೇಕಿತ್ತು.ಈ ಅಪರಾಧದಲ್ಲಿ 3 ಆರೋಪಿಗಳನ್ನು ಬಂಧಿಸಲಾಗಿದೆ.ತನಿಖೆಗೆ ಎಸ್‌ಐಟಿ ರಚಿಸಲಾಗಿದೆ. ತನಿಖೆಗಾಗಿ ಹರಿಯಾಣ, ಬಿಹಾರ ಮತ್ತು ದಿಲ್ಲಿಗೆ ತಂಡಗಳನ್ನು ಕಳುಹಿಸಲಾಗಿದೆ. ಈ ಪ್ರಕರಣದಲ್ಲಿ ಮೋಕಾ ವಿಧಿಸುವ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಸಚಿವರು ಹೇಳಿದರು.

ಜು.1 ರಿಂದ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಕಡ್ಡಾಯ: ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ

ಮುಂಬಯಿ,ಜೂ.29- ರಾಜ್ಯದಲ್ಲಿ 2019ರ ಎ.1 ಕ್ಕಿಂತ ಮೊದಲು ನೋಂದಣಿಯಾಗಿರುವ ಎಲ್ಲಾ ವಾಹನಗಳಿಗೆ ಹೈ ಸೆಕ್ಯುರಿಟಿ ರಿಜಿಸ್ಟ್ರೇಷನ್ ನಂಬರ್‌ಪ್ಲೇಟ್ (ಹೆಚ್‌ಎಸ್‌ಆರ್‌ಪಿ) ಅಳವಡಿಸಲು ಜೂ.30 ಅಂತಿಮ ಗಡುವಾಗಿದೆ. ಜು. 1 ರಿಂದ ನಿಯಮ ಉಲ್ಲಂಘಿಸುವ ವಾಹನ ಸವಾರರ ವಿರುದ್ಧ ಮೋಟಾರು ವಾಹನ ಕಾಯ್ದೆಯಡಿ ಪೊಲೀಸ್ ಮತ್ತು ಸಾರಿಗೆ ಇಲಾಖೆ ಕಠಿಣ ಕ್ರಮ ಕೈಗೊಳ್ಳಲಿದೆ. ಹೆಚ್‌ಎಸ್‌ಆರ್‌ಪಿ ಅಳವಡಿಸದ ವಾಹನಗಳ ಮಾಲೀಕತ್ವ ವರ್ಗಾವಣೆ, ವಿಳಾಸ ಬದಲಾವಣೆ, ಸಾಲದ ಹೊರೆ ದಾಖಲಿಸುವುದು ಅಥವಾ ರದ್ದುಗೊಳಿಸುವುದು ಮತ್ತು ಪರವಾನಗಿ ನವೀಕರಣದಂತಹ ಪ್ರಮುಖ ಆರ್‌ಟಿಒ ಸೇವೆಗಳನ್ನು ಸ್ಥಗಿತಗೊಳಿಸಲಾಗುತ್ತದೆ. ಆದರೆ ಫಿಟ್‌ನೆಸ್ ಪ್ರಮಾಣಪತ್ರ ನವೀಕರಣಕ್ಕೆ ಇದು ಅನ್ವಯಿಸುವುದಿಲ್ಲ. ಜೂ.30 ರೊಳಗೆ ಹೆಚ್‌ಎಸ್‌ಆರ್‌ಪಿಗಾಗಿ ಅಧಿಕೃತವಾಗಿ ಅಪಾಯಿಂಟ್‌ಮೆಂಟ್ ಕಾಯ್ದಿರಿಸಿದ ವಾಹನ ಸವಾರರಿಗೆ ಸದ್ಯ ದಂಡನೆಯಿಂದ ತಾತ್ಕಾಲಿಕ ವಿನಾಯಿತಿ ನೀಡಲಾಗಿದೆ. ಹೆಚ್‌ಎಸ್‌ಆರ್‌ಪಿ ಅಳವಡಿಕೆಗಾಗಿ ರಾಜ್ಯದಲ್ಲಿ ಮೂರು ವಲಯಗಳನ್ನು ಗುರುತಿಸಿ ಪ್ರತ್ಯೇಕ ಕಂಪನಿಗಳನ್ನು ನೇಮಿಸಲಾಗಿದೆ. ಸರ್ಕಾರ ನಿಗದಿಪಡಿಸಿದ ದರದಂತೆ ದ್ವಿಚಕ್ರ ವಾಹನಗಳಿಗೆ 450 ರೂ., ತ್ರಿಚಕ್ರ ವಾಹನಗಳಿಗೆ 500 ರೂ. ಹಾಗೂ ಲಘು ಮತ್ತು ಭಾರಿ ವಾಹನಗಳಿಗೆ 745 ರೂ. ಶುಲ್ಕವಿರಲಿದೆ. ಎಲ್ಲಾ ಸರಕಾರಿ ಹಾಗೂ ಅರೆ ಸರಕಾರಿ ಕಚೇರಿಗಳು ತಮ್ಮ ವಾಹನಗಳಿಗೆ ತಕ್ಷಣವೇ ಹೆಚ್‌ಎಸ್‌ಆರ್‌ಪಿ ಅಳವಡಿಸಿಕೊಳ್ಳುವಂತೆ ಸಾರಿಗೆ ಇಲಾಖೆಯ ಜಂಟಿ ಆಯುಕ್ತ ಶೈಲೇಶ್ ಕಾಮತ್ ತಿಳಿಸಿದ್ದಾರೆ.

ಮಹಾರಾಷ್ಟ್ರ ವಿಧಾನಭವನಕ್ಕೆ ಹುಸಿ ಬಾಂಬ್ ಬೆದರಿಕೆ

ಮುಂಬಯಿ, ಜೂ.29- ಮಹಾರಾಷ್ಟ್ರ ವಿಧಾನಭವನದ ಆವರಣ ಮತ್ತು ಇತರ ಪ್ರಮುಖ ಸ್ಥಳಗಳಲ್ಲಿ ಬಾಂಬ್ ಸ್ಫೋಟದ ಬೆದರಿಕೆ ಇಮೇಲ್ ಬಂದ ಬಳಿಕ ಭದ್ರತಾ ಸಂಸ್ಥೆಗಳು ಅದರ ಸಂಕೀರ್ಣದಲ್ಲಿ ಸಮಗ್ರ ಶೋಧ ನಡೆಸಿದ್ದು, ಈ ಸಂದರ್ಭ ಯಾವುದೇ ಅನುಮಾನಾಸ್ಪದ ವಸ್ತು ಕಂಡುಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಶುಕ್ರವಾರ ಬೆಳಿಗ್ಗೆ 8.11 ಕ್ಕೆ ದೊರಕಿದ ಇಮೇಲ್‌ನಲ್ಲಿ, ನಾರಿಮನ್ ಪಾಯಿಂಟ್‌ನಲ್ಲಿರುವ ವಿಧಾನ ಭವನ, ಮಧ್ಯಾಹ್ನ 1.11 ಕ್ಕೆ ಬಾಂಬ್ ಸ್ಫೋಟದ ಎಚ್ಚರಿಕೆ ನೀಡಲಾಗಿದೆ. ಹೆಸರಿಸದ ಮೆಟ್ರೋ ನಿಲ್ದಾಣ, ಮಂತ್ರಾಲಯ (ರಾಜ್ಯ ಕಾರ್ಯದರ್ಶಿ) ಮತ್ತು ಬಾಂಬೇ ಸ್ಟಾಕ್ ಎಕ್ಸ್‌ಚೇಂಜ್‌ನ್ನು ಸಂಭಾವ್ಯ ಗುರಿಗಳಾಗಿ ಉಲ್ಲೇಖಿಸಲಾಗಿದೆ,ಅದರಂತೆ ಅಧಿಕಾರಿಗಳು ಭದ್ರತಾ ಕ್ರಮಗಳನ್ನು ಹೆಚ್ಚಿಸಿದ್ದಾಗಿ ಅವರು ಹೇಳಿದ್ದಾರೆ. ಶುಕ್ರವಾರ ರಜಾದಿನವಾಗಿದ್ದರೂ,ಪೊಲೀಸರು ಮತ್ತು ಇತರ ಭದ್ರತಾ ಸಂಸ್ಥೆಗಳು ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನಗಳಿಗೆ ಅನುಸಾರವಾಗಿ ವಿಧಾನ ಭವನ ಆವರಣದಲ್ಲಿ ಸಂಪೂರ್ಣ ಶೋಧ ನಡೆಸಿದರು.

ವ್ಯಾಪಕ ತಪಾಸಣೆಯ ಬಳಿಕ ಬಾಂಬ್ ಬೆದರಿಕೆ ಸುಳ್ಳು ಎಂದು ಅಧಿಕಾರಿಗಳು ಘೋಷಿಸಿದರು. ರಾಜ್ಯ ವಿಧಾನಸಭೆಯ ಮಳೆಗಾಲದ ಅಧಿವೇಶನ ನಡೆಯುತ್ತಿರುವ ಹೈ ಸೆಕ್ಯುರಿಟಿ ಸಂಕೀರ್ಣವನ್ನು ಸೋಮವಾರ ಮತ್ತೆ ಶೋಧಿಸಲಾಯಿತು.

ಶಾಸಕಾಂಗ ಸಂಕೀರ್ಣಕ್ಕೆ ಬಂದಿರುವ ಇಂತಹ ಬೆದರಿಕೆ ಇದೇ ಮೊದಲಲ್ಲ. ಹಿಂದಿನ ವಿಧಾನಸಭೆಯ ಅಧಿವೇಶನದಲ್ಲೂ ಇದೇ ರೀತಿಯ ಬಾಂಬ್ ಬೆದರಿಕೆ ಇಮೇಲ್ ಬಂದಿತ್ತು. ಪೊಲೀಸರು ಇಮೇಲ್‌ನ ಮೂಲವನ್ನು ಪರಿಶೀಲಿಸುತ್ತಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಮ ಮಂದಿರ ದೇಣಿಗೆ ವಿವಾದ: ಅಯೋಧ್ಯೆ ವಕೀಲರಿಂದ ಆರೋಪಿಗಳಿಗೆ ಬಹಿಷ್ಕಾರ

ಅಯೋಧ್ಯೆ, ಜೂ.29 - ರಾಮ ಮಂದಿರ ದೇಣಿಗೆಗಳ ದುರುಪಯೋಗದ ಆರೋಪದ ಮೇಲೆ ಹೆಚ್ಚುತ್ತಿರುವ ಆಕ್ರೋಶದ ನಡುವೆ,ಅಯೋಧ್ಯೆಯ ಫೈಜಾಬಾದ್ ಬಾರ್ ಅಸೋಸಿಯೇಷನ್ ತನ್ನ ಯಾವುದೇ ಸದಸ್ಯರು ಬಂಧಿತ 8 ಆರೋಪಿಗಳ ಪರವಾಗಿ ಪ್ರತಿನಿಧಿಸುವುದಿಲ್ಲ ಎಂದು ಘೋಷಿಸಿತು.

ವಕೀಲರ ಸಂಘವು ತನ್ನ ನಿರ್ಧಾರವನ್ನು ವಿರೋಧಿಸುವ ಯಾವುದೇ ಸದಸ್ಯರು 5 ಲಕ್ಷ ರೂ. ದಂಡವನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸುವ ನಿರ್ಣಯವನ್ನು ಅಂಗೀಕರಿಸಿತು ಮತ್ತು ಮಂದಿರದ ನಿರ್ವಹಣೆಗೆ ಸಂಬಂಧಿಸಿದ ಆದರೆ ಎಫ್‌ಐಆರ್‌ನಲ್ಲಿ ಉಲ್ಲೇಖಿಸದ ಚಂಪತ್ ರಾಯ್, ಅನಿಲ್ ಮಿಶ್ರಾ ಮತ್ತು ಗೋಪಾಲ್ ರಾವ್ - ಎಲ್ಲರೂ ಅಯೋಧ್ಯೆಯನ್ನು ತೊರೆಯಬೇಕು ಎಂದು ಒತ್ತಾಯಿಸಿತು.

ಮೂರು ದಿನಗಳಲ್ಲಿ ಮೂವರು ಹೊರಹೋಗದಿದ್ದರೆ, ಇಡೀ ಅಯೋಧ್ಯಾ ನಗರವನ್ನು ಮುತ್ತಿಗೆ ಹಾಕಲಾಗುವುದು ಮತ್ತು ಯಾರಿಗೂ ಪ್ರವೇಶಿಸಲು ಅವಕಾಶ ನೀಡಲಾಗುವುದಿಲ್ಲ ಎಂದು ಅದು ಎಚ್ಚರಿಸಿದೆ.

2005ರಲ್ಲಿ ಆಗಿನ ತಾತ್ಕಾಲಿಕ ರಾಮ ಮಂದಿರದ ಮೇಲೆ ನಡೆದ ಭಯೋತ್ಪಾದಕ ದಾಳಿಯ ಬಳಿಕ ವಕೀಲರು ಆರೋಪಿಗಳ ಪರವಾಗಿ ವಾದಿಸದಿರಲು ನಿರ್ಧರಿಸಿದಾಗ ಬಾರ್ ಇದೇ ರೀತಿಯ ಬಹಿಷ್ಕಾರ ನಿರ್ಧಾರವನ್ನು ತೆಗೆದುಕೊಂಡಿತ್ತು. ಅಂತಿಮವಾಗಿ, ಲಕ್ನೋದ ವಕೀಲರು ಪ್ರಕರಣದಲ್ಲಿ ಆರೋಪಿಗಳ ಪರವಾಗಿ ನಿಂತರು.

ಕಳೆದ ಗುರುವಾರ ಬಂಧಿಸಲಾದ 8 ಆರೋಪಿಗಳನ್ನು ಭ್ರಷ್ಟಾಚಾರ ನಿಗ್ರಹ ನ್ಯಾಯಾಲಯದ ವಿಶೇಷ ನ್ಯಾಯಾಧೀಶ ರಜತ್ ವರ್ಮಾ ಅವರ ಮುಂದೆ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಹಾಜರುಪಡಿಸಲಾಯಿತು ಮತ್ತು ಪೊಲೀಸರು ಅವರ ಕಸ್ಟಡಿಗಾಗಿ ಕೋರದ ಕಾರಣ ಅವರನ್ನು ಎರಡು ವಾರಗಳ ಕಾಲ ಹೆಚ್ಚುವರಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಯಿತು ಎಂದು ವಿಶೇಷ ಪ್ರಾಸಿಕ್ಯೂಷನ್ ಅಧಿಕಾರಿ ಉಮೇಶ್ ದುಬೆ ಹೇಳಿದರು.

ಆದಾಯ ಹೆಚ್ಚಿಸಿ, ಇಲ್ಲವೆ ಕ್ರಮ ಎದುರಿಸಿ; ಎಸ್‌ಟಿ ಅಧಿಕಾರಿಗಳಿಗೆ ಸಾರಿಗೆ ಸಚಿವ ಸರ್ನಾಯಕ್ ತಾಕೀತು



ಮುಂಬಯಿ,ಜೂ.29 - ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ನಿಗಮದ (ಎಸ್‌ಟಿ) ಆದಾಯವನ್ನು ಹೆಚ್ಚಿಸಲು ಎಲ್ಲಾ ಹಂತದ ಅಧಿಕಾರಿಗಳಿಗೆ ಒಂದು ತಿಂಗಳ ಗಡುವು ನೀಡಿರುವ ಸಾರಿಗೆ ಸಚಿವ ಹಾಗೂ ಎಸ್‌ಟಿ ನಿಗಮದ ಅಧ್ಯಕ್ಷ ಪ್ರತಾಪ್ ಸರ್ನಾಯಕ್ ಅವರು,ಅದಕ್ಕೆ ವಿಫಲರಾದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ. ಈ ಅವಧಿಯಲ್ಲಿ ಆದಾಯವನ್ನು ಹೆಚ್ಚಿಸುವಲ್ಲಿ ನಿರ್ದಿಷ್ಟ ಫಲಿತಾಂಶಗಳು ಕಂಡುಬಾರದಿದ್ದರೆ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ವರ್ಗಾವಣೆ, ಹಿಂಬಡ್ತಿ ಅಥವಾ ಅಮಾನತು ಮುಂತಾದ ಕಠಿಣ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಎಸ್‌ಟಿ ಕೇವಲ ಸಾರಿಗೆ ಸೇವೆಯಲ್ಲ, ಬದಲಾಗಿ ರಾಜ್ಯದ ಸಾಮಾನ್ಯ ಜನರ ಜೀವನಾಡಿಯಾಗಿದೆ ಎಂದು ಸಚಿವ ಸರ್ನಾಯಕ್ ಹೇಳಿದರು. ನೌಕರರ ಬಾಕಿ ಇರುವ ಆರ್ಥಿಕ ಬೇಡಿಕೆಗಳನ್ನು ಸ್ವೀಕರಿಸುವ ಮೂಲಕ ಸರಕಾರವು ಹೆಚ್ಚಿನ ಪರಿಹಾರವನ್ನು ನೀಡಿದೆ. ಆದ್ದರಿಂದ, ಈಗ ಆಡಳಿತ ಮಂಡಳಿ ಮತ್ತು ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಆದಾಯವನ್ನು ಹೆಚ್ಚಿಸಲು ಗರಿಷ್ಠ ಪ್ರಯತ್ನಗಳನ್ನು ಮಾಡಬೇಕು. ಸಭೆಗಳನ್ನು ನಡೆಸುವುದು ಅಥವಾ ಕಾಗದದ ಮೇಲೆ ಯೋಜಿಸುವುದು ಸಾಕಾಗುವುದಿಲ್ಲ, ಆದರೆ ನಿಜವಾದ ಫಲಿತಾಂಶಗಳನ್ನು ನೋಡಬೇಕು ಎಂದು ಅವರು ತಿಳಿಸಿದರು.

ಈ ವರ್ಷದ ಎಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ, ಪ್ರಯಾಣ ದರ ಏರಿಕೆ ಜಾರಿಗೆ ಬಂದಿದ್ದರೂ, ಎಸ್‌ಟಿ ಭಾರೀ ನಷ್ಟವನ್ನು ಭರಿಸಬೇಕಾಯಿತು. ವರ್ಷದ ಅತಿ ಹೆಚ್ಚು ಆದಾಯವನ್ನು ಗಳಿಸುವ ಈ ಎರಡು ತಿಂಗಳಲ್ಲಿನ ಈ ಕುಸಿತವು ಗಂಭೀರವಾಗಿದೆ ಮತ್ತು ಯಾವುದೇ ಸಂದರ್ಭದಲ್ಲೂ ಇದನ್ನು ಸ್ವೀಕರಿಸಲಾಗುವುದಿಲ್ಲ. ರಾಜ್ಯದ 31 ಇಲಾಖೆಗಳಲ್ಲಿ 21 ಇಲಾಖೆಗಳು ನಷ್ಟದಲ್ಲಿವೆ ಮತ್ತು ಇದು ನಿರ್ವಹಣೆಯ ದಕ್ಷತೆಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ ಎಂದು ಅವರು ಉಲ್ಲೇಖಿಸಿದರು.

ರಾಮ ಮಂದಿರ ದೇಣಿಗೆ ಲೂಟಿ : ತುರ್ತು ವಿಚಾರಣೆಗೆ ಅವಸರವೇನು? : ದೂರು ತಿರಸ್ಕರಿಸಿದ ಸುಪ್ರೀಂಕೋರ್ಟ್

ಹೊಸದಿಲ್ಲಿ, ಜೂ. 29- ಅಯೋಧ್ಯೆ ರಾಮ ಮಂದಿರದ ದೇಣಿಗೆ ಲೂಟಿ ಆರೋಪ ಬಗ್ಗೆ ನಿಷ್ಪಕ್ಷಪಾತ ಮತ್ತು ಕಾಲಮಿತಿಯ ತನಿಖೆಗೆ ಆದೇಶಿಸಬೇಕೆಂಬ ದೂರಿನ ತ್ವರಿತ ವಿಚಾರಣೆಗೆ ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ನ್ಯಾಯಮೂರ್ತಿಗಳಾದ ಎಂ. ಎಂ. ಸುಂದ್ರೇಶ್ ಮತ್ತು ಶೀಲ್ ನಾಗು ಅವರನ್ನು ಒಳಗೊಂಡ ವಿಭಾಗೀಯ ಪೀಠವು, ಅಯೋಧ್ಯೆ ಕುರಿತ ದೂರಿತ ತುರ್ತು ವಿಚಾರಣೆಗೆ ಅವಸರವಿಲ್ಲ ಎಂದು ಹೇಳಿ, ಸುಪ್ರೀಂಕೋರ್ಟಿನ ಬೇಸಿಗೆ ರಜೆಯ ಬಳಿಕ ದೂರನ್ನು ವಿಚಾರಣೆಗೆ ಸ್ವೀಕರಿಸುವುದಾಗಿ ಹೇಳಿದೆ. ''ಆಕಾಶವೇನೂ ಕಳಚಿ ಬೀಳುವುದಿಲ್ಲ. ಅಂತಹ ತುರ್ತು ಏನಿದೆ?'' ಎಂದು ನ್ಯಾಯಪೀಠ ಮೌಖಿಕವಾಗಿ ದೂರುದಾರರನ್ನು ಪ್ರಶ್ನಿಸಿದೆ.

ವಕೀಲರುಗಳಾದ ಅಜಯ್ ಕುಮಾರ್ ರಾಯ್ ಮತ್ತು ರಿತೇಶ್ ಕುಮಾರ್ ಯಾದವ್ ಸಲ್ಲಿಸಿರುವ ದೂರಿನಲ್ಲಿ, ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟಿನ ಆಡಳಿತ ಮತ್ತು ವ್ಯವಹಾರದಲ್ಲಿ ನಡೆದಿದೆ ಎನ್ನಲಾದ ಹಣಕಾಸಿನ ಅವ್ಯವಹಾರಗಳು ಮತ್ತು ಇತರ ಅಕ್ರಮ ವ್ಯವಹಾರಗಳ ಕುರಿತಂತೆ ಸಿಬಿಐ ನೇತೃತ್ವದ ಬಹು ಶಿಸ್ತಿನ ವಿಶೇಷ ತನಿಖಾ ತಂಡ (ಎಸ್‌ಐಟಿ) ತನಿಖೆ ನಡೆಸಬೇಕು ಎಂದು ಕೋರಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಒಂದು ಪ್ರಥಮ ಮಾಹಿತಿ ದಾಖಲು (ಎಫ್‌ಐಆರ್) ಆಗಬೇಕು ಮತ್ತು ಕೇಂದ್ರ, ಉತ್ತರ ಪ್ರದೇಶ ಸರಕಾರ ಹಾಗೂ ಮಂದಿರ ಟ್ರಸ್ಟಿಗೆ ಸೂಕ್ತ ನಿರ್ದೇಶನ ನೀಡಿ ದೇವಸ್ಥಾನದ ಎಲ್ಲ ವ್ಯವಹಾರ ಬಗ್ಗೆ ಸೂಕ್ತ ದಾಖಲಾತಿಗೆ ಕ್ರಮ ತೆಗೆದುಕೊಳ್ಳುವಂತೆ ಆದೇಶ ನೀಡಬೇಕು. ಸಾರ್ವಜನಿಕರ ಹಿತರಕ್ಷಣೆ ಮತ್ತು ಮಿಲಿಯಾಂತರ ಭಕ್ತರು ಹಾಗೂ ದೇಣಿಗೆದಾರರ ವಿಶ್ವಾಸ ಕಾಯ್ದುಕೊಳ್ಳಲು ದೇವಸ್ಥಾನದ ದೇಣಿಗೆ, ಹುಂಡಿ ಮತ್ತು ಇತರ ವಸ್ತುಗಳ ಬಗ್ಗೆ ಸೂಕ್ತ ಮೇಲ್ವಿಚಾರಣೆ ಮತ್ತು ಆಡಿಟ್ ವ್ಯವಸ್ಥೆಗೆ ಆದೇಶಿಸಬೇಕು ಎಂದು ದೂರಿನಲ್ಲಿ ವಿನಂತಿಸಲಾಗಿದೆ.

ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟಿಗೆ ಸಂಬಂಧಿಸಿದಂತೆ ಕೇಳಿ ಬಂದಿರುವ ದೇಣಿಗೆ ಮತ್ತು ಹುಂಡಿ ದುರುಪಯೋಗದ ಆರೋಪಗಳು ಸತ್ಯವೇ ಅಥವಾ ಸುಳ್ಳೇ ಎಂದು ತಿಳಿದಿಲ್ಲ. ಆದರೆ ಆರೋಪಗಳು ಸತ್ಯವಾದಲ್ಲಿ ಅಯೋಧ್ಯೆಯ ಘನತೆ ಮತ್ತು ಪ್ರತಿಷ್ಠೆಗೆ ದೊಡ್ಡ ಆಘಾತವಾಗಿದ್ದು, ಅಂತಹ ಗೌರವವನ್ನು ಮರು ಸ್ಥಾಪನೆಗೆ ಭಾರೀ ಹೋರಾಟ ನಡೆಸಬೇಕಾಗುತ್ತದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಉತ್ತರ ಪ್ರದೇಶ ಸರಕಾರ ತನಿಖೆಗೆ ರಚನೆ ಮಾಡಿರುವ ಎಸ್‌ಐಟಿ ತನಿಖೆ ನಡೆಸುವಾಗ ಯಾವುದೇ ಎಫ್‌ಐಆರ್ ದಾಖಲಿಸಿರಲಿಲ್ಲ ಮಾತ್ರವಲ್ಲ ಸಾಮಾನ್ಯ ಕ್ರಿಮಿನಲ್ ದೂರನ್ನೂ ಸಲ್ಲಿಸಿರಲಿಲ್ಲ ಎಂದು ದೂರಿನಲ್ಲಿ ಆಪಾದಿಸಲಾಗಿದೆ.

ಅಯೋಧ್ಯೆ ರಾಮ ಮಂದಿರದ ದೇಣಿಗೆಯ ಲೂಟಿ ವರದಿಗಳ ಬಗ್ಗೆ ಸ್ವತಂತ್ರ ವೃತ್ತಿಪರ ತನಿಖೆ ನಡೆಯಬೇಕಿದೆ. ಕಾಲಮಿತಿಯೊಳಗೆ ತನಿಖೆ ನಡೆದು ದೇವಸ್ಥಾನದ ಗೌರವಕ್ಕೆ ಚ್ಯುತಿ ಬರುವುದನ್ನು ತಪ್ಪಿಸಬೇಕಾಗಿದೆ. ದೇವಸ್ಥಾನದ ಆಡಳಿತ ಪಾರದರ್ಶಕವಾಗಬೇಕಾಗಿದೆ ಮತ್ತು ದೇವಸ್ಥಾನದ ದೇಣಿಗೆಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವ ವ್ಯವಸ್ಥೆ ಆಗಬೇಕಿದೆ ಎಂದೂ ದೂರಿನಲ್ಲಿ ಕೋರಲಾಗಿದೆ.

ಅಂತಹ ತನಿಖೆಯಿಂದ ಜನರಿಗೆ ರಾಮ ಮಂದಿರದ ಬಗ್ಗೆ ವಿಶ್ವಾಸ ಹೆಚ್ಚುತ್ತದೆ. ಇದು ಕೋಟ್ಯಾಂತರ ಭಕ್ತರ ಭಾವನೆ ಮತ್ತು ನಂಬಿಕೆಯ ವಿಚಾರವಾಗಿದೆ. ಅವರ ಭಕ್ತಿ ಮತ್ತು ನಂಬಿಕೆಗೆ ಚ್ಯುತಿ ಬಾರದಂತೆ ನೋಡಿಕೊಂಡು ರಾಮ ಮಂದಿರದ ಘನತೆಯನ್ನು ಎತ್ತಿ ಹಿಡಿಯಬೇಕಾಗಿದೆ. ಅದಕ್ಕಾಗಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚನೆಯಾಗಬೇಕು. ಅಧಿಕಾರಿಗಳ ಮಟ್ಟದ ತಜ್ಞರನ್ನು ಒಳಗೊಂಡ ತಂಡ ಅದಾಗಿರಬೇಕು ಎಂದು ದೂರಿನಲ್ಲಿ ವಿನಂತಿಸಲಾಗಿದೆ.

ಅಯೋಧ್ಯೆ ರಾಮ ಮಂದಿರದ ದೇಣಿಗೆ ಲೂಟಿ ಕುರಿತಂತೆ ತನಿಖೆಗೆ ಉತ್ತರ ಪ್ರದೇಶ ಸರಕಾರ ಜೂನ್ 13ರಂದು ವಿಶೇಷ ತನಿಖಾ ತಂಡವನ್ನು ರಚಿಸಿದ್ದು ಎಸ್‌ಐಟಿ ಅದರ ತನಿಖೆಯ ಪ್ರಾಥಮಿಕ ವರದಿಯನ್ನು ಸರಕಾರಕ್ಕೆ ಸಲ್ಲಿಸಿದೆ. ಅದರ ಆಧಾರದಲ್ಲಿ ಪೊಲೀಸರಿಗೆ ಟ್ರಸ್ಟ್ ದೂರು ನೀಡಿದ್ದು, ಪ್ರಕರಣದಲ್ಲಿ 8 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಮುಂಬಯಿ ಮರಾಠಿ ಪತ್ರಕರ್ತರ ಸಂಘದ ಚುನಾವಣೆ: ಪರಿವರ್ತನ್ ಪ್ಯಾನಲ್‌ಗೆ ಐತಿಹಾಸಿಕ ಜಯ



ಮುಂಬಯಿ,ಜೂ.29 - ಮರಾಠಿ ಪತ್ರಕರ್ತರ ಸಂಘದ 2026-2028ರ ದ್ವೈವಾರ್ಷಿಕ ಪದಾಧಿಕಾರಿಗಳ ಚುನಾವಣೆಯಲ್ಲಿ ಸಂದೀಪ್ ಚವ್ಹಾಣ್ ನೇತೃತ್ವದ ಪರಿವರ್ತನ್ ಪ್ಯಾನಲ್ ಸತತ ಎರಡನೇ ಬಾರಿಗೆ ಭರ್ಜರಿ ಯಶಸ್ಸು ಸಾಧಿಸುವ ಮೂಲಕ ಹೊಸ ಇತಿಹಾಸ ಸೃಷ್ಟಿಸಿದೆ. ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಸಂದೀಪ್ ಚವ್ಹಾಣ್ ಅವರು ದಾಖಲೆಯ 366 ಮತಗಳನ್ನು ಪಡೆದು ಜಯಗಳಿಸಿದರೆ, ಅವರ ಪ್ರತಿಸ್ಪರ್ಧಿ ವಿಷ್ಣು ಸೋನಾವಣೆ ಕೇವಲ 108 ಮತಗಳನ್ನು ಗಳಿಸಲಷ್ಟೇ ಶಕ್ತರಾದರು. ಇನ್ನುಳಿದಂತೆ ಉಪಾಧ್ಯಕ್ಷ ಸ್ಥಾನಕ್ಕೆ ಸ್ವಾತಿ ಘೋಷಾಲ್ಕರ್ ಹಾಗೂ ರಾಜೇಂದ್ರ ಹುಂಜೆ, ಕಾರ್ಯದರ್ಶಿಯಾಗಿ ಶೈಲೇಂದ್ರ ಶಿರ್ಕೆ, ಕೋಶಾಧಿಕಾರಿಯಾಗಿ ಜಗದೀಶ್ ಬೋವಡ್ ಮತ್ತು ಟ್ರಸ್ಟಿಯಾಗಿ ಪ್ರಕಾಶ್ ಕುಲಕರ್ಣಿ ಅವರು ದೊಡ್ಡ ಮತಗಳ ಅಂತರದಿಂದ ವಿಜಯಶಾಲಿಯಾಗಿದ್ದಾರೆ.

ಅಲ್ಲದೆ ಕಾರ್ಯಕಾರಿ ಸಮಿತಿಯ 9 ಸದಸ್ಯ ಸ್ಥಾನಗಳಿಗೂ ಪರಿವರ್ತನ್ ಪ್ಯಾನಲ್‌ನ ಗಜಾನನ ಸಾವಂತ್ ಸೇರಿದಂತೆ ಎಲ್ಲಾ ಅಭ್ಯರ್ಥಿಗಳು ಭರ್ಜರಿ ಜಯ ದಾಖಲಿಸಿದ್ದಾರೆ.ಲೋನಾವಳ ವಿಶ್ರಾಂತಿ ಗೃಹದ ನವೀಕರಣ ಸೇರಿದಂತೆ ನಾವು ಕೈಗೊಂಡ ಅಭಿವೃದ್ಧಿ ಕಾರ್ಯಗಳಿಗೆ ಮತದಾರರು ನೀಡಿದ ಪ್ರೀತಿಯ ಗೌರವ ಇದಾಗಿದೆ ಎಂದು ನೂತನ ಅಧ್ಯಕ್ಷ ಸಂದೀಪ್ ಚವ್ಹಾಣ್ ಹರ್ಷ ವ್ಯಕ್ತಪಡಿಸಿದ್ದಾರೆ. ಈ ಮೂಲಕ ಒಟ್ಟು 15 ಸ್ಥಾನಗಳನ್ನು ತನ್ನದಾಗಿಸಿಕೊಂಡ ಪರಿವರ್ತನ್ ಪ್ಯಾನಲ್ ಸಂಘದಲ್ಲಿ ತನ್ನ ಪೂರ್ಣ ಮೇಲುಗೈಯನ್ನು ಮುಂದುವರಿಸಿದೆ.

ಮುಂಬಯಿಗೆ ನೀರು ಸರಬರಾಜು ಮಾಡುವ ಜಲಾಶಯಗಳಲ್ಲಿ ಶೇ. 7 ಕ್ಕಿಂತ ಕಡಿಮೆ ನೀರಿನ ಸಂಗ್ರಹ ಬಾಕಿ

ಮುಂಬಯಿ, ಜೂ. 29 - ಮುಂಬೈ ತನ್ನ ಏಳು ಸರಬರಾಜು ಜಲಾಶಯಗಳಲ್ಲಿನ ಒಟ್ಟು ಪ್ರಸ್ತುತ ಶೇಖರಣಾ ಮಟ್ಟವು ಶೇಕಡಾ 7 ಕ್ಕಿಂತ ಕಡಿಮೆಗೆ ಇಳಿದಿರುವುದರಿಂದ ತೀವ್ರ ನೀರಿನ ಬಿಕ್ಕಟ್ಟನ್ನು ಎದುರಿಸುತ್ತಿದೆ, ಇದು ಕಳೆದ ವರ್ಷಕ್ಕಿಂತ ಗಮನಾರ್ಹವಾಗಿ ಕಡಿಮೆಯಾಗಿದೆ, ಇದಕ್ಕೆ ಕಾರಣ ಮುಂಗಾರು ವಿಳಂಬ ಮತ್ತು ಈ ವರ್ಷ ಇದುವರೆಗೆ ಸಾಕಷ್ಟು ಮಳೆಯಾಗದಿರುವುದು.

ಕಳೆದ ವರ್ಷದ ಇದೇ ಅವಧಿಯಲ್ಲಿ, ಈ ಏಳು ಅಣೆಕಟ್ಟುಗಳಲ್ಲಿನ ನೀರಿನ ಸಂಗ್ರಹವು ಶೇಕಡಾ 39.5 ರಷ್ಟಿತ್ತು.

ಬೃಹನ್ಮುಂಬೈ ಮುನ್ಸಿಪಲ್ ಕಾರ್ಪೊರೇಷನ್‌ನ ಹೈಡ್ರಾಲಿಕ್ ಇಂಜಿನಿಯರ್ ಇಲಾಖೆಯ ಮಾಹಿತಿಯ ಪ್ರಕಾರ, ಏಳು ಜಲಾಶಯಗಳು ಒಟ್ಟಾಗಿ ಬೆಳಿಗ್ಗೆ 6 ಗಂಟೆಗೆ (ಸೋಮವಾರ) 1,00,279 ಮಿಲಿಯನ್ ಲೀಟರ್ ನೀರನ್ನು ಅಥವಾ ಅವುಗಳ ಒಟ್ಟು ಲೈವ್ ಶೇಖರಣಾ ಸಾಮರ್ಥ್ಯದ ಶೇಕಡಾ 6.93 ರಷ್ಟು ನೀರನ್ನು ಹೊಂದಿದ್ದವು, ಇದು ಕಳೆದ ವರ್ಷದ ಇದೇ ದಿನದಂದು 5,71,670 ಮಿಲಿಯನ್ ಲೀಟರ್ (ಶೇಕಡಾ 39.5) ಇತ್ತು.

ಭತ್ಸಾ, ಅಪ್ಪರ್ ವೈತರ್ಣ, ಮೋದಕ್ ಸಾಗರ್, ತನ್ಸಾ, ಮಿಡಲ್ ವೈತರ್ಣ, ತುಳಸಿ ಮತ್ತು ವಿಹಾರ್ ಎಂಬ ಏಳು ಜಲಾಶಯಗಳು ದೇಶದ ಆರ್ಥಿಕ ರಾಜಧಾನಿ ಮತ್ತು ಅದರ ಮಹಾನಗರ ಪ್ರದೇಶಗಳಿಗೆ ಕುಡಿಯುವ ನೀರನ್ನು ಪೂರೈಸುವ ಸಂಪೂರ್ಣ ಏಳು ಸರೋವರ ವ್ಯವಸ್ಥೆಯನ್ನು ರೂಪಿಸುತ್ತವೆ. ಅವು ಒಟ್ಟು 14.47 ಲಕ್ಷ ಮಿಲಿಯನ್ ಲೀಟರ್‌ಗಳ ಉಪಯುಕ್ತ ಸಂಗ್ರಹ ಸಾಮರ್ಥ್ಯವನ್ನು ಹೊಂದಿವೆ ಮತ್ತು ಮುಂಬೈಗೆ ಪ್ರತಿದಿನ ಸುಮಾರು 4,000 ಮಿಲಿಯನ್ ಲೀಟರ್ ಕುಡಿಯುವ ನೀರನ್ನು ಪೂರೈಸುತ್ತವೆ.

ನಾಲ್ಕು ಪ್ರಮುಖ ಜಲಾಶಯಗಳಾದ ಅಪ್ಪರ್ ವೈತರ್ಣ, ಮೋದಕ್ ಸಾಗರ್, ತನ್ಸಾ ಮತ್ತು ಮಿಡಲ್ ವೈತರ್ಣ ಒಟ್ಟಾಗಿ 46,192 ಮಿಲಿಯನ್ ಲೀಟರ್ ನೀರನ್ನು ಹೊಂದಿದ್ದು, ಅವುಗಳ ಒಟ್ಟು ಲೈವ್ ಶೇಖರಣಾ ಸಾಮರ್ಥ್ಯದ ಶೇಕಡಾ 6.65 ರಷ್ಟಿದೆ ಎಂದು ದತ್ತಾಂಶವು ತಿಳಿಸಿದೆ.

ಇವುಗಳಲ್ಲಿ, ವಿಹಾರ್ ತನ್ನ ಲೈವ್ ಸಾಮರ್ಥ್ಯದ ಶೇಕಡಾ 45.13 ರಷ್ಟು ಅತಿ ಹೆಚ್ಚು ಸಂಗ್ರಹವನ್ನು ಹೊಂದಿದ್ದು, ತುಳಸಿ (ಶೇಕಡಾ 24.26) ಮತ್ತು ಮೋದಕ್ ಸಾಗರ್ (ಶೇಕಡಾ 18.47) ನಂತರದ ಸ್ಥಾನಗಳಲ್ಲಿವೆ ಎಂದು ದತ್ತಾಂಶವು ತಿಳಿಸಿದೆ.

ಅಪರ್ ವೈತರ್ಣವು ತನ್ನ ಕೆಳ ಡ್ರಾಡೌನ್ ಮಟ್ಟಕ್ಕಿಂತ (ಎಲ್‌ಡಿಎಲ್) ಕೆಳಗೆ ಮುಂದುವರೆದಿದ್ದು, ಅದರ ಉಪಯುಕ್ತ ಲೈವ್ ಶೇಖರಣೆ ಶೂನ್ಯವಾಗಿದೆ ಎಂದು ದಾಖಲಿಸಲಾಗಿದೆ. ಆದಾಗ್ಯೂ, ಎಲ್‌ಡಿಎಲ್‌ಗಿಂತ ಕಡಿಮೆ ಇರುವ 11,974 ಮಿಲಿಯನ್ ಲೀಟರ್ ನೀರನ್ನು ಬಳಸಲಾಗುತ್ತಿದೆ ಎಂದು ಅದು ಹೇಳಿದೆ.

ಬೆಳಿಗ್ಗೆ 6 ಗಂಟೆಗೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ, ತುಳಸಿಯಲ್ಲಿ 179 ಮಿ.ಮೀ, ವಿಹಾರ್‌ನಲ್ಲಿ 112 ಮಿ.ಮೀ ಮತ್ತು ಮೋದಕ್ ಸಾಗರ್‌ನಲ್ಲಿ 38 ಮಿ.ಮೀ ಮಳೆಯಾಗಿದ್ದು, ಭಾಂಡಪ್ ಕಾಂಪ್ಲೆಕ್ಸ್‌ನಲ್ಲಿ 191 ಮಿ.ಮೀ ಮಳೆಯಾಗಿದೆ.

ಜೂನ್ 17 ರಂದು ಮುಂಬೈಗೆ ಕುಡಿಯುವ ನೀರು ಪೂರೈಸುವ ಏಳು ಜಲಾಶಯಗಳಲ್ಲಿ ನೀರಿನ ಸಂಗ್ರಹವು 1,44,918 ಮಿಲಿಯನ್ ಲೀಟರ್ ಅಥವಾ ಅವುಗಳ ಒಟ್ಟು ಉಪಯುಕ್ತ ಸಂಗ್ರಹ ಸಾಮರ್ಥ್ಯದ ಶೇಕಡಾ 10.01 ರಷ್ಟಿತ್ತು.

ನೈಋತ್ಯ ಮಾನ್ಸೂನ್ ವಿಳಂಬವಾಗುವುದರಿಂದ ಮತ್ತು ಈ ವರ್ಷದ ಕೊನೆಯಲ್ಲಿ ಬಲವಾದ ಎಲ್ ನಿನೊ ಪರಿಸ್ಥಿತಿಗಳ ಸಂಭವನೀಯ ಅಭಿವೃದ್ಧಿಯನ್ನು ಸೂಚಿಸುವ ಮುನ್ಸೂಚನೆಗಳಿಂದಾಗಿ ನಗರದ ನೀರು ಸರಬರಾಜಿನ ಬಗ್ಗೆ ಕಳವಳ ವ್ಯಕ್ತಪಡಿಸಲಾಗಿದೆ. ಆದಾಗ್ಯೂ, ಜಲಾಶಯಗಳು ಪ್ರಸ್ತುತ 2024 ರಲ್ಲಿ ಇದೇ ಸಮಯದಲ್ಲಿ ಶೇ. 5.43 ರಷ್ಟಿದ್ದ ನೀರನ್ನು ಹೊಂದಿವೆ.

ಕರ್ನಾಟಕ

ಸಂಪಾದಕರ ಮಾತು...

ಮಂಗಳವಾರ 30, ಜೂನ್ 2026

ಕರ್ನಾಟಕದ ಬಿಜೆಪಿಯಲ್ಲಿ ಸಾಕಷ್ಟು ಸಮಸ್ಯೆಯಿದೆ

ಕರ್ನಾಟಕದಲ್ಲಿ ವಿಧಾನ ಪರಿಷತ್ ಚುನಾವಣೆಯಲ್ಲಿ ವಿಪಕ್ಷ ಬಿಜೆಪಿ ಮತ್ತು ಜೆಡಿಎಸ್ ಎಂಎಲ್‌ಎಗಳ ಅಡ್ಡ ಮತದಾನ ರಾಜಕೀಯ ವಲಯದಲ್ಲಿ ಭಿನ್ನವಾದ ಚರ್ಚೆಗೆ ಕಾರಣವಾಗಿದೆ. ಜೆಡಿಎಸ್ ನಾಯಕ ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಅವರ ಪಕ್ಷದಿಂದ ಯಾರಲ್ಲ ಕಾಂಗ್ರೆಸ್ ಅಭ್ಯರ್ಥಿಗೆ ಅಡ್ಡ ಮತದಾನ ಮಾಡಿದ್ದಾರೆ ಎನ್ನುವುದು ತನಗೆ ಗೊತ್ತಿದೆ ಎಂದು ಬಹಿರಂಗವಾಗಿ ಹೇಳಿಕೆ ನೀಡಿ ಅಡ್ಡ ಮತದಾನ ವಿಚಾರವನ್ನು ಅಲ್ಲಿಗೇ ಬಿಟ್ಟು ಬಿಡುವ ನಿರ್ಧಾರಕ್ಕೆ ಬಹುತೇಕವಾಗಿ ಬಂದಿದ್ದಾರೆ. ಅಡ್ಡ ಮತದಾನ ಇದೇ ಮೊದಲು ನಡೆದಿರುವುದಲ್ಲ ಎಂದೂ ಹೇಳಿರುವ ಅವರು ರಾಜಕಾರಣದಲ್ಲಿ ಇದೆಲ್ಲ ನಡೆಯುತ್ತಲೇ ಇವೆ ಎಂದು ಕುಮಾರಸ್ವಾಮಿ ಒಪ್ಪಿಕೊಂಡಿದ್ದಾರೆ. ಜೆಡಿಎಸ್ ಪಕ್ಷದಿಂದ ಮೇಲ್ನೋಟಕ್ಕೆ ನಾಲ್ವರು ಎಂಎಲ್‌ಎಗಳು ಅಡ್ಡ ಮತದಾನ ಮಾಡಿದ್ದಾರೆ ಎನ್ನುವುದು ಕಂಡು ಬಂದಿದೆ. ರಾಜ್ಯದಲ್ಲಿ ಜೆಡಿಎಸ್ 18 ಎಂಎಲ್‌ಎಗಳನ್ನು ಹೊಂದಿದೆ. ಆದರೆ ವಿಧಾನ ಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಗೆ ಕೇವಲ 14 ಮತಗಳು ಮಾತ್ರ ಬಿದ್ದಿದ್ದವು. ಇದರಿಂದಾಗಿ ಉಳಿದ ನಾಲ್ವರು ಎಂಎಲ್‌ಎಗಳು ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕಿರಬೇಕು ಎನ್ನುವುದು ಖಚಿತವಾಗುತ್ತದೆ.

ಆದರೆ ಬಿಜೆಪಿಯಿಂದ ನಡೆದ ಅಡ್ಡ ಮತದಾನ ಬಗ್ಗೆ ಸತ್ಯ ಪತ್ತೆಗೆ ವಿಧಾನ ಪರಿಷತ್ ಸದಸ್ಯ ಸಿ. ಟಿ. ರವಿ ಅವರ ನೇತೃತ್ವದ ಮೂವರು ಸದಸ್ಯರ ಸತ್ಯ ಶೋಧನಾ ಸಮಿತಿಯನ್ನು ಪ್ರದೇಶ ಬಿಜೆಪಿ ಅಧ್ಯಕ್ಷ ವಿಜಯೇಂದ್ರ ರಚನೆ ಮಾಡಿದ್ದರು. ಸತ್ಯ ಶೋಧನಾ ಸಮಿತಿ ಶನಿವಾರ ಅದರ ಮಧ್ಯಂತರ ವರದಿಯನ್ನು ವಿಜಯೇಂದ್ರ ಅವರಿಗೆ ಸಲ್ಲಿಸಿದೆ. ವರದಿಯ ಅಂಶಗಳನ್ನು ವಿಜಯೇಂದ್ರ ಅವರಾಗಲಿ ಅಥವಾ ಸಮಿತಿ ಮುಖ್ಯಸ್ಥ ರವಿ ಅವರಾಗಲಿ ಬಹಿರಂಗ ಮಾಡಿಲ್ಲ. ಆದರೆ ರವಿ ಅವರು ಬಿಜೆಪಿಯಿಂದ ನಾಲ್ಕು ಮತಗಳ ಅಡ್ಡ ಮತದಾನ ನಡೆದಿದೆ ಎಂದು ಅಂದಾಜಿಸಲಾಗಿದೆ. ಅದರಲ್ಲಿ ಒಂದು ಮತ ಕುಲಗೆಟ್ಟಿದ್ದು ಮೂರು ಮತಗಳು ಕಾಂಗ್ರೆಸ್ ಅಭ್ಯರ್ಥಿಗೆ ಬಿದ್ದಿವೆ ಎಂದು ಹೇಳಿದ್ದಾರೆ. ಅಡ್ಡ ಮತದಾನ ಮಾಡಿದವರು ಎಂಬ ಶಂಕೆಯಲ್ಲಿ ಅಂತಹವರನ್ನು ಪ್ರಶ್ನಿಸಲಾಗಿದ್ದು ಆ ಕುರಿತ ವಿವರಗಳನ್ನೂ ಮಧ್ಯಂತರ ವರದಿಯಲ್ಲಿ ಉಲ್ಲೇಖ ಮಾಡಲಾಗಿದ್ದು ಯಾರ ಹೆಸರನ್ನೂ ಉಲ್ಲೇಖ ಮಾಡಿಲ್ಲ ಎಂದು ಹೇಳಿದ್ದಾರೆ.

ಬಿಜೆಪಿ ನಾಯಕ ರವಿ ಅವರ ಹೇಳಿಕೆಯಿಂದಾಗಿ ಜೆಡಿಎಸ್ ಪಕ್ಷದ 8 ಎಂಎಲ್‌ಎಗಳು ಕಾಂಗ್ರೆಸ್ ಅಭ್ಯರ್ಥಿ ಪರ ಅಡ್ಡ ಮತದಾನ ಮಾಡಿದ್ದಾರೆ ಎನ್ನುವ ಆರೋಪ ಮಾಡಿದಂತಾಗಿದೆ. ರವಿ ಅವರ ಹೇಳಿಕೆ ಬಗ್ಗೆ ಕೇಂದ್ರ ಸಚಿವ ಕುಮಾರಸ್ವಾಮಿ ಅವರಾಗಲಿ ಅಥವಾ ಜೆಡಿಎಸ್ ಪಕ್ಷದ ಇತರ ಯಾವುದೇ ನಾಯಕ ಉತ್ತರ ನೀಡಿಲ್ಲ. ಸಿ. ಟಿ. ರವಿ ಅವರ ಹೇಳಿಕೆಯನ್ನು ಗಮನಿಸಿದರೆ ಬಿಜೆಪಿಯ ನಾಲ್ವರು ಎಂಎಲ್‌ಎಗಳು ಜೆಡಿಎಸ್ ಅಭ್ಯರ್ಥಿಗೆ ಮತ ಹಾಕಿದ್ದಾರೆ. ಇದರಿಂದಾಗಿ ಜೆಡಿಎಸ್ ಪಕ್ಷದಿಂದ 10 ಎಂಎಲ್‌ಎಗಳು ಮಾತ್ರ ಜೆಡಿಎಸ್ ಅಭ್ಯರ್ಥಿಗೆ ಮತ ಹಾಕಿದ್ದು ಉಳಿದ 8 ಎಂಎಲ್‌ಎಗಳು ಕಾಂಗ್ರೆಸ್ ಅಭ್ಯರ್ಥಿಗೆ ಅಡ್ಡ ಮತದಾನ ಮಾಡಿದ್ದಾರೆ ಎಂದಾಗುತ್ತದೆ. ಕುಮಾರಸ್ವಾಮಿ ಮತ್ತು ಇತರ ಜೆಡಿಎಸ್ ನಾಯಕರ ಅಂದಾಜಿನಂತೆ ಪಕ್ಷದ ನಾಲ್ವರು ಎಂಎಲ್‌ಎಗಳು ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕಿದ್ದು, ಬಿಜೆಪಿಯ ಯಾರೂ ಜೆಡಿಎಸ್ ಅಭ್ಯರ್ಥಿಗೆ ಮತ ಹಾಕಿಲ್ಲ. ಆದರೆ ಅಡ್ಡ ಮತದಾನ ಕುರಿತ ಬಿಜೆಪಿಯ ಸತ್ಯ ಶೋಧನಾ ಸಮಿತಿ ಜೆಡಿಎಸ್ ಎಂಎಲ್‌ಎಗಳಲ್ಲಿ 8 ಮಂದಿ ಅಡ್ಡ ಮತದಾನ ಮಾಡಿದ್ದಾರೆ ಎಂದು ಶೋಧ ಮಾಡಿದೆ. ಸಮಿತಿ ಮುಖ್ಯಸ್ಥ ರವಿ ಅವರ ಹೇಳಿಕೆಯನ್ನು ಜೆಡಿಎಸ್ ನಾಯಕರು ಯಾವ ರೀತಿಯಲ್ಲಿ ಸ್ವೀಕಾರ ಮಾಡುತ್ತಾರೆ ಎನ್ನುವುದು ಕುತೂಹಲಕ್ಕೆ ಕಾರಣವಾಗಿದೆ.

ಬಿಜೆಪಿ ಎಂಎಲ್‌ಎಗಳ ಅಡ್ಡ ಮತದಾನ ಪಕ್ಷದ ಒಳಗೆ ಸಾಕಷ್ಟು ಗೊಂದಲ ಸೃಷ್ಟಿ ಮಾಡಿದೆ. ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ಆರ್. ಅಶೋಕ್ ಮತ್ತು ರಾಜ್ಯ ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಅವರಿಗೆ ಪಕ್ಷದ ಎಂಎಲ್‌ಎಗಳ ನಿಯಂತ್ರಣ ಇಲ್ಲ ಎಂಬ ಚರ್ಚೆ ಬಿಜೆಪಿಯೊಳಗೇ ಆರಂಭ ಆಗಿದೆ. ವಿಜಯೇಂದ್ರ ಅವರಂತೂ ಬಿಜೆಪಿ ಎಂಎಲ್‌ಎಗಳನ್ನೆಲ್ಲ ಧರ್ಮಸ್ಥಳಕ್ಕೆ ಕರೆದೊಯ್ದು ಮಂಜುನಾಥ ದೇವರ ಮುಂದೆ ಆಣೆ ಪ್ರಮಾಣ ಮಾಡಿಸಲು ತಯಾರಾಗಿದ್ದರು. ಬಿಜೆಪಿಯ ಎಲ್ಲ 63 ಎಂಎಲ್‌ಎಗಳೂ ಧರ್ಮಸ್ಥಳದಲ್ಲಿ ಬಿಜೆಪಿ ಪಕ್ಷದ ನಿರ್ದೇಶನದಂತೆಯೇ ವಿಧಾನ ಪರಿಷತ್ ಚುನಾವಣೆಯಲ್ಲಿ ಮತ ಹಾಕಿರುವುದಾಗಿ ಆಣೆ ಪ್ರಮಾಣ ಮಾಡಿದ್ದರೆ ಆಗ ಅಡ್ಡ ಮತದಾನ ಮಾಡಿದ 11 ಎಂಎಲ್‌ಎಗಳೂ ಜೆಡಿಎಸ್ ಪಕ್ಷದವರು ಎಂದಾಗುತಿತ್ತು.

ಆದರೆ ವಿಜಯೇಂದ್ರ ಅವರ ಎಂಎಲ್‌ಎಗಳ ಆಣೆ ಪ್ರಮಾಣದ ಹೇಳಿಕೆ ಬಗ್ಗೆ ಬಿಜೆಪಿ ನಾಯಕರಲ್ಲಿ ತೀವ್ರ ಅಸಮಾಧಾನ ಸೃಷ್ಟಿ ಮಾಡಿತ್ತು. ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ವಿಪಕ್ಷ ನೇತಾರ ಆರ್. ಅಶೋಕ್ ಅವರು ವಿಜಯೇಂದ್ರ ಅವರು ತನ್ನ ಜತೆಗೆ ಆ ಬಗ್ಗೆ ಚರ್ಚಿಸಿಲ್ಲ ಎಂದು ಹೇಳಿದ್ದರು. ಬಿಜೆಪಿ ನಾಯಕ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರು ಎಂಎಲ್‌ಎಗಳ ಆಣೆ ಪ್ರಮಾಣ ಸರಿಯಾದ ರಾಜಕಾರಣ ಅಲ್ಲ ಎಂದು ಹೇಳಿದ್ದರು. ಮಾಜಿ ಮುಖ್ಯಮಂತ್ರಿ ಹಿರಿಯ ಬಿಜೆಪಿ ನಾಯಕ ಸದಾನಂದ ಗೌಡ, ಸಿ. ಟಿ. ರವಿ ಸಹಿತ ಹಲವು ಬಿಜೆಪಿ ನಾಯಕರು ವಿಧಾನ ಪರಿಷತ್ ಮತ್ತು ರಾಜ್ಯಸಭಾ ಚುನಾವಣೆ ವೇಳೆ ಅಡ್ಡ ಮತದಾನ ನಡೆಯುತ್ತಿದ್ದು, ಇದು ಮೊದಲ ಘಟನೆ ಅಲ್ಲ. ಅಡ್ಡ ಮತದಾನ ಮಾಡಿದ್ದು ಪಕ್ಷ ದ್ರೋಹವಾಗಿದ್ದು ಅದಕ್ಕೆ ರಾಜಕೀಯ ತೀರ್ಮಾನ ಮುಖ್ಯವಾಗಿದೆ ಹೊರತು ಧರ್ಮಸ್ಥಳದಲ್ಲಿ ಆಣೆ ಪ್ರಮಾಣ ಅಲ್ಲ ಎಂದು ವಿಜಯೇಂದ್ರ ಅವರ ನಿಲುವನ್ನು ಆಕ್ಷೇಪಿಸಿದರು.

ಬಿಜೆಪಿಯ ಎಂಎಲ್‌ಎಗಳ ಅಡ್ಡ ಮತದಾನ ಬಿಜೆಪಿ ಕೇಂದ್ರ ನಾಯಕತ್ವವನ್ನೂ ತೀವ್ರ ಕಳವಳಕ್ಕೆ ಒಳ ಪಡಿಸಿತ್ತು. ದೇಶದ ರಾಜ್ಯಗಳಲ್ಲಿ ಬಿಜೆಪಿ ಪರವಾಗಿ ಅಡ್ಡ ಮತದಾನ ನಡೆಯುತ್ತಿರುವ ಕಾಲ ಘಟ್ಟದಲ್ಲಿ ಕರ್ನಾಟಕದಲ್ಲಿ ಬಿಜೆಪಿ ಎಂಎಲ್‌ಎಗಳೇ ಕಾಂಗ್ರೆಸ್ ಅಭ್ಯರ್ಥಿಗೆ ಅಡ್ಡ ಮತದಾನ ಮಾಡಿದ್ದು ಬಿಜೆಪಿ ನಾಯಕರಿಗೆ ಮುಖಭಂಗ ಆಗಿತ್ತು ಮತ್ತು ನಾಯಕರೆಲ್ಲ ಮುಜುಗರ ಪಡುವಂತೆ ಮಾಡಿತ್ತು. ಯಾಕೆ ಹೀಗಾಯಿತು ಎಂದು ಬಿಜೆಪಿ ಹೈಕಮಾಂಡ್ ತಕ್ಷಣವೇ ವಿವರ ನೀಡಿ ಎಂದು ಅಶೋಕ್ ಮತ್ತು ವಿಜಯೇಂದ್ರ ಅವರಿಗೆ ಎಚ್ಚರಿಕೆ ಸೂಚನೆ ನೀಡಿತ್ತು. ವಿಜಯೇಂದ್ರ ಅವರು ತಾನು ಬೆಳವಣಿಗೆ ಬಗ್ಗೆ ಕೇಂದ್ರ ಬಿಜೆಪಿ ನಾಯಕರಿಗೆ ವಿವರ ನೀಡಿರುವುದಾಗಿ ಆಗಲೇ ಹೇಳಿಕೆ ನೀಡಿದ್ದರು. ಬಿಜೆಪಿ ಹೈಕಮಾಂಡ್ ಈಗಾಗಲೇ ವಿಜಯೇಂದ್ರ ಮತ್ತು ಅಶೋಕ್ ಅವರನ್ನು ದಿಲ್ಲಿಗೆ ಕರೆಸಿಕೊಂಡು ವಿವರ ಪಡೆದಿದೆ. ಕೇಂದ್ರ ಬಿಜೆಪಿ ನಾಯಕರಿಗೆ ಅಡ್ಡ ಮತದಾನ ಮಾಡಿದವರು ಎಂಬ ಶಂಕಿತ ಎಂಎಲ್‌ಎಗಳ ಪಟ್ಟಿಯನ್ನು ನೀಡಿ ಅವರುಗಳ ವಿರುದ್ಧ ಶಿಸ್ತು ಕ್ರಮಕ್ಕೆ ಆಶೋಕ್ ಮತ್ತು ವಿಜಯೇಂದ್ರ ಕೋರಿದ್ದಾರೆ ಎನ್ನಲಾಗಿದೆ. ಅಡ್ಡ ಮತದಾನ ಮಾಡಿದವರಿಗೆ ಬಿಜೆಪಿ ಕೇಂದ್ರ ನಾಯಕರೇ ಪಾಠ ಕಲಿಸಲಿ ಎನ್ನುವುದು ವಿಜಯೇಂದ್ರ ಮತ್ತು ಅಶೋಕ್ ಅವರ ನಿಲುವಾಗಿರಬಹುದು.

ಈ ನಡುವೆ ವಿಜಯೇಂದ್ರ ಅವರನ್ನು ರಾಜ್ಯ ಬಿಜೆಪಿ ಅಧ್ಯಕ್ಷ ಪದದಿಂದ ಕಿತ್ತು ಹಾಕಬೇಕು ಎಂಬ ಆಡಿಯೋ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದ್ದು, ಮಾಜಿ ಮುಖ್ಯಮಂತ್ರಿ ಸದಾನಂದ ಗೌಡ ಅವರ ಆಡಿಯೋ ಅದೆಂದು ಬಿಜೆಪಿ ವಲಯದಲ್ಲಿ ಚರ್ಚೆ ನಡೆಯುತ್ತಿದೆ. ಆದರೆ ಸದಾನಂದ ಗೌಡ ಅವರು ತನಗೆ ಯಾವುದೇ ಆಡಿಯೋ ವಿಚಾರ ತಿಳಿದಿಲ್ಲ ಮತ್ತು ಅಂತಹ ಯಾವುದೇ ಆಡಿಯೋ ತನ್ನದಲ್ಲ ಎಂದು ಹೇಳಿದ್ದು, ತಾನು ಏನಿದ್ದರೂ ಬಿಜೆಪಿ ಕೇಂದ್ರ ನಾಯಕರಿಗೆ ಮಾತ್ರ ಸ್ಪಷ್ಟನೆ ನೀಡುತ್ತೇನೆ ಎಂದು ಹೇಳಿದ್ದಾರೆ. ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಬಳಿಕ ವಿಜಯೇಂದ್ರ ಅವರನ್ನು ರಾಜ್ಯ ಬಿಜೆಪಿ ಅಧ್ಯಕ್ಷ ಪದದಿಂದ ಮತ್ತು ಆಶೋಕ್ ಅವರನ್ನು ವಿರೋಧ ಪಕ್ಷದ ನಾಯಕತ್ವದಿಂದ ಬದಲಾವಣೆ ಮಾಡುವ ಬಗ್ಗೆ ಬಿಜೆಪಿ ಹೈಕಮಾಂಡ್ ಚಿಂತನೆ ಮಾಡಿದೆ ಎಂಬ ಸುದ್ದಿ ನಡುವೆ ಈಗ ವಿಜಯೇಂದ್ರ ಅವರನ್ನು ಅಧ್ಯಕ್ಷ ಸ್ಥಾನದಿಂದ ಕೈ ಬಿಡಬೇಕು ಎಂಬ ಆಡಿಯೋ ಬಿಜೆಪಿಯಲ್ಲಿ ಮತ್ತಷ್ಟು ಗೊಂದಲ ಸೃಷ್ಟಿ ಮಾಡಿದೆ. ಇದರಿಂದಾಗಿ ಬಿಜೆಪಿ ಕೇಂದ್ರ ನಾಯಕತ್ವಕ್ಕೆ ಈಗ ಅಡ್ಡ ಮತದಾನ ಮಾಡಿರುವ ಬಿಜೆಪಿ ಎಂಎಲ್‌ಎಗಳ ವಿರುದ್ಧ ಶಿಸ್ತು ಕ್ರಮದ ಜತೆಗೆ ವಿಜಯೇಂದ್ರ ಅವರನ್ನು ಬದಲಾವಣೆ ಮಾಡಬೇಕು ಎಂಬ ಆಡಿಯೋ ಮೂಲವನ್ನು ಶೋಧ ಮಾಡುವ ಸವಾಲು ಎದುರಾಗಿದೆ. ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮತ್ತು ಪ್ರಸಕ್ತ ಆಡಿಯೋ ಕರ್ನಾಟಕದ ಬಿಜೆಪಿಯಲ್ಲಿ ಸಾಕಷ್ಟು ಸಮಸ್ಯೆ ಇದೆ ಎನ್ನುವುದನ್ನು ಬೊಟ್ಟು ಮಾಡಿದೆ ಎನ್ನುವುದು ವಾಸ್ತವವಾಗಿದೆ.

ಮುಖ್ಯಮಂತ್ರಿಯಿಂದ ಮಾತುಕತೆಗೆ ಆಹ್ವಾನ; ರೋಹಿತ್ ಪವಾರ್ ನೇತೃತ್ವದ ಕೃಷಿಸಾಲ ಮನ್ನಾ ಪ್ರತಿಭಟನೆ ಸ್ಥಗಿತ



ಛತ್ರಪತಿ ಸಂಭಾಜಿನಗರ, ಜೂ.29 - ಮಹಾರಾಷ್ಟ್ರ ಸಚಿವ ಗಿರೀಶ್ ಮಹಾಜನ್ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಜೊತೆ ಮಾತುಕತೆಗಾಗಿ ಎನ್‌ಸಿಪಿ(ಎಸ್‌ಪಿ) ಪಕ್ಷದ ನಾಯಕರನ್ನು ಆಹ್ವಾನಿಸಿದ ಬಳಿಕ ಎನ್‌ಸಿಪಿ(ಎಸ್‌ಪಿ) ಛತ್ರಪತಿ ಸಂಭಾಜಿನಗರದಲ್ಲಿ ಸೋಮವಾರ ತನ್ನ ಆಂದೋಲನವನ್ನು ಸ್ಥಗಿತಗೊಳಿಸಿದೆ.

ಕೇಂಬ್ರಿಡ್ಜ್ ಚೌಕ್‌ನಲ್ಲಿ ಎನ್‌ಸಿಪಿ (ಎಸ್‌ಪಿ) ಶಾಸಕ ರೋಹಿತ್ ಪವಾರ್ ನೇತೃತ್ವದಲ್ಲಿ ಸುಮಾರು ಒಂದು ಗಂಟೆ ಕಾಲ ಪ್ರತಿಭಟನೆ ನಡೆಯಿತು, ಆದರೆ ಮಂಗಳವಾರ ಬೆಳಿಗ್ಗೆ 11.30 ಕ್ಕೆ ವಿಧಾನ ಭವನದಲ್ಲಿ ಸಭೆ ನಡೆಸುವ ಭರವಸೆ ನೀಡಿದ ಬಳಿಕ ಅದನ್ನು ಹಿಂತೆಗೆದುಕೊಳ್ಳಲಾಯಿತು. ಹಿಂದಿನ ದಿನ ಪವಾರ್ ನೀಡಿದ ಹೇಳಿಕೆಯಲ್ಲಿ ,ಸರಕಾರವು ತನ್ನ ಹೊಸ ಕೃಷಿ ಸಾಲ ಮನ್ನಾ ಯೋಜನೆಯ ಕುರಿತು ಭರವಸೆ ನೀಡಿದ ಚರ್ಚೆಗಳು ಕಾರ್ಯರೂಪಕ್ಕೆ ಬರಲು ಬಿಡದೆ ನಾನು ಆರಂಭಿಸಿದ ಪ್ರತಿಭಟನೆಯನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದ್ದರಲ್ಲದೆ, 'ಜೈಲ್ ಭರೋ' ಚಳುವಳಿಯನ್ನು ಆರಂಭಿಸುವುದಾಗಿ ಬೆದರಿಕೆ ಹಾಕಿದ್ದರು.

ಹೊಟ್ಟೆಯಲ್ಲಿ ಒಂದು ವೇಳೆ ಅಲ್ಸರ್ ಸಮಸ್ಯೆ ಉಂಟಾದರೆ ಅಥವಾ ಜೀರ್ಣಾಂಗ ವ್ಯವಸ್ಥೆಯ ಅವ್ಯವಸ್ಥೆಯಿಂದ ಮಲಬದ್ಧತೆ ಸಮಸ್ಯೆ ಉಂಟಾದರೆ ಆ ಸಂದರ್ಭದಲ್ಲಿ ನೆಲ್ಲಿಕಾಯಿ ಪುಡಿಯನ್ನು ಸೇವನೆ ಮಾಡುವ ಅಭ್ಯಾಸ ಇಟ್ಟುಕೊಂಡರೆ ತುಂಬಾ ಒಳ್ಳೆಯದು. ಒಂದು ಲೋಟ ಉಗುರು ಬೆಚ್ಚಗಿನ ನೀರಿನಲ್ಲಿ 1 ಟೀ ಚಮಚ ನೆಲ್ಲಿಕಾಯಿ ಪುಡಿಯನ್ನು ಮಿಶ್ರಣ ಮಾಡಿ ಖಾಲಿ ಹೊಟ್ಟೆಯಲ್ಲಿ ಸೇವನೆ ಮಾಡಿದರೆ ಹೊಟ್ಟೆಯ ಭಾಗದ ಆಮ್ಲದ ಪ್ರಭಾವವನ್ನು ಕಡಿಮೆ ಮಾಡುವ ಹಾಗೆ ಆಗುತ್ತದೆ.

ಕೂದಲು ಹಾಗೂ ತ್ವಚೆಯ ಆರೋಗ್ಯಕ್ಕೆ ಸಹಕಾರಿ

ಇಂದು ಬಹುತೇಕ ಜನರಿಗೆ ತಲೆ ಕೂದಲು ಉದುರುವಿಕೆ ಮತ್ತು ಮುಖದ ಮೇಲೆ ಮೊಡವೆಗಳ ಸಮಸ್ಯೆ ಹೆಚ್ಚಾಗಿ ಕಂಡು ಬರುತ್ತದೆ. ಇದಕ್ಕೆ ಬಹಳ ಮುಖ್ಯ ಕಾರಣ ಎಂದರೆ ಅದು ಮಾನಸಿಕ ಒತ್ತಡ ಇರಬಹುದು ಅಥವಾ ಬೇರೆ ಯಾವುದಾದರೂ ದೈಹಿಕ ಆರೋಗ್ಯ ಸಮಸ್ಯೆಗಳು ಕಾರಣ ಎಂದು ಹೇಳಬಹುದು. ಇಂತಹ ಸಮಸ್ಯೆಯಲ್ಲಿ ಇರುವವರು ಪ್ರತಿದಿನ ಕಾಯಿ ಪುಡಿಯನ್ನು 1 ಟೀ ಚಮಚ ತೆಗೆದುಕೊಂಡು ಬೆಳಗ್ಗೆ ಹಾಗೂ ಸಂಜೆ ಎರಡು ಬಾರಿ ಊಟ ಆದ ಮೇಲೆ ಉಗುರು ಬೆಚ್ಚಗಿನ ನೀರಿನಲ್ಲಿ ಮಿಶ್ರಣ ಮಾಡಿ ಕುಡಿಯುವ ಅಭ್ಯಾಸ ಮಾಡಿಕೊಳ್ಳಬೇಕು.

ಗಮನಿಸಬೇಕಾದ ಅಂಶ

ನೆಲ್ಲಿಕಾಯಿಯ ಪುಡಿ ನಿಮ್ಮ ತ್ವಚೆಯ ಉರಿಯೂತವನ್ನು ಕಡಿಮೆ ಮಾಡಿ ಅದರ ಮೇಲೆ ಕಂಡು ಬರುವ ಮೊಡವೆ ಕಲೆಗಳನ್ನು ನಿವಾರಣೆ ಮಾಡುತ್ತದೆ. ಬೇಕೆಂದರೆ ನೀವು ಸೇವನೆ ಮಾಡುವ ಹಣ್ಣಿನ ರಸಗಳಲ್ಲಿ ನೆಲ್ಲಿಕಾಯಿ ಪುಡಿಯನ್ನು ಮಿಶ್ರಣ ಮಾಡಿ ಸೇವನೆ ಮಾಡಬಹುದು ಮತ್ತು ಅತ್ಯುತ್ತಮ ಪ್ರಯೋಜನಗಳನ್ನು ಪಡೆದುಕೊಳ್ಳಬಹುದು.

ಮಳೆಗಾಲದಲ್ಲಿ ನಿಮ್ಮ ಕೂದಲಿನ ಆರೈಕೆ ಮಾಡುವುದು ಹೇಗೆ ?

ಮಾನ್ಸೂನ್ ಅಥವಾ ಮಳೆಗಾಲದಲ್ಲಿ ಕೂದಲಿನ ಸಮಸ್ಯೆಗಳು ಹೆಚ್ಚಾಗಿರುತ್ತವೆ. ಕೂದಲು ಮತ್ತು ನೆತ್ತಿ ಈ ಸಮಯದಲ್ಲಿ ಸ್ವಲ್ಪ ಹಾಳಾಗುವ ಸಂಭವ ಹೆಚ್ಚು, ತುರಿಕೆ ನೆತ್ತಿ, ಕೂದಲು ಹಾನಿ ಮತ್ತು ಅನೇಕ ತೊಂದರೆಗಳು ನಿಮ್ಮ ನೆತ್ತಿಯನ್ನು ಹಾಳುಗೆಡವುತ್ತವೆ. ಇದು ನಿಮ್ಮ ಕೂದಲಿನ ಮೇಲೆ ಹಾನಿಯನ್ನುಂಟುಮಾಡುತ್ತದೆ. ಈ ರೀತಿಯ ಸಮಸ್ಯೆಗಳು ಎದುರಾದಾಗ ನಮ್ಮ ಸಹಾಯಕ್ಕೆ ಬರುವುದು ಅನೇಕ ಮನೆಮದ್ದುಗಳು.ಕೆಲವು ಉತ್ತಮ ಮನೆಮದ್ದುಗಳು ನಿಮ್ಮ ಹಾಳಾಗಿರುವ ಕೂದಲನ್ನು ಉತ್ತಮವಾಗಿ ಇರಿಸಲು ಕಾರ್ಯನಿರ್ವಹಿಸುತ್ತವೆ. ಕೆಲವೊಂದು ಸಮಸ್ಯೆಗಳು ಮಾನ್ಸೂನ್ ಸಮಯದಲ್ಲಿ ಹೆಚ್ಚಾಗಿರುತ್ತವೆ. ಸೆಬಮ್ ಎಂದು ಕರೆಯಲ್ಪಡುವ ದೇಹದ ಸೆಬಾಸಿಯಸ್ ಗ್ರಂಥಿಗಳಿಂದ ಬಡ್ಡಿ ಕಣಮ್ಮ ಉತ್ಪತ್ತಿಯಾಗುವ ಎಣ್ಣೆಯುಕ್ತ ವಸ್ತುವು ನೆತ್ತಿಯ ಮೇಲೆ ಬಹಳ ಸುಲಭವಾಗಿ ಸಂಗ್ರಹವಾಗುತ್ತದೆ. ವಿಶೇಷವಾಗಿ ಇದನ್ನು ಆಗಾಗ್ಗೆ ಮತ್ತು ಮಾನ್ಸೂನ್ ಸಮಯದಲ್ಲಿ ಉತ್ತಮವಾಗಿ ಸ್ವಚ್ಛಗೊಳಿಸದಿದ್ದರೆ ನಿಮ್ಮ ಕೂದಲು ಹಾಳಾಗುತ್ತದೆ.ಸೂಕ್ಷ್ಮಾಣು ಜೀವಿಗಳು ಸಾಮಾನ್ಯವಾಗಿ ಮೇದೋಗ್ರಂಥಿಗಳ ಸಂತಾನೋತ್ಪತ್ತಿಗಾಗಿ ಆಹಾರವನ್ನು ನೀಡುತ್ತದೆ ಮತ್ತು ಇದು ಮಳೆಗಾಲದಲ್ಲಿ ತಲೆಹೊಟ್ಟಿಗೆ ಕಾರಣವಾಗುತ್ತದೆ.

ಕೂದಲು ಉದುರುವುದು

ಅತಿಯಾದ ಆದ್ರತೆಯು ಬೆವರಿನೊಂದಿಗೆ ನೆತ್ತಿ ಮತ್ತು ಕೂದಲಿನ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಇದು ಒಣಗಲು ಮತ್ತು ಕೂದಲು ಉದುರಲು ಕಾರಣವಾಗುತ್ತದೆ. ಮಾನ್ಸೂನ್ ಸಮಯದಲ್ಲಿ ಕೂದಲಿನ ತೊಂದರೆಗಳು ಹೆಚ್ಚಾಗುತ್ತವೆ. ಕೊನೆಗೆ ನೀವು ತೀವ್ರವಾದ ಕೂದಲು ಉದುರುವಿಕೆಯನ್ನು ಎದುರಿಸಬೇಕಾಗುತ್ತದೆ. ಹವಾಮಾನ ಮತ್ತು ಹೆಚ್ಚಿನ ಆದ್ರತೆಯ ಬದಲಾವಣೆಯು ಇನ್ನಷ್ಟು ಕೂದಲ ಉದುರುವಿಕೆಗೆ ಕಾರಣವಾಗುತ್ತದೆ. ಹೆಚ್ಚಿದ ಧುಳೂ, ಮಾಲಿನ್ಯ ಮತ್ತು ಕೊಳಕು ಕೂಡ ಕೂದಲು ಉದುರುವಿಕೆಗೆ ಕಾರಣವಾಗುತ್ತದೆ. ಮಳೆಗಾಲದಲ್ಲಿ ತಲೆಹೊಟ್ಟು ಮತ್ತು ತುರಿಕೆ ನೆತ್ತಿಯನ್ನು ಕೆಟ್ಟದಾಗಿ ಮಾಡುತ್ತದೆ.



ತಲೆಹೊಟ್ಟು

ಮಲಸೇಜಿಯಾ ಒಂದು ಬಗೆಯ ಶಿಲೀಂದ್ರವಾಗಿದ್ದು, ಇದು ಸಾಮಾನ್ಯವಾಗಿ ತಲೆಹೊಟ್ಟಿಗೆ ಸಂಬಂಧಿಸಿದೆ. ಇದು ಸಾಮಾನ್ಯವಾಗಿ ಎಲ್ಲರ ನೆತ್ತಿಯ ಮೇಲೆ ಸದಾ ಇರುತ್ತದೆ. ಇದು ನೆತ್ತಿ ಮತ್ತು ಕೂದಲಿಗೆ ಆಕ್ಸಿಡೇಟಿವ್ ಒತ್ತಡವನ್ನು ಉಂಟು ಮಾಡುತ್ತದೆ. ಮಾನ್ಸೂನ್ ಅಥವಾ ಮಳೆಗಾಲ ಮಲಸೇಜಿಯಾಕ್ಕೇ ಸೂಕ್ತವಾದ ಸಂತಾನೋತ್ಪತ್ತಿಯನ್ನು ಒದಗಿಸುತ್ತದೆ. ಈ ಸಮಯದಲ್ಲಿ ಇದು ನೆತ್ತಿಯ ತುರಿಕೆಯನ್ನು ಉಂಟುಮಾಡುತ್ತದೆ. ನೆತ್ತಿಯ ತುರಿಕೆ ಉಂಟಾದರೆ ಸಾಮಾನ್ಯವಾಗಿ ಇದು ತಲೆಹೊಟ್ಟನ್ನು ಉಂಟುಮಾಡುತ್ತದೆ.ತಲೆಹೊಟ್ಟು ಉಂಟಾದರೆ ಇದು ಸಾಮಾನ್ಯವಾಗಿ ಕೂದಲು ಉದುರುವಿಕೆಗೆ ಕಾರಣವಾಗುತ್ತದೆ. ಮಳೆಗಾಲದಲ್ಲಿ ತಲೆಹೊಟ್ಟು ಉಲ್ಬಣಗೊಳ್ಳುತ್ತದೆ.ಏಕೆಂದರೆ ಇದು ತೇವಾಂಶವುಳ್ಳ ವಾತಾವರಣದಲ್ಲಿ ಬೆಳೆಯಲು ಕಾರಣವಾಗುವ ಶಿಲೀಂದ್ರವಾಗಿದೆ.

ನೆತ್ತಿಯ ಸೋಂಕು ಮತ್ತು ತುರಿಕೆ

ಮಳೆಗಾಲದಲ್ಲಿ ನೆತ್ತಿಯ ಮೇಲೆ ಬ್ಯಾಕ್ಟೀರಿಯ ಮತ್ತು ಶಿಲೀಂದ್ರಗಳ ಸೋಂಕು ಸಹ ಸಾಮಾನ್ಯವಾಗಿದೆ. ಕಲುಷಿತ ಮಳೆ ನೀರು ಮತ್ತು ಬೆಚ್ಚಗಿನ ಆದ್ರ ಪರಿಸ್ಥಿತಿಗಳಿಗೆ ಒಡ್ಡಿಕೊಳ್ಳುವುದು ನೆತ್ತಿಯ ಮೇಲೆ ಬ್ಯಾಕ್ಟೀರಿಯಾ ಅಥವಾ ಶಿಲೀಂದ್ರದ ಬೆಳವಣಿಗೆಯನ್ನು ಉತ್ತೇಜಿಸುತ್ತದೆ. ಈ ರೀತಿಯ ಪರಿಸ್ಥಿತಿಗಳು ತೀವ್ರವಾದ ತುರಿಕೆ ಮತ್ತು ಅತಿಹೆಚ್ಚಿನ ತಲೆಹೊಟ್ಟನ್ನು ಅಭಿವೃದ್ಧಿಪಡಿಸಬಹುದು. ಇಂತಹ ಸಮಯದಲ್ಲಿ ನೀವು ತಲೆ ಕೆರೆದುಕೊಳ್ಳುವ ಪರಿಸ್ಥಿತಿ ಎದುರಾಗಬಹುದು. ಆದರೆ ಈ ರೀತಿ ತಲೆ ಕೆರೆದುಕೊಳ್ಳುವುದು ನಿಮ್ಮ ಕೂದಲಿನ ಮೇಲೆ ಆಳವಾದ ಪರಿಣಾಮ ಉಂಟುಮಾಡುತ್ತದೆ.



ನಿಮ್ಮ ಕೂದಲಿಗೆ ಕೆಲವು ಸರಳ ಮನೆಮದ್ದುಗಳು

ಮೇದೋಗ್ರಂಥಿಗಳ ಸ್ರಾವ ಮತ್ತು ಮಲಸೇಜಿಯಾ ಬೆಳವಣಿಗೆಯನ್ನು ತೊಡೆದುಹಾಕಲು ಉತ್ತಮವಾದ ಶಾಂಪುಗಳನ್ನೂ ಬಳಸಿ ನಿಯಮಿತವಾಗಿ ಕೂದಲು ಮತ್ತು ನೆತ್ತಿಯನ್ನು ತೊಳೆಯಿರಿ. ಸತು ಪಿರಿಥಿಯೋನ್ ಹೊಂದಿರುವ ಉತ್ತಮ ತಲೆಹೊಟ್ಟು ನಿವಾರಿಸುವ ಶಾಂಪೂ ಬಳಸಿ. ಕೂದಲಿನಿಂದ ಮಾಲಿನ್ಯಕಾರಕಗಳನ್ನು ತೆಗೆದುಹಾ-ಕುವ ಸೌಮ್ಯವಾದ ಶಾಂಪೂ ಬಳಸಿ. ತೇವಾಂಶವನ್ನು ನಿಮ್ಮ ಕೂದಲನ್ನು ಉಜ್ವಲವಾಗಿಸೂತ್ತದೆ ಮತ್ತು ಉತ್ತಮ ಕಂಡೀಶರ್ನ ಕೂದಲನ್ನು ಉತ್ತಮವಾಗಿ ಇರಿಸುತ್ತದೆ. ಇದು ರಕ್ಷಣಾತ್ಮಕ ಪದರವನ್ನು ಉಂಟುಮಾಡುತ್ತದೆ. ಇದರ ಜೊತೆಗೆ ಮಳೆ ನೀರಿನಿಂದ ಹಾನಿಯಾಗುವ ಅಪಾಯವನ್ನು ಕಡಿಮೆ ಮಾಡುತ್ತದೆ. ಮಳೆಗಾಲದಲ್ಲಿ ಕೂದಲನ್ನು ಎಣ್ಣೆ ಮತ್ತು ಆದ್ರಕಗೊಳಿಸುವುದು ಅವಶ್ಯಕ. ಕೂದಲು ಜಿಡ್ಡಿನ ಅಥವಾ ಜಿಗುಟಾದ ಅನುಭವವಾಗಬಹುದು. ಆದರೆ ನಿಮ್ಮ ಕೂದಲನ್ನು ತೊಳೆಯುವ ಮೊದಲು ಕನಿಷ್ಠ 20 ನಿಮಿಷಗಳ ಮೊದಲು ಎಣ್ಣೆ ಮಸಾಜ್ ಆಯ್ಕೆಮಾಡಿಕೊಳ್ಳಿ. ಕೆಲವು ಹನಿ ತೆಂಗಿನ ಎಣ್ಣೆ ಅಥವಾ ಲ್ಯಾವೆಂಡರ್ಸ್ ಎಣ್ಣೆ, ಗುಲಾಬಿ ಮುಂತಾದ ಸಾರಭೂತ ತೈಲಗಳನ್ನೂ ಬಳಸಿ. ಕೂದಲನ್ನು ಸರಿಯಾಗಿ ಮತ್ತು ತಕ್ಷಣ ಒಣಗಿಸುವುದು ಮುಖ್ಯ.

ಮಳೆಗಾಲದಲ್ಲಿ ಕೂದಲು ಉದುರುವ ಸಮಸ್ಯೆ ಹೆಚ್ಚು

ಉತ್ತಮವಾದ, ಆರೋಗ್ಯವಂತ ಮತ್ತು ಸುಂದರ ಕೂದಲನ್ನು ಪಡೆಯಬೇಕೆಂಬುದು ಪ್ರತಿಯೊಬ್ಬರ ಆಸೆಯಾಗಿರುತ್ತದೆ. ಆದರೆ ಕೆಲವೊಮ್ಮೆ ಇದು ಸಾಧ್ಯವಾಗುವುದಿಲ್ಲ, ಹವಾಮಾನದ ಬದಲಾವಣೆಗಳಿಗೆ ಅನುಗುಣವಾಗಿ ನಮ್ಮ ಕೂದಲಿನ ಬೆಳವಣಿಗೆಯಲ್ಲೂ ಸಹ ಹಲವಾರು ಬದಲಾವಣೆಗಳಾಗುತ್ತವೆ.ಹವಾಮಾನದ ಬದಲಾವಣೆಯಂತೆ ನಮ್ಮ ಕೂದಲಿನ ಬೆಳವಣಿಗೆಯೂ ಸಹ ಬದಲಾಗುತ್ತದೆ. ಆದರಲ್ಲೂ ಮಳೆಗಾಲದಲ್ಲಿ ನಮ್ಮ ಕೂದಲು ಉದುರುವ ಸಮಸ್ಯೆ ಕೊಂಚ ಹೆಚ್ಚಾಗಿಯೇ ಇರುತ್ತದೆ. ಇಂತಹ ಸಮಯದಲ್ಲಿ ಕೆಲವು ಮನೆಮದ್ದುಗಳನ್ನು ಪ್ರಯತ್ನಿಸುವ ಮೂಲಕ ನಮ್ಮ ಕೂದಲು ಉದುರುವ ಸಮಸ್ಯೆಯನ್ನು ನಿಯಂತ್ರಣಕ್ಕೆ ತರಬಹುದು. ಕೂದಲಿಗೆ ನಿಯಮಿತವಾಗಿ ಎಣ್ಣೆ ಹಾಕಿ ಮಸಾಜ್ ಮಾಡುವುದು, ಉತ್ತಮವಾದ ಬಾಚಣಿಕೆಯ ಮೂಲಕ ಕೂದಲನ್ನು ಬಾಚುವುದು, ಹಾನಿಕಾರಕ ರಾಸಾಯನಿಕ ಪದಾರ್ಥಗಳನ್ನು ಬಳಸದೆ ಉತ್ತಮ ನೈಸರ್ಗಿಕ ಶಾಂಪೂವನ್ನು ಬಳಸಿ ಕೂದಲನ್ನು ತೊಳೆಯುವುದು ಮತ್ತು ವಾರಕ್ಕೊಮ್ಮೆಯಾದರೂ ಕೂದಲಿಗೆ ಹೇರ್ ಪ್ಯಾಕ್ ಮಾಡಿಕೊಳ್ಳುವುದು ಉತ್ತಮ. ಎಲ್ಲಾ ಕ್ರಮಗಳನ್ನು ನೀವು ಚಾಚುತಪ್ಪದೇ ಅನುಸರಿಸಿದರೆ ನಿಮ್ಮ ಕೂದಲು ಉತ್ತಮವಾಗಿ ಇರುತ್ತದೆ. ಆದರೆ ನೈಸರ್ಗಿಕ ರೀತಿಯ ಹೇರ್ ಪ್ಯಾಕ್‌ಗಳನ್ನು ಬಳಸುವುದು ನಿಮ್ಮ ಕೂದಲು ಯಾವ ಪ್ರಮಾಣದಲ್ಲಿ ಉದುರುತ್ತಿದೆ ಎಂಬುದನ್ನು ಅವಲಂಬಿಸಿರುತ್ತದೆ. ಒಂದು ವೇಳೆ ನಿಮ್ಮ ಕೂದಲು ಉದುರುವ ಸಮಸ್ಯೆ ಹೆಚ್ಚಿನ ಪ್ರಮಾಣದಲ್ಲಿದ್ದರೆ ನೀವು ವೈದ್ಯರನ್ನು ಭೇಟಿ ಮಾಡಿ ಅವರ ಸಲಹೆಯನ್ನು ಪಡೆದುಕೊಳ್ಳುವುದು

114 ವರ್ಷಗಳ ಸೇವೆಯ ಸಂಭ್ರಮದಲ್ಲಿ ದೇರಳಕಟ್ಟೆಯಲ್ಲಿ ಎಂಸಿಸಿ ಬ್ಯಾಂಕ್‌ನ 22ನೇ ಶಾಖೆ ಉದ್ಘಾಟನೆ

ಜನರ ವಿಶ್ವಾಸ ಮತ್ತು ಸಹಕಾರದಿಂದ ಎಂಸಿಸಿ ಬ್ಯಾಂಕ್‌ನ ಈ ಶಾಖೆ ಯಶಸ್ಸು ಕಾಣಲಿ - ಅನಿಲ್ ಲೋಬೊ





ದೇರಳಕಟ್ಟೆ, ಜೂ.29- 1912ರಲ್ಲಿ ಸ್ಥಾಪನೆಯಾಗಿ 114 ವರ್ಷಗಳ ಯಶಸ್ವಿ ಸೇವೆಯನ್ನು ಪೂರೈಸಿರುವ ಎಂಸಿಸಿ ಬ್ಯಾಂಕ್ ಲಿಮಿಟೆಡ್ ತನ್ನ 22ನೇ ಶಾಖೆ ಹಾಗೂ ನೂತನ ಎಟಿಎಂ ಅನ್ನು ಭಾನುವಾರ, ಜೂನ್ 28ರಂದು ದೇರಳಕಟ್ಟೆಯ ಫಾ. ಮುಲ್ಲರ್ ಕಾಂಪ್ಲೆಕ್ಸ್‌ನ ನೆಲ ಮಹಡಿಯಲ್ಲಿ ಉದ್ಘಾಟಿಸಿತು.

ನೂತನ ಶಾಖೆಯನ್ನು ಎಂಸಿಸಿ ಬ್ಯಾಂಕ್‌ನ ಅಧ್ಯಕ್ಷರಾದ ಸಹಕಾರ ರತ್ನ ಅನಿಲ್ ಲೋಬೊ ಉದ್ಘಾಟಿಸಿದರು. ದೇರಳಕಟ್ಟೆಯ ಫಾ. ಮುಲ್ಲರ್ ಹೋಮಿಯೋಪಥಿ ವೈದ್ಯಕೀಯ ಕಾಲೇಜಿನ ಆಡಳಿತಾಧಿಕಾರಿ ವಂ. ಫಾ. ನಿಲೇಶ್ ಕ್ರಾಸ್ತಾ ಅವರು ಎಟಿಎಂ ಅನ್ನು ಉದ್ಘಾಟಿಸಿ ಚಾಲನೆ ನೀಡಿದರು. ಉರ್ಸುಲಿನ್ ಫ್ರಾನ್ಸಿಸ್ಕನ್ ಸಿಸ್ಟರ್ಸ್‌ನ ಸುಪೀರಿಯರ್ ಜನರಲ್ ವಂ. ಸಿ. ಮಿಲ್ಲಿ ಫೆರ್ನಾಂಡಿಸ್ ಅವರು ಸೇಫ್ ರೂಂ ಅನ್ನು ಉದ್ಘಾಟಿಸಿದರೆ, ಫಾ. ಮುಲ್ಲರ್ ಹೋಮಿಯೋಪಥಿಕ್ ಫಾರ್ಮಾಸ್ಯುಟಿಕಲ್ ವಿಭಾಗದ (ಎಫ್‌ಎಂಎಚ್‌ಪಿಡಿ) ಆಡಳಿತಾಧಿಕಾರಿ ವಂ. ಫಾ. ನೆಲ್ಸನ್ ದೀರಜ್ ಪಾಯ್ಸ್ ಅವರು ಬ್ಯಾಂಕಿನ ಇ-ಸ್ಟಾಂಪ್ ಸೇವೆಗೆ ಚಾಲನೆ ನೀಡಿದರು. ಪಾನೀರ್‌ನ ಅವರ್‌ಲೇಡಿ ಆಫ್ ಮರ್ಸಿ ಚರ್ಚ್‌ನ ಧರ್ಮಗುರು ವಂ. ಫಾ. ವಿಕ್ಟರ್‌ಡಿ'ಮೆಲ್ಲೊ ಅವರು ನೂತನ ಶಾಖೆಗೆ ಆಶೀರ್ವಚನ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅನಿಲ್ ಲೋಬೊ ವಹಿಸಿದ್ದರು. ಮುಖ್ಯ ಅತಿಥಿಯಾಗಿ ವಂ. ಸಿ. ಮಿಲ್ಲಿ ಫೆರ್ನಾಂಡಿಸ್ ಭಾಗವಹಿಸಿದ್ದರು. ಗೌರವ ಅತಿಥಿಗಳಾಗಿ ರೆವ. ಫಾ. ನಿಲೇಶ್ ಕ್ರಾಸ್ತಾ ಹಾಗೂ ಕೋಟೆಕಾರ್‌ಗ್ರಾಮ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ದಿವ್ಯಾ ಸತೀಶ್ ಶೆಟ್ಟಿ ಉಪಸ್ಥಿತರಿದ್ದರು. ಉಪಾಧ್ಯಕ್ಷ ಜೆರಾಲ್ಡ್ ಜೂಡ್ ಡಿ'ಸಿಲ್ವಾ ಹಾಗೂ ಮಹಾಪ್ರಬಂಧಕ ಸುನಿಲ್ ಮೆನೇಜಸ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅಧ್ಯಕ್ಷೀಯ ಭಾಷಣದಲ್ಲಿ ಅನಿಲ್ ಲೋಬೊ ಅವರು ಸಹಕಾರ ಬ್ಯಾಂಕಿಂಗ್ ಮತ್ತು ಗ್ರಾಹಕ ಸೇವೆಯತ್ತ ಎಂಸಿಸಿ ಬ್ಯಾಂಕ್‌ನ ಬದ್ಧತೆಯನ್ನು ಪುನರುಚ್ಚರಿಸಿದರು. ದೇರಳಕಟ್ಟೆ ಜನತೆ ನೀಡಿದ ಆತ್ಮೀಯ ಸ್ವಾಗತಕ್ಕೆ ಕೃತಜ್ಞತೆ ಸಲ್ಲಿಸಿದ ಅವರು, ಜನರ ವಿಶ್ವಾಸ ಮತ್ತು ಸಹಕಾರದಿಂದ ಈ ಶಾಖೆ ಯಶಸ್ಸು ಕಾಣಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಆರ್‌ಬಿಐ ಮಾರ್ಗಸೂಚಿಗಳ ಅನುಸಾರ ಕಾರ್ಯನಿರ್ವಹಿಸುತ್ತಿರುವ ಎಂಸಿಸಿ ಬ್ಯಾಂಕ್ ಗ್ರಾಹಕರ ಅಗತ್ಯಗಳಿಗೆ ಆದ್ಯತೆ ನೀಡುವ ಮೂಲಕ ಉತ್ತಮ ಹೆಸರು ಗಳಿಸಿದೆ ಎಂದು ಅವರು ಹೇಳಿದರು. ಅರ್ಹ ಠೇವಣಿಗಳೆಲ್ಲವೂ ಡಿಐಸಿಜಿಸಿ (ಡಿಐಸಿಜಿಸಿ) ಮೂಲಕ ವಿಮಾ ರಕ್ಷಣೆಯಲ್ಲಿರುವುದರಿಂದ ಗ್ರಾಹಕರು ಆತಂಕವಿಲ್ಲದೆ ಬ್ಯಾಂಕಿನಲ್ಲಿ ವ್ಯವಹರಿಸಬಹುದು ಎಂದು ತಿಳಿಸಿದರು.

ಪ್ರಸ್ತುತ ಆಡಳಿತದ ಅವಧಿಯಲ್ಲಿ ಐದು ಹೊಸ ಶಾಖೆಗಳನ್ನು ಆರಂಭಿಸಲಾಗಿದ್ದು, ಪ್ರತಿಯೊಂದು ಶಾಖೆಯೂ ಮೊದಲ ವರ್ಷದಲ್ಲೇ 10 ಕೋಟಿ ವ್ಯವಹಾರ ಸಾಧಿಸಿರುವುದು ಸಿಬ್ಬಂದಿಯ ಪರಿಶ್ರಮ ಮತ್ತು ಗ್ರಾಹಕರ ವಿಶ್ವಾಸದ ಫಲ ಎಂದು ಹೇಳಿದರು.

ಮುಂದಿನ ದಿನಗಳಲ್ಲಿ ಇನ್ನಷ್ಟು ಶಾಖೆಗಳನ್ನು ಆರಂಭಿಸುವ ಯೋಜನೆ ಇದೆ. ವಿವೇಕಪೂರ್ಣ ಹಣಕಾಸು ನಿರ್ವಹಣೆ ಹಾಗೂ ಆರ್ಥಿಕ ಸೂಚ್ಯಂಕಗಳ ನಿರಂತರ ಮೇಲ್ವಿಚಾರಣೆಯಿಂದ ಸಾರ್ವಜನಿಕರ ಹಣ ಸುರಕ್ಷಿತವಾಗಿದ್ದು, ಬ್ಯಾಂಕ್‌ನ ಬೆಳವಣಿಗೆಗೆ ಅಗತ್ಯ ಅನುಮತಿಗಳನ್ನು ಪಡೆಯಲು ಸಾಧ್ಯವಾಗಿದೆ ಎಂದು ಅವರು ತಿಳಿಸಿದರು.

ದೇರಳಕಟ್ಟೆಯಲ್ಲಿರುವ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು ಹಾಗೂ ಐಟಿ ಕಂಪನಿಗಳು ಈ ಪ್ರದೇಶದ ಅಭಿವೃದ್ಧಿಯ ಸಾಮರ್ಥ್ಯವನ್ನು ತೋರಿಸುತ್ತವೆ ಎಂದು ಹೇಳಿದ ಅವರು, ಉತ್ತಮ ಬ್ಯಾಂಕಿಂಗ್ ಸೇವೆ ನೀಡುವ ಮೂಲಕ ಪ್ರದೇಶದ ಅಭಿವೃದ್ಧಿಗೆ ಕೈಜೋಡಿಸಲು ಸ್ಥಳೀಯರು ನಿರಂತರ ಸಹಕಾರ ನೀಡುವಂತೆ ಮನವಿ ಮಾಡಿದರು.

ವಂ. ಫಾ. ವಿಕ್ಟರ್‌ಡಿ'ಮೆಲ್ಲೊ ಮಾತನಾಡಿ, ಭಾನುವಾರದಂದು ನಡೆದ ಈ ಉದ್ಘಾಟನೆ ಕ್ರೈಸ್ತ ಸಮುದಾಯಕ್ಕೆ ಶುಭಕರ ದಿನವಾಗಿದ್ದು, ಬ್ಯಾಂಕ್ ಇನ್ನಷ್ಟು ಬೆಳೆಯಲಿ ಎಂದು ಆಶಿಸಿದರು. ಬ್ಯಾಂಕಿನ ಯಶಸ್ಸು ಸಾರ್ವಜನಿಕರ ವಿಶ್ವಾಸದ ಫಲವಾಗಿದೆ ಎಂದು ಹೇಳಿದ ಅವರು, ಬ್ಯಾಂಕ್ ಸಿಬ್ಬಂದಿ ಗ್ರಾಹಕರನ್ನು ಅವರ ಉಡುಪು ಅಥವಾ ಸಾಮಾಜಿಕ ಹಿನ್ನೆಲೆಯ ಆಧಾರದ ಮೇಲೆ ನಿರ್ಣಯಿಸದೆ, ಪ್ರತಿಯೊಬ್ಬರನ್ನೂ ಗೌರವದಿಂದ ಕಾಣಬೇಕು ಎಂದು ಸಲಹೆ ನೀಡಿದರು.

'ಜನಸೇವೆ ಎಂದರೆ ದೇವರ ಸೇವೆ' ಎಂದು ಅವರು ಹೇಳಿ, ಪ್ರಾಮಾಣಿಕತೆ ಹಾಗೂ ಕರುಣೆಯಿಂದ ಸೇವೆ ಸಲ್ಲಿಸುವಂತೆ ಸಿಬ್ಬಂದಿಗೆ ಕರೆ ನೀಡಿದರು. ಎಲ್ಲ ಸಮುದಾಯಗಳನ್ನು ಒಗ್ಗೂಡಿಸುವ ಸೇವೆಯ ಮೂಲಕ ಎಂಸಿಸಿ ಬ್ಯಾಂಕ್ ಸೌಹಾರ್ದತೆಯ ಮಾದರಿಯಾಗಲಿ ಎಂದು ಆಶಿಸಿದರು.

ಮುಖ್ಯ ಅತಿಥಿ ವಂ. ಸಿ. ಮಿಲ್ಲಿ ಫೆರ್ನಾಂಡಿಸ್ ಮಾತನಾಡಿ, ದೇರಳಕಟ್ಟೆ ಶಾಖೆಯ ಉದ್ಘಾಟನೆ ಬ್ಯಾಂಕ್‌ನ ಬೆಳವಣಿಗೆಯ ಮತ್ತೊಂದು ಹೆಮ್ಮೆಯ ಮೈಲಿಗಲ್ಲಾಗಿದೆ ಎಂದರು. ಠೇವಣಿಗಳನ್ನು ಸಂಗ್ರಹಿಸಿ, ಅಗತ್ಯವಿರುವವರಿಗೆ ಸಾಲ ಸೌಲಭ್ಯ ಒದಗಿಸುವ ಮೂಲಕ ಎಂಸಿಸಿ ಬ್ಯಾಂಕ್ ಜನರ ವಿಶ್ವಾಸ ಗಳಿಸಿದ್ದು, ಸ್ಥಳೀಯ ಆರ್ಥಿಕತೆಯನ್ನು ಬಲಪಡಿಸಿದೆ ಎಂದು ಅವರು ಹೇಳಿದರು. ಉಳಿತಾಯ ಯೋಜನೆಗಳ ಮೂಲಕ ಕುಟುಂಬಗಳ ಆರ್ಥಿಕ ಭದ್ರತೆಯನ್ನು ಹೆಚ್ಚಿಸುತ್ತಿರುವ ಬ್ಯಾಂಕ್ ದೇರಳಕಟ್ಟೆ ಜನರಿಗೆ ಇನ್ನಷ್ಟು ಉತ್ತಮ ಸೇವೆ ನೀಡಲಿ ಎಂದು ಹಾರೈಸಿದರು.

ರೆವ. ಫಾ. ನಿಲೇಶ್ ಕ್ರಾಸ್ತಾ ಅವರು ಎಂಸಿಸಿ ಬ್ಯಾಂಕ್‌ಗೆ ಅಭಿನಂದನೆ ಸಲ್ಲಿಸಿ, 146 ವರ್ಷಗಳ ಇತಿಹಾಸ ಹೊಂದಿರುವ ಫಾ. ಮುಲ್ಲರ್‌ಚಾರಿಟೇಬಲ್ ಸಂಸ್ಥೆಗಳು ಹಾಗೂ 114 ವರ್ಷಗಳ ಪರಂಪರೆ ಹೊಂದಿರುವ ಎಂಸಿಸಿ ಬ್ಯಾಂಕ್ ಎರಡೂ ಸೇವೆ, ವಿಶ್ವಾಸ ಮತ್ತು ಮಾನವೀಯತೆಯ ಮೌಲ್ಯಗಳ ಮೇಲೆ ಸ್ಥಾಪಿತವಾಗಿವೆ ಎಂದು ಹೇಳಿದರು. ದೈಹಿಕ, ಮಾನಸಿಕ, ಭಾವನಾತ್ಮಕ, ಸಾಮಾಜಿಕ, ಆರ್ಥಿಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಯೇ ಸಮಗ್ರ ಅಭಿವೃದ್ಧಿ ಎಂದು ಅವರು ತಿಳಿಸಿದರು. ಬ್ಯಾಂಕಿಂಗ್ ವ್ಯಕ್ತಿ ಹಾಗೂ ಸಮಾಜದ ಆರ್ಥಿಕ ಪ್ರಗತಿಗೆ ಅತ್ಯಗತ್ಯವಾಗಿದ್ದು, ದೇರಳಕಟ್ಟೆಯ ಜನರ ಆರ್ಥಿಕ ಅಭಿವೃದ್ಧಿಗೆ ಎಂಸಿಸಿ ಬ್ಯಾಂಕ್ ಪ್ರಮುಖ ಪಾತ್ರ ವಹಿಸಲಿ ಎಂದು ಆಶಿಸಿದರು.

ಬ್ಯಾಂಕಿಂಗ್ ಜನರ ಆರ್ಥಿಕ ಅಗತ್ಯಗಳನ್ನು ಸಮರ್ಥವಾಗಿ ಪೂರೈಸುವ ಸಾಧನವಾಗಿದೆ. ದೇರಳಕಟ್ಟೆಯ ಜನರಿಗೆ ಆರ್ಥಿಕ ಯೋಜನೆ ರೂಪಿಸುವಲ್ಲಿ ಎಂಸಿಸಿ ಬ್ಯಾಂಕ್ ಮಾರ್ಗದರ್ಶನ ನೀಡಲಿ. ಎರಡೂ ಸಂಸ್ಥೆಗಳು ಇದೇ ವಿಶ್ವಾಸ ಹಾಗೂ ಸೇವಾ ಮನೋಭಾವದೊಂದಿಗೆ ಮುಂದುವರಿಯಲಿ ಎಂದು ಅವರು ಹೇಳಿದರು.

ಕೋಟೆಕಾರ್‌ಗ್ರಾಮ ಪಂಚಾಯತ್ ಅಧ್ಯಕ್ಷೆ ದಿವ್ಯಾ ಸತೀಶ್ ಶೆಟ್ಟಿ ಅವರು ನೂತನ ಶಾಖೆಯ ಉದ್ಘಾಟನೆಗೆ ಅಧ್ಯಕ್ಷರು, ಆಡಳಿತ ಮಂಡಳಿ ಹಾಗೂ ಸಿಬ್ಬಂದಿಗೆ ಅಭಿನಂದನೆ ಸಲ್ಲಿಸಿದರು. ಮಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇನ್ನಷ್ಟು ಶಾಖೆಗಳನ್ನು ಆರಂಭಿಸುವ ಮೂಲಕ ಬ್ಯಾಂಕ್ ಬೆಳೆಯಲಿ ಎಂದು ಹಾರೈಸಿದ ಅವರು, ಸ್ಥಳೀಯರು ಬ್ಯಾಂಕ್‌ಗೆ ಬೆಂಬಲ ನೀಡುವಂತೆ ಮನವಿ ಮಾಡಿದರು. ಸ್ಥಳೀಯ ಪ್ರತಿಭೆಗಳನ್ನು ಗುರುತಿಸಿ ಗೌರವಿಸುವ ಬ್ಯಾಂಕ್‌ನ ಕಾರ್ಯವನ್ನು ಶ್ಲಾಘಿಸಿದರು.

ಸಮುದಾಯ ಸೇವೆಯ ಅಂಗವಾಗಿ ಎಂಸಿಸಿ ಬ್ಯಾಂಕ್ ದೇರಳಕಟ್ಟೆ ಭಾಗದ ಶೈಕ್ಷಣಿಕ ಹಾಗೂ ವಿವಿಧ ಕ್ಷೇತ್ರಗಳ ಸಾಧಕರಾದ ಫ್ರ್ಯಾಂಕಿ ಫ್ರಾನ್ಸಿಸ್ ಕುಟಿನ್ಹಾ, ಅಲ್ವಿನ್ ಜೆರೋಮ್ ಡಿ'ಸೋಜಾ, ಫಯಾಝ್ ಮಡೂರು, ಸಿಎ ಮ್ಯಾಕ್ಸಿಮ್ ಫೆರ್ನಾಂಡಿಸ್, ಉಗ್ಗಪ್ಪ ಪೂಜಾರಿ ಹಾಗೂ ಶಫಿ ಬಬ್ಬುಕಟ್ಟೆ ಅವರನ್ನು ಸನ್ಮಾನಿಸಲಾಯಿತು.

ಬ್ಯಾಂಕ್ ವತಿಯಿಂದ ಉರ್ಸುಲಿನ್ ಸಿಸ್ಟರ್ಸ್ ವಿಶೇಷ ಚೇತನ ಮಕ್ಕಳ ಶಾಲೆಗೆ 1,00,000, ಪ್ರಿನ್ಸಿತಾ ಡಿ'ಸೋಜಾ ಅವರ ವಿದ್ಯಾಭ್ಯಾಸಕ್ಕೆ 25,000, ಮರ್ಸಿ ಕೇರ್‌ಚಾರಿಟೇಬಲ್ ಟ್ರಸ್ಟ್‌ಗೆ 50,000 ಹಾಗೂ ಓಲವಿನಹಳ್ಳಿ ಆಶ್ರಮಕ್ಕೆ 1,00,000 ಧನಸಹಾಯ ವಿತರಿಸಲಾಯಿತು.

ನೂತನ ಶಾಖೆಯ ಒಳಾಂಗಣ ಕಾಮಗಾರಿಗೆ ಕೊಡುಗೆ ನೀಡಿದ ಎಂಜಿನಿಯರ್ ಕಾರ್ತಿಕ್ ಕಿರಣ್ ಅವರನ್ನು ಸನ್ಮಾನಿಸಲಾಯಿತು. ಮುಖ್ಯ ಅತಿಥಿಗಳು ಹಾಗೂ ಗೌರವ ಅತಿಥಿಗಳಿಗೆ ಸ್ಮರಣಿಕೆಗಳನ್ನು ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಜೆರಾಲ್ಡ್ ಜೂಡ್ ಡಿ'ಸಿಲ್ವಾ, ನಿರ್ದೇಶಕರಾದ ಆಂಡ್ರ್ಯೂ ಡಿ'ಸೋಜಾ, ಡೇವಿಡ್ ಡಿ'ಸೋಜಾ, ಮೆಲ್ವಿನ್ ವಾಸ್, ಜೆ.ಪಿ. ರೋಡ್ರಿಗಸ್, ಅನಿಲ್ ಪತ್ರಾವೊ, ಎಲ್ರಾಯ್ ಕಿರಣ್ ಕ್ರಾಸ್ತಾ, ಐರಿನ್ ರೆಬೆಲ್ಲೋ, ವಿನ್ಸೆಂಟ್ ಲಸ್ರಾದೊ, ಸುಶಾಂತ್ ಸಲ್ಡಾನ್ಹಾ, ಫೆಲಿಕ್ಸ್ ಡಿ'ಕ್ರೂಜ್, ಅಲ್ವಿನ್ ಪಿ. ಮೊಂತೇರೊ ಹಾಗೂ ಮಹಾಪ್ರಬಂಧಕ ಸುನಿಲ್ ಮಿನೇಜಸ್ ಉಪಸ್ಥಿತರಿದ್ದರು.

ನಿರ್ದೇಶಕ ರೋಶನ್ ಡಿ'ಸೋಜಾ ಸ್ವಾಗತಿಸಿದರು. ಶೈನಿ ವೀಭಾ ಡಿ'ಸೋಜಾ ಕಾರ್ಯಕ್ರಮ ನಿರೂಪಿಸಿದರು. ಬ್ಯಾಂಕ್ ಸಿಬ್ಬಂದಿಯಿಂದ ಬ್ಯಾಂಕ್ ಗೀತೆ ಹಾಗೂ ಪ್ರಾರ್ಥನಾ ಗೀತೆ ಹಾಡಲಾಯಿತು. ಬಳಿಕ ಎಂಸಿಸಿ ಬ್ಯಾಂಕ್‌ನ ಇತಿಹಾಸ ಮತ್ತು ಸಾಧನೆಗಳನ್ನು ಪರಿಚಯಿಸುವ ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು. ನೂತನ ದೇರಳಕಟ್ಟೆ ಶಾಖೆಯ ವ್ಯವಸ್ಥಾಪಕಿ ಜೂಲಿಯೆಟ್ ಡಿ'ಸೋಜಾ ವಂದನಾರ್ಪಣೆ ಸಲ್ಲಿಸುವ ಮೂಲಕ ಕಾರ್ಯಕ್ರಮ ಮುಕ್ತಾಯಗೊಂಡಿತು.

ಕನ್ನಡ ಸೇವಾ ಸಂಘ ಪೊವ್ಯಾ : ಪಾಸ್ಪೋಲಿ ಮ.ನ.ಪಾ. ಕನ್ನಡ ಶಾಲಾ ಮಕ್ಕಳಿಗೆ ಶಾಲಾ ಪರಿಕರಗಳ ವಿತರಣಾ ಕಾರ್ಯಕ್ರಮ

ಮಕ್ಕಳ ಕಲಿಕೆಗೆ ನೆರವಾಗಲು ಕನ್ನಡ ಸೇವಾ ಸಂಘ ಸದಾ ಸಿದ್ಧ - ಮಹೇಶ್ ಎಸ್. ಶೆಟ್ಟಿ





ಮುಂಬಯಿ, ಜೂ. 29- ಕನ್ನಡ ಸೇವಾ ಸಂಘ ಪೊವ್ಯಾ ಇದರ ಕಚೇರಿಯಲ್ಲಿ ಜೂನ್ 27ರ ಶನಿವಾರದಂದು ಬೆಳಿಗ್ಗೆ ಪಾಸ್ಪೋಲಿ ಮ.ನ.ಪಾ. ಕನ್ನಡ ಶಾಲೆಯ ಮಕ್ಕಳಿಗೆ ಪುಸ್ತಕ ಹಾಗೂ ಶಾಲಾ ಪರಿಕರಗಳನ್ನು ವಿತರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಗೌರವಾಧ್ಯಕ್ಷ ಮಹೇಶ್ ಎಸ್. ಶೆಟ್ಟಿಯವರು ಮ.ನ.ಪಾ. ಕನ್ನಡ ಶಾಲೆಯ ಮಕ್ಕಳಿಗೆ ಪುಸ್ತಕ ಹಾಗೂ ಶಾಲಾ ಪರಿಕರಗಳ ಪ್ರಾಯೋಜಕತ್ವವನ್ನು ವಹಿಸಿ ಮಾತನಾಡುತ್ತಾ, ಎಲ್ಲಾ ಮಕ್ಕಳು ಚೆನ್ನಾಗಿ ಕಲಿತು ತಂದೆ-ತಾಯಿಯವರಿಗೆ ಹಾಗೂ ಸಮಾಜಕ್ಕೆ ಗೌರವ ತಂದು ಕೊಡಬೇಕು. ಶಾಲೆಯ 25ನೇ ವರ್ಷದ ವಾರ್ಷಿಕೋತ್ಸವದಲ್ಲಿ ಎಲ್ಲರೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು. ಮಕ್ಕಳ ಕಲಿಕೆಗೆ ನೆರವಾಗಲು ಕನ್ನಡ ಸೇವಾ ಸಂಘ ಸದಾ ಸಿದ್ಧ. ನಿಮಗೆ ಅಥವಾ ನಿಮ್ಮ ಕುಟುಂಬಕ್ಕೆ ಯಾವುದೇ ಆರ್ಥಿಕ ಅಥವಾ ಆರೋಗ್ಯ ಸಮಸ್ಯೆ ಇದ್ದರೆ ನಮಗೆ ತಿಳಿಸಿ, ಅಗತ್ಯ ಸಹಾಯವನ್ನು ಸಂಘದ ಮೂಲಕ ಮಾಡುತ್ತೇವೆ ಎಂದು ಮಕ್ಕಳಿಗೆ ಹಾಗೂ ಅವರ ಪಾಲಕರಿಗೆ ಭರವಸೆ ನೀಡಿದರು.

ಸಂಘದ ಅಧ್ಯಕ್ಷ ಸಂದೇಶ್ ಆರ್. ಶೆಟ್ಟಿ, ಗೌರವಾಧ್ಯಕ್ಷ ಮಹೇಶ್ ಎಸ್. ಶೆಟ್ಟಿ, ಗೌರವ ಪ್ರಧಾನ ಕಾರ್ಯದರ್ಶಿ ಅನಿತಾ ಎಸ್. ಶೆಟ್ಟಿ, ಗೌರವ ಕೋಶಾಧಿಕಾರಿ ಜಗನ್ನಾಥ್ ಕೆ. ಶೆಟ್ಟಿ, ಸಲಹೆಗಾರ ಸಮಿತಿಯ ಕಾರ್ಯಾಧ್ಯಕ್ಷ ನ್ಯಾಯವಾದಿ ಆರ್. ಜಿ. ಶೆಟ್ಟಿ, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಸುಗುಣಾ ಕೆ. ಶೆಟ್ಟಿ, ಶಿಕ್ಷಣ ಸಮಿತಿಯ ಕಾರ್ಯಾಧ್ಯಕ್ಷೆ ಯಶೋಧಾ ಎಸ್. ಪೂಜಾರಿ ಹಾಗೂ ಶಾಲೆಯ ಮುಖ್ಯೋಪಾಧ್ಯಾಯ ಲಕ್ಷ್ಮಣ್ ಮಾಳಿ ದೀಪ ಪ್ರಜ್ವಲನೆ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪಾಸ್ಪೋಲಿ ಮ.ನ.ಪಾ. ಕನ್ನಡ ಶಾಲೆಯ ಮಕ್ಕಳು ಪ್ರಾರ್ಥಿಸಿದರು.

ಊರಿನಲ್ಲಿ ಕನ್ನಡ ಶಾಲೆಗಳು ಮುಚ್ಚುತ್ತಿವೆ. ಆದರೆ ಮುಂಬಯಿಯಲ್ಲಿ ಇಂದಿಗೂ ಕನ್ನಡ ಶಾಲೆಗಳು ಕಾರ್ಯ ನಿರ್ವಹಿಸುತ್ತಿದ್ದು, ಕನ್ನಡ ಕಲಿಯುವ ಮಕ್ಕಳು ಇರುವುದೇ ಸಂತಸದ ವಿಷಯವಾಗಿದೆ. ಗೌರವಾಧ್ಯಕ್ಷ ಮಹೇಶ್ ಎಸ್. ಶೆಟ್ಟಿ ಹಲವಾರು ವರ್ಷಗಳಿಂದ ಶಾಲೆಯ ಮಕ್ಕಳಿಗೆ ಪುಸ್ತಕಗಳು ಹಾಗೂ ಶಾಲಾ ಪರಿಕರಗಳನ್ನು ಪ್ರಾಯೋಜಿಸುತ್ತಾ ಬಂದಿದ್ದಾರೆ. ಮಕ್ಕಳ ಶಿಕ್ಷಣಕ್ಕೆ ಅಗತ್ಯವಿರುವ ಸಹಾಯವನ್ನು ಕನ್ನಡ ಸೇವಾ ಸಂಘ ನಿರಂತರವಾಗಿ ಮಾಡುತ್ತಾ ಬಂದಿದೆ. ಈ ವರ್ಷ ಶಾಲೆಯ ರಜತ ಸಂಭ್ರಮವನ್ನು ಆಚರಿಸುತ್ತಿದ್ದು, ಶಾಲೆಯ ಬೆಳವಣಿಗೆ ಹಾಗೂ ಉನ್ನತಿಗೆ ತಮ್ಮ ಅಮೂಲ್ಯ ಕೊಡುಗೆ ನೀಡಿದ ಎಲ್ಲರನ್ನು ವಾರ್ಷಿಕೋತ್ಸವದಂದು ಗೌರವಿಸುವುದು ನಮ್ಮ ಕರ್ತವ್ಯವಾಗಿದೆ ಎಂದು ಸಂಘದ ಅಧ್ಯಕ್ಷ ಸಂದೇಶ್ ಆರ್. ಶೆಟ್ಟಿ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ತಿಳಿಸಿದರು.

ಸಲಹೆಗಾರ ಸಮಿತಿಯ ಕಾರ್ಯಾಧ್ಯಕ್ಷ ನ್ಯಾಯವಾದಿ ಆರ್. ಜಿ. ಶೆಟ್ಟಿ ಮಾತನಾಡುತ್ತಾ, ಸಂಘ ಆರಂಭವಾದ ದಿನದಿಂದಲೇ ಮಕ್ಕಳ ಶಿಕ್ಷಣಕ್ಕೆ ವಿಶೇಷ ಆದ್ಯತೆ ನೀಡುತ್ತಾ ಬಂದಿದೆ. ಪ್ರತಿ ವರ್ಷವೂ ಕನ್ನಡ ಸೇವಾ ಸಂಘದ ವತಿಯಿಂದ ವಿದ್ಯಾರ್ಥಿಗಳಿಗೆ ಪುಸ್ತಕ ಹಾಗೂ ಶಾಲಾ ಪರಿಕರಗಳನ್ನು ವಿತರಿಸಲಾಗುತ್ತಿದ್ದು, ಈ ಸೇವೆ ಮುಂದೆಯೂ ನಿರಂತರವಾಗಿ ನಡೆಯಲಿದೆ. ಪುಸ್ತಕಗಳನ್ನು ಉತ್ತಮವಾಗಿ ಸದುಪಯೋಗಪಡಿಸಿಕೊಳ್ಳಬೇಕು. ಮಕ್ಕಳು ಚೆನ್ನಾಗಿ ವಿದ್ಯಾಭ್ಯಾಸ ಮಾಡಿ ಉತ್ತಮ ಪ್ರಜೆಗಳಾಗಿ ಬೆಳೆಯಬೇಕು. ಶಿಕ್ಷಣಕ್ಕೆ ಸಂಬಂಧಿಸಿದಂತೆ ಇನ್ನೂ ಯಾವುದೇ ಸೌಲಭ್ಯಗಳ ಅಗತ್ಯವಿದ್ದರೆ ಸಂಘದ ಗಮನಕ್ಕೆ ತರಬೇಕು. ಸಾಧ್ಯವಾದ ಮಟ್ಟಿಗೆ ಎಲ್ಲಾ ರೀತಿಯ ಸಹಾಯವನ್ನು ನೀಡಲು ಸಂಘ ಸದಾ ಸಿದ್ಧವಾಗಿದೆ ಎಂದು ಹೇಳಿದರು.

ಶಾಲೆಯ ಅಧ್ಯಾಪಕ ಪ್ರಕಾಶ್ ರೇವಿ ಮಾತನಾಡುತ್ತಾ, ಕನ್ನಡ ಸೇವಾ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರ ಪರಿಶ್ರಮದಿಂದ ಪಾಸ್ಪೋಲಿ ಮ.ನ.ಪಾ. ಕನ್ನಡ ಶಾಲೆ ಸ್ಥಾಪನೆಯಾಗಿ, ಆರಂಭದಿಂದಲೂ ಶಾಲೆಯ ಮಕ್ಕಳ ಶಿಕ್ಷಣ ಹಾಗೂ ಅಗತ್ಯಗಳಿಗೆ ನಿರಂತರವಾಗಿ ಸ್ಪಂದಿಸುತ್ತಾ ಬಂದಿದ್ದಾರೆ ಎಂದು ಹೇಳಿದರು. ಸರಕಾರದಿಂದ ದೊರೆಯದ ಅನೇಕ ಸೌಲಭ್ಯಗಳನ್ನು ಸಂಘವೇ ಒದಗಿಸಿದೆ. ಗೌರವಾಧ್ಯಕ್ಷ ಮಹೇಶ್ ಎಸ್. ಶೆಟ್ಟಿಯವರು ಗೌರವ ಶಿಕ್ಷಕರಿಗೆ ಗೌರವ ವೇತನ ನೀಡುತ್ತಿದ್ದು, ಮಾಜಿ ಅಧ್ಯಕ್ಷ ಡಿ. ಕೆ. ಶೆಟ್ಟಿ ಹಾಗೂ ಇತರ ಪದಾಧಿಕಾರಿಗಳೂ ಸಹ ಈ ಕಾರ್ಯಕ್ಕೆ ಕೈಜೋಡಿಸಿದ್ದಾರೆ. ಸಂಘದ ವಾರ್ಷಿಕೋತ್ಸವದಲ್ಲಿ ಮಕ್ಕಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಕಾಶ ನೀಡಿ, ಬಹುಮಾನಗಳನ್ನೂ ನೀಡಲಾಗುತ್ತಿದೆ. ಮುಂಬಯಿ ಬಂಟರ ಸಂಘದ ಸಹಕಾರದಿಂದ ಶಾಲೆಗೆ ಕಂಪ್ಯೂಟರ್ ಹಾಗೂ ಪ್ರಿಂಟರ್ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ. ಈ ವರ್ಷ ಶಾಲೆಯ ರಜತ ಸಂಭ್ರಮದ ಅಂಗವಾಗಿ ಸಂಘವು ಮಾಡುತ್ತಿರುವ ಪೂರ್ವ ಸಿದ್ಧತೆ ಶ್ಲಾಘನೀಯವಾಗಿದೆ ಎಂದು ಅವರು ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರನ್ನು ಅಭಿನಂದಿಸಿದರು.

ಪಾಸ್ಪೋಲಿ ಮ.ನ.ಪಾ. ಕನ್ನಡ ಶಾಲೆಯ ಮುಖ್ಯೋಪಾಧ್ಯಾಯ ಲಕ್ಷ್ಮಣ್ ಮಾಳಿ ಹಾಗೂ ಅಧ್ಯಾಪಕ ಪ್ರಕಾಶ್ ರೇವಿ ಅವರಿಗೆ ಸಂಘದ ಅಧ್ಯಕ್ಷ ಸಂದೇಶ್ ಆರ್. ಶೆಟ್ಟಿ ಪುಷ್ಪಗುಚ್ಛ ನೀಡಿ ಗೌರವಿಸಿದರು. ಶಿಕ್ಷಣ ಸಮಿತಿಯ ಕಾರ್ಯಾಧ್ಯಕ್ಷೆ ಯಶೋಧಾ ಎಸ್. ಪೂಜಾರಿ ಸ್ವಾಗತ ಭಾಷಣ ಮಾಡಿದರು. ನಂತರ ಸಂಘದ ಗೌರವಾಧ್ಯಕ್ಷ ಮಹೇಶ್ ಎಸ್. ಶೆಟ್ಟಿ, ಅಧ್ಯಕ್ಷ ಸಂದೇಶ್ ಆರ್. ಶೆಟ್ಟಿ ಹಾಗೂ ಎಲ್ಲಾ ಪದಾಧಿಕಾರಿಗಳು ಒಟ್ಟಾಗಿ ಮಕ್ಕಳಿಗೆ ಪುಸ್ತಕ ಹಾಗೂ ಶಾಲಾ ಪರಿಕರಗಳನ್ನು ವಿತರಿಸಿದರು.

ಸಂಘದ ಮಾಜಿ ಅಧ್ಯಕ್ಷರಾದ ಸುಧಾಕರ್‌ಜಿ. ಪೂಜಾರಿ, ರಮೇಶ್ ಡಿ. ರೈ, ನಾನಾಯರ ಗರಡಿ ಪ್ರಭಾಕರ್ ಶೆಟ್ಟಿ, ಮಾಜಿ ಉಪಾಧ್ಯಕ್ಷ ದಿವಾಕರ್ ಶೆಟ್ಟಿ, ಗೌರವ ಕೋಶಾಧಿಕಾರಿ ಜಗನ್ನಾಥ್ ಎ. ಶೆಟ್ಟಿ, ಯುವ ವಿಭಾಗದ ಕಾರ್ಯಾಧ್ಯಕ್ಷ ಅಮಿತ್ ಜೆ. ಶೆಟ್ಟಿ, ಸಾಂಸ್ಕೃತಿಕ ವಿಭಾಗದ ಕಾರ್ಯಾಧ್ಯಕ್ಷೆ ಪ್ರಶಾಂತಿ ಡಿ. ಶೆಟ್ಟಿ, ಸದಸ್ಯತ್ವ ನೋಂದಣಿ ಸಮಿತಿಯ ಕಾರ್ಯಾಧ್ಯಕ್ಷೆ ಜ್ಯೋತಿ ಆರ್. ಜಿ. ಶೆಟ್ಟಿ, ಮಹಿಳಾ ಸಲಹಾ ವಿಭಾಗದ ಸದಸ್ಯರಾದ ಶೈಲಾ ಎಸ್. ಶೆಟ್ಟಿ, ಸವಿತಾ ಕೆ. ಶೆಟ್ಟಿ, ಶೋಭಾ ಆರ್. ರೈ, ಮಹಿಳಾ ವಿಭಾಗದ ಕಾರ್ಯದರ್ಶಿ ಆಶಾ ಎಸ್. ಶೆಟ್ಟಿ, ಮಹಿಳಾ ವಿಭಾಗದ ಕೋಶಾಧಿಕಾರಿ ಕುಶಾಲ ಎ. ಬಂಗೇರ, ಆಡಳಿತ ಸಮಿತಿಯ ಸದಸ್ಯರಾದ ಮೀನಾಕ್ಷಿ ಶೆಟ್ಟಿ, ಉಷಾ ಆರ್. ಸಾಲ್ಯಾನ್, ಸರೋಜಿನಿ ಎಚ್. ಪೂಜಾರಿ, ಅನಿತಾ ಯು. ಶೆಟ್ಟಿ, ಸುನೀತಾ ಬಿ. ಪೂಜಾರಿ, ವಿಮಲಾ ಎಸ್. ದೇವಾಡಿಗ, ಉಷಾ ಎ. ದೇವಾಡಿಗ, ಅರುಣಾ ಶೆಟ್ಟಿ, ಜ್ಯೋತಿ ಎಸ್. ಶೆಟ್ಟಿ, ನೂತನಾ ಬಿ. ಪಕ್ಕಳ ಹಾಗೂ ಸದಾಶಿವ ಶೆಟ್ಟಿ ಬಂಟ್ವಾಳ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಶಾಲೆಯ ಮಕ್ಕಳು ಹಾಗೂ ಪಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಶೋಭೆಯನ್ನು ಹೆಚ್ಚಿಸಿದರು. ಲಘು ಉಪಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು. ಗೌರವ ಪ್ರಧಾನ ಕಾರ್ಯದರ್ಶಿ ಅನಿತಾ ಎಸ್. ಶೆಟ್ಟಿ ಕಾರ್ಯಕ್ರಮವನ್ನು ನಿರೂಪಿಸಿ, ವಂದಿಸಿದರು.

ಫೋರ್ಟ್ ಆ್ಯಂಡ್ ಕೊಲಬಾ ವೆಲ್ಫೇರ್ ಸೊಸೈಟಿ ವತಿಯಿಂದ ಪುಸ್ತಕ ವಿತರಣೆ

ನಿಸ್ವಾರ್ಥ ಶೈಕ್ಷಣಿಕ ಸೇವೆಯೇ ಸಂಸ್ಥೆಯ ಉದ್ದೇಶ - ಮಧುಕರ್ ಎಸ್. ಕೇವ್ಳೆ







(ಚಿತ್ರ, ವರದಿ : ಉಮೇಶ್ ಕೆ. ಅಂಚನ್)

ಮುಂಬಯಿ, ಜೂ. 29- ಸಂಸ್ಥೆಯ ಸದಸ್ಯರು ಮುಂಬಯಿಯ ವಿವಿಧ ಸಭಾ ಭವನಗಳಲ್ಲಿ ಸ್ವಯಂ ಸೇವಕರಾಗಿ ಕೆಲಸ ಮಾಡುತ್ತಾ ದಿನದ ಗಳಿಕೆಯಲ್ಲಿ ಸಿಗುವ ವೇತನದಲ್ಲಿ ಶೇಕಡಾ 25ರಷ್ಟು ಭಾಗವನ್ನು ಮಕ್ಕಳ ಶಿಕ್ಷಣಕ್ಕಾಗಿ, ಮುಖ್ಯವಾಗಿ ಅವರಿಗೆ ಪುಸ್ತಕಗಳನ್ನು ವಿತರಿಸಲು ಒಟ್ಟುಗೂಡಿಸುತ್ತೇವೆ. ನಮ್ಮ ತಂಡದವರೆಲ್ಲರೂ ಹಗಲಿನಲ್ಲಿ ಬೇರೆ ಬೇರೆ ಕಡೆ ಕೆಲಸ ನಿರ್ವಹಿಸಿ, ರಾತ್ರಿಯ ಸಮಯದಲ್ಲಿ ಈ ಸಮಾಜಮುಖಿ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಾರೆ. ಕಳೆದ ಸುಮಾರು 70 ವರ್ಷಗಳಿಂದ ಈ ಸೇವೆ ನಿರಂತರವಾಗಿ ನಡೆದುಕೊಂಡು ಬಂದಿದೆ. ಆರಂಭದ ದಿನಗಳಲ್ಲಿ ಪಠ್ಯ ಪುಸ್ತಕಗಳನ್ನು ನೀಡುತ್ತಿದ್ದು ಕಾಲಕ್ರಮೇಣ ಪಠ್ಯಕ್ರಮದಲ್ಲಿ ಬದಲಾವಣೆಗಳಾದ ಕಾರಣ ಆ ಯೋಜನೆಯನ್ನು ನಿಲ್ಲಿಸಿ, ನಂತರದ ದಿನಗಳಲ್ಲಿ ನೋಟ್ ಬುಕ್‌ಗಳನ್ನು ವಿತರಿಸಲು ಪ್ರಾರಂಭಿಸಲಾಯಿತು. ಈ ಕಾರ್ಯದ ಹಿಂದೆ ಸಂಸ್ಥೆಯ ಯಾವುದೇ ರೀತಿಯ ಪ್ರಚಾರದ ಹಂಬಲವಾಗಲಿ ಅಥವಾ ದೊಡ್ಡಸ್ತಿಕೆಯ ಪ್ರದರ್ಶನವಾಗಲಿ ಇಲ್ಲ. ಕೇವಲ ನಿಸ್ವಾರ್ಥ ಸೇವೆಯೇ ನಮ್ಮ ಪರಮ ಉದ್ದೇಶವಾಗಿದೆ. ಬಡ ವಿದ್ಯಾರ್ಥಿಗಳ ಭವಿಷ್ಯವು ಉಜ್ವಲವಾಗಬೇಕು ಮತ್ತು ಅವರು ಜೀವನದಲ್ಲಿ ಮುಂದೆ ಬರಬೇಕು ಎನ್ನುವುದೇ ನಮ್ಮ ಆಶಯ. ಸದ್ಯಕ್ಕೆ ನಮ್ಮ ತಂಡದಲ್ಲಿ ಇಂತಹ ಸಮಾಜಮುಖಿ ಚಿಂತನೆಯುಳ್ಳ ಸುಮಾರು 125 ಸ್ವಯಂಸೇವಕರು ಕೈಜೋಡಿಸುತ್ತಿದ್ದಾರೆ. ಸಂಸ್ಥೆಯು ವರ್ಷಕ್ಕೊಮ್ಮೆ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದೆ. ಮುಂದಿನ ದಿನಗಳಲ್ಲಿ ನೋಟ್ ಬುಕ್‌ಗಳ ಬದಲಾಗಿ ಮಕ್ಕಳಿಗೆ ಶಾಲಾ ಬ್ಯಾಗ್‌ಗಳನ್ನು ನೀಡುವ ಆಲೋಚನೆ ನಮ್ಮದಾಗಿದೆ, ಇದರೊಂದಿಗೆ ಯಾರಾದರೂ ದಾನಿಗಳು ಕೈಜೋಡಿಸಿದರೆ, ಈ ಸೇವೆಯನ್ನು ಇನ್ನಷ್ಟು ವಿಸ್ತರಿಸಿ ಮತ್ತಷ್ಟು ಮಕ್ಕಳಿಗೆ ಸಹಾಯ ಮಾಡುವ ಆಶಯ ನಮ್ಮದಾಗಿದೆ ಎಂದು ಫೋರ್ಟ್ ಕೊಲಬಾ ವೆಲ್ಫೇರ್ ಸೊಸೈಟಿಯ ಅಧ್ಯಕ್ಷ ಮಧುಕರ್ ಕೇವ್ಳೆ ನುಡಿದರು.

ಅವರು ಜೂ. 27ರ ಶನಿವಾರದಂದು ಫೋರ್ಟ್ ಆರ್ಯ ಸಮಾಜದ ಸಭಾಗೃಹದಲ್ಲಿ ಫೋರ್ಟ್ ಆ್ಯಂಡ್ ಕೊಲಬಾ ವೆಲ್ಫೇರ್ ಸೊಸೈಟಿ ಆಯೋಜಿಸಿದ್ದ ಪರಿಸರದ ಮನಪಾ ಹಾಗೂ ರಾತ್ರಿ ಶಾಲಾ ಮಕ್ಕಳ ಪುಸ್ತಕ ವಿತರಣಾ ಸಮಾರಂಭದಲ್ಲಿ ಉಪಸ್ಥಿತರಿದ್ದು ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ 'ಮುಂಬಯಿ ಸಮಾಚಾರ್' ದಿನಪತ್ರಿಕೆಯ ಸಂಪಾದಕ ನೀಲೇಶ್ ದಾವೆ ಮಾತನಾಡಿ, ಫೋರ್ಟ್ ಆ್ಯಂಡ್ ಕೊಲಬಾ ವೆಲ್ಫೇರ್ ಸೊಸೈಟಿಯ ಸದಸ್ಯರು ಕಷ್ಟಪಟ್ಟು ದುಡಿದು ಶಾಲಾ ಮಕ್ಕಳ ಶಿಕ್ಷಣಕ್ಕಾಗಿ ಮತ್ತು ಉತ್ತಮ ಭವಿಷ್ಯಕ್ಕಾಗಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಹಾಗಾಗಿ, ನಾವೆಲ್ಲರೂ ಒಟ್ಟಾಗಿ ಇವರ ಘನ ಕಾರ್ಯಕ್ಕಾಗಿ ಅನಂತಾನಂತ ಧನ್ಯವಾದ ಅರ್ಪಿಸಬೇಕಾಗಿದೆ. ನಿಮ್ಮ ಕೈ ಸೇರಲಿರುವ ಈ ಪುಸ್ತಕಗಳು ನಿಮ್ಮ ಜ್ಞಾನವನ್ನು ಮತ್ತಷ್ಟು ಹೆಚ್ಚಿಸಲಿ ಎಂದು ನೆರೆದ ಶಾಲಾ ಮಕ್ಕಳಿಗೆ ಶುಭ ಹಾರೈಸಿ ಸಂಸ್ಥೆಯ ಎಲ್ಲಾ ಸದಸ್ಯರಿಗೆ ಅಭಿನಂದಿಸಿದರು.

ಅತಿಥಿ ಮುಂಜಾಲ್ ಥೀಮ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ನಿರ್ದೇಶಕ ರಾಜೇಂದ್ರ ಬಾಯಿ ಸಾವ್ಲಾ ಮಾತನಾಡಿ, ಹಲವಾರು ವರ್ಷಗಳಿಂದ ಸಂಸ್ಥೆಯ ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದು ಅತೀವ ಸಂತೋಷ ನೀಡಿದೆ. ಯಾವುದೇ ಹೆಸರು, ಕೀರ್ತಿ ಅಥವಾ ಪ್ರಸಿದ್ಧಿಯ ಹಂಗಿಲ್ಲದೆ, ಕೇವಲ ತಮ್ಮ ಕರ್ತವ್ಯ ಮತ್ತು ಕೆಲಸವನ್ನು ಅತ್ಯಂತ ಪ್ರಾಮಾಣಿಕತೆಯಿಂದ ಮಾಡುತ್ತಾ ಮುನ್ನಡೆಯುವ ಸಂಸ್ಥೆಯ ಪದಾಧಿಕಾರಿಗಳು ಮತ್ತು ಸದಸ್ಯರಿಗೆ ನನ್ನ ಹೃದಯಪೂರ್ವಕ ಧನ್ಯವಾದಗಳು. ಕಳೆದ ಹಲವಾರು ವರ್ಷಗಳಿಂದ ಅವರು ಮಾಡುತ್ತಿರುವ ಇಂತಹ ನಿಸ್ವಾರ್ಥ ಸೇವೆ ಹಾಗೂ ಅವರ ಅದ್ಭುತ ಕಾರ್ಯವೈಖರಿಯನ್ನು ನಾನು ಹತ್ತಿರದಿಂದ ನಿರಂತರವಾಗಿ ನೋಡುತ್ತಾ ಬಂದಿದ್ದೇನೆ. ಈ ಸುದೀರ್ಘ ಪಯಣದಲ್ಲಿ ಶ್ರಮಿಸಿದ ಎಲ್ಲರಿಗೂ ತುಂಬು ಹೃದಯದ ಕೃತಜ್ಞತೆಗಳು ಎಂದು ಹೇಳಿದರು.

ಸಮಾಜ ಸೇವಕ, ಉದ್ಯಮಿ, ಸಂಸ್ಥೆಯ ಪೋಷಕ ದೀಪಕ್ ಬಾಯಿ ಕಪಾಡಿಯಾ ಸಂಸ್ಥೆಯ ಕಾರ್ಯವೈಖರಿಯನ್ನು ಶ್ಲಾಘಿಸಿ ಅಭಿನಂದಿಸಿದರು. ಅತಿಥಿಗಳನ್ನು ಹಾಗೂ ಉಪಸ್ಥಿತರಿದ್ದ ಪರಿಸರದ ಸಂಘ-ಸಂಸ್ಥೆಗಳ ಪ್ರತಿನಿಧಿಗಳನ್ನು ಪದಾಧಿಕಾರಿಗಳು ಸತ್ಕರಿಸಿದರು. ಗಣಪತಿ ಸ್ತುತಿಯೊಂದಿಗೆ ಆರಂಭಗೊಂಡ ಸಭಾ ಕಾರ್ಯಕ್ರಮದಲ್ಲಿ ಸಂಸ್ಥೆಯ ಗೌರವ ಕಾರ್ಯದರ್ಶಿ ಎಸ್. ಎಸ್. ದೇವಾಡಿಗ ಸ್ವಾಗತಿಸಿದರು. ಕೋಶಾಧಿಕಾರಿ ವಿಲಾಸ್ ಎಸ್. ಶಿರ್ಕೆ ವಂದಿಸಿದರು.ಕಾರ್ಯಕ್ರಮವನ್ನು ಆಶೀಶ್ ಶಹಾ ನಿರೂಪಿಸಿದರು.

ಸಂಸ್ಥೆಯ ಟ್ರಸ್ಟಿ ಜಿ. ಎನ್. ಕುಂದರ್ ಮಾರ್ಗದರ್ಶನದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ರವಿಕುಮಾರ್ ಬಂಗೇರ, ವೈ. ಜಿ. ಜೈತಾಪ್ಕರ್, ಜೆ. ಪಿ. ಬೋಗ್ಲೆ, ರಘು ದೇವಾಡಿಗ, ಸುರೇಶ್ ಜಿ. ನಾಯಕ್ ಬನಸಾಲೆ, ಸುಧೀರ್ ಕದಮ್ ಹಾಗೂ ಸದಸ್ಯರು ಉಪಸ್ಥಿತರಿದ್ದು ಸಹಕರಿಸಿದ್ದರು. ಕೊನೆಯಲ್ಲಿ ಲಘು ಉಪಹಾರದೊಂದಿಗೆ ಮಕ್ಕಳಿಗೆ ಪುಸ್ತಕಗಳನ್ನು ವಿತರಿಸಲಾಯಿತು.

ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಮಿತಿ ಬಿಲ್ಲವ ಸಂಘ ಪಿಂಪ್ರಿ

ಮಹಿಳಾ ಮಂಡಲದ ನೂತನ ಅಧ್ಯಕ್ಷೆಯಾಗಿ ಶಕುಂತಳಾ ಅಂಚನ್ ಆಯ್ಕೆ

ಪುಣೆ, ಜೂ. 29- ಕಳೆದ 41 ವರ್ಷಗಳಿಂದ ನಿರಂತವಾಗಿ ಬಿಲ್ಲವ ಸಮಾಜದ ಸೇವೆ ಮಾಡುತ್ತಾ ವಿವಿಧ ರೀತಿಯಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಹೆಸರನ್ನು ಗಳಿಸಿದ ಪಿಂಪ್ರಿ-ಚಿಂಚ್ವಾಡ ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಮಿತಿ ಬಿಲ್ಲವ ಸಂಘದ ಮಹಿಳಾ ಮಂಡಲದ ಕಾರ್ಯಕಾರಿಣಿ ಸಮಿತಿ ಸಭೆಯು ಅಧ್ಯಕ್ಷೆ ಮಮತಾ ಅಂಚನ್ ಕಾರ್ಯಾಧ್ಯಕ್ಷತೆಯಲ್ಲಿ ಜೂನ್ 27ರಂದು ಸಂಘದ ಕಚೇರಿಯಲ್ಲಿ ಜರಗಿತು. ಮಹಿಳಾ ವಿಭಾಗದ ವಾರ್ಷಿಕ ವರದಿಯನ್ನು ಕಾರ್ಯದರ್ಶಿ ಶಕುಂತಳಾ ಅಂಚನ್ ಸಭೆಯ ಮುಂದಿಟ್ಟರು. ಸಮಿತಿಯ ಲೆಕ್ಕಪತ್ರವನ್ನು ಕೋಶಾಧಿಕಾರಿ ಶಿಲ್ಪಾ ಪೂಜಾರಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದರು.

ಈ ಸಂದರ್ಭದಲ್ಲಿ ಸಂಘದ ಮಹಿಳಾ ಮಂಡಲದ 2026-2028ನೇ ಸಾಲಿನ ದ್ವೈವಾರ್ಷಿಕ ಅವಧಿಯ ನೂತನ ಕಾರ್ಯಕಾರಿಣಿ ಮಂಡಲವನ್ನು ರಚಿಸಲಾಯಿತು. ನೂತನ ಅಧ್ಯಕ್ಷೆಯಾಗಿ ಶಕುಂತಳಾ ಅಂಚನ್ ಅವಿರೋಧವಾಗಿ ಸರ್ವಾನುಮತದಿಂದ ಆಯ್ಕೆಯಾದರು. ಸಮಿತಿಯ ಕಾರ್ಯದರ್ಶಿಯಾಗಿ ರೇಷ್ಮಾ ಕೋಟ್ಯಾನ್, ಕೋಶಾಧಿಕಾರಿಯಾಗಿ ದೀಪಾ ಪೂಜಾರಿಯವರನ್ನು ಆಯ್ಕೆ ಮಾಡಲಾಯಿತು. ಕಾರ್ಯಕಾರಿಣಿ ಸಮಿತಿಯ ವಿವಿಧ ಸಮಿತಿಗಳ ಸದಸ್ಯೆಯರುಗಳಾಗಿ ಗುಣಶೇಖರ್ ಪೂಜಾರಿ, ಭವಂತಿ ಪೂಜಾರಿ, ಗೌರಿ ಸಾಲ್ಯಾನ್, ಮಮತಾ ಅಂಚನ್, ಭಾಗ್ಯಶ್ರೀ ಪೂಜಾರಿ, ಮನೀಷಾ ಪೂಜಾರಿ, ಕೀರ್ತಿ ಸ್ವರೂಪ್, ಕುಸುಮಾ ಸಾಲ್ಯಾನ್, ಮನೀಷಾ ಕರುಣಾಕರ್, ಅಶ್ವಿನಿ ಪೂಜಾರಿ, ರೇಖಾ ಕೋಟ್ಯಾನ್, ಶಕುಂತಳಾ ಪೂಜಾರಿ, ಸಂಗೀತಾ ಸುವರ್ಣ, ಸೀಮಾ ಸುರೇಶ್, ಶೈಲಾಶ್ರೀ ಉಮೇಶ್, ಸವಿತಾ ರೋಹಿತ್, ಶಿಲ್ಪಾ ಪೂಜಾರಿ, ತೇಜಸ್ವಿನಿ ಪೂಜಾರಿ, ವಿನೋದಾ ಪೂಜಾರಿ, ನೂತನ್ ಸುವರ್ಣ ಆಯ್ಕೆಯಾದರು.

ನೂತನ ಅಧ್ಯಕ್ಷೆ ಶಕುಂತಳಾ ಅಂಚನ್‌ರವರಿಗೆ ನಿರ್ಗಮನ ಅಧ್ಯಕ್ಷೆ ಮಮತಾ ಅಂಚನ್ ಹೂಗುಚ್ಛ ನೀಡಿ ಅಭಿನಂದಿಸಿದರು ಹಾಗೂ ಸಮಿತಿಯ ಎಲ್ಲಾ ನೂತನ ಸದಸ್ಯರನ್ನು ಅಭಿನಂದಿಸಲಾಯಿತು. ಹಾಗೆಯೇ ಈವರೆಗಿನ ಅವಧಿಯಲ್ಲಿ ಸೇವೆ ಸಲ್ಲಿಸಿದ ನಿರ್ಗಮನ ಅಧ್ಯಕ್ಷೆ ಮಮತಾ ಅಂಚನ್ ಮತ್ತು ಮಹಿಳಾ ಮಂಡಲ ಸಮಿತಿಯ ಸದಸ್ಯರ ಸಂಘಕ್ಕೆ ಸಲ್ಲಿಸಿದ ಉತ್ತಮ ಸೇವೆಯನ್ನು ಪರಿಗಣಿಸಿ ಸತ್ಕರಿಸಲಾಯಿತು. ಬಿಲ್ಲವ ಸಂಘ ಪಿಂಪ್ರಿಯ ಮಹಿಳಾ ವಿಭಾಗದ ಹೆಚ್ಚಿನ ಸದಸ್ಯರು ಸಮಾಜ ಬಾಂಧವರು ಉಪಸ್ಥಿತರಿದ್ದರು.



ಶಕುಂತಳಾ ಅಂಚನ್



ರೇಷ್ಮಾ ಕೋಟ್ಯಾನ್



ದೀಪಾ ಪೂಜಾರಿ

ನೂತನ ಅಧ್ಯಕ್ಷೆಯಾಗಿ ಆಯ್ಕೆಯಾದ ಶಕುಂತಳಾ ಅಂಚನ್ ಮಾತನಾಡಿ, ತನಗೆ ನೀಡಿದ ಜವಾಬ್ದಾರಿಯನ್ನು ಮಹಿಳಾ ಮಂಡಲದ ಸಮಿತಿಯೊಂದಿಗೆ ಕೂಡಿಕೊಂಡು ಶಿಸ್ತುಬದ್ಧವಾಗಿ ನಡೆಸಿಕೊಂಡು ಹೋಗುತ್ತೇವೆ. ಮಂಡಲವು ನಮ್ಮ ಸಮಾಜ ಬಾಂಧವರ ಜೊತೆಯಲ್ಲಿ ಎಲ್ಲರೂ ಅನೋನ್ಯತೆಯಿಂದ ಇದ್ದು ಉತ್ತಮ ಸೇವಾ ಕಾರ್ಯಗಳನ್ನು ಮಾಡುತ್ತಾ ಬರುತಿದೆ. ಸಂಘಕ್ಕೆ ಪೂರಕ ಶಕ್ತಿಯಾಗಿ ಮಹಿಳಾ ಮಂಡಲ ವರ್ಷಂಪ್ರತಿ ಹಲವಾರು ರೀತಿಯ ಧಾರ್ಮಿಕ ಸಾಮಾಜಿಕ ಕಲಾ ಸೇವಾ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬರುತಿದೆ. ಮುಂದೆಯು ಕೂಡಾ ನಡೆಯಲಿರುವ ಸಂಘದ ಕಾರ್ಯಕ್ರಮಗಳಿಗೆ ತಮ್ಮೆಲ್ಲರ ತುಂಬು ಹೃದಯದ ಸಹಕಾರ ಇರಲಿ. ಎಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಕಾರ್ಯದರ್ಶಿ ರೇಷ್ಮಾ ಕೋಟ್ಯಾನ್ ಕಾರ್ಯಕ್ರಮ ನಿರೂಪಿಸಿ ಧನ್ಯವಾದ ಸಮರ್ಪಿಸಿದರು.

ಅಪೊಲೊ ಆಸ್ಪತ್ರೆಯ ವೈದ್ಯರ ಭಗೀರಥ ಪ್ರಯತ್ನದಿಂದ ಯುವಕನಿಗೆ ಮರುಜೀವ



ನವಿಮುಂಬಯಿ,ಜೂ.29 - ಇಲ್ಲಿನ ಅಪೊಲೊ ಆಸ್ಪತ್ರೆಯ ನುರಿತ ವೈದ್ಯರು ಮತ್ತು ಸಿಬ್ಬಂದಿಯ ಸಮಯಪ್ರಜ್ಞೆ ಹಾಗೂ ಜಂಟಿ ಕಾರ್ಯಾಚರಣೆಯಿಂದಾಗಿ ತೀವ್ರ ಅಪಘಾತಕ್ಕೀಡಾಗಿ ಸಾವಿನ ದಡ ತಲುಪಿದ್ದ 37 ವರ್ಷದ ಮರ್ಚೆಂಟ್ ನೇವಿ ಅಧಿಕಾರಿಯೊಬ್ಬರು ಗುಣಮುಖರಾಗಿದ್ದಾರೆ. ಇದು ಆಸ್ಪತ್ರೆಯ ಇತಿಹಾಸದಲ್ಲೇ ಅತ್ಯಂತ ಕಠಿಣವಾದ 'ಪಾಲಿಟ್ರಾಮಾ' ಪ್ರಕರಣವಾಗಿತ್ತು.

ಅಪಘಾತದ ತೀವ್ರತೆಗೆ ಯುವಕನ ದೇಹದ ಮುಖ್ಯ ರಕ್ತನಾಳ (ಮಹಾಧಮನಿ) ಒಡೆದು ಹೋಗಿ, ಸೊಂಟ, ತೊಡೆ ಮತ್ತು ಎರಡೂ ಕೈಗಳ ಮೂಳೆಗಳು ಸಂಪೂರ್ಣ ಜಜ್ಜಲ್ಪಟ್ಟಿದ್ದವು. ರಕ್ತದೊತ್ತಡ ಕುಸಿದು ಅತ್ಯಂತ ಗಂಭೀರ ಸ್ಥಿತಿಯಲ್ಲಿದ್ದ ರೋಗಿಯನ್ನು ಆಸ್ಪತ್ರೆಗೆ ತಂದ ಕೇವಲ 45 ನಿಮಿಷಗಳಲ್ಲಿ ಶಸ್ತ್ರಚಿಕಿತ್ಸೆಗೆ ಒಳಪಡಿಸಲಾಯಿತು. ಅಪೊಲೊ ಆಸ್ಪತ್ರೆಯ ಪ್ರಾದೇಶಿಕ ನಿರ್ದೇಶಕ ಡಾ. ನಿತಿನ್ ಜಗಾಸಿಯಾ, ಆರ್ಥೋಪೆಡಿಕ್ ತಜ್ಞ ಡಾ. ಸಮೀರ್ ಚೌಧರಿ, ಪ್ಲಾಸ್ಟಿಕ್ ಸರ್ಜನ್ ಡಾ. ಚಾರುದತ್ತ ಚೌಧರಿ ಹಾಗೂ ಕಾರ್ಡಿಯಾಲಜಿಸ್ಟ್ ಡಾ. ಬ್ರಜೇಶ್ ಕುಮಾರ್ ಕುಂವರ್ ನೇತೃತ್ವದ ವೈದ್ಯರ ತಂಡಗಳು ಏಕಕಾಲದಲ್ಲಿ ಶಸ್ತ್ರಚಿಕಿತ್ಸೆ ನಡೆಸಿ ರೋಗಿಯ ಜೀವ ಮತ್ತು ಕೈಯನ್ನು ಉಳಿಸುವಲ್ಲಿ ಯಶಸ್ವಿಯಾದವು.

ಒಂದು ವಾರದ ಐಸಿಯು ಚಿಕಿತ್ಸೆ, ಕಿಡ್ನಿ ವೈಫಲ್ಯದ ನಿರ್ವಹಣೆ ಹಾಗೂ ನಿರಂತರ ಪ್ಲಾಸ್ಟಿಕ್ ಸರ್ಜರಿ ಹಾಗೂ ಫಿಸಿಯೋಥೆರಪಿಯ ಬಳಿಕ ರೋಗಿ 6 ವಾರಗಳಲ್ಲಿ ಚೇತರಿಸಿಕೊಂಡು ಡಿಸ್ಚಾರ್ಜ್ ಆಗಿದ್ದಾರೆ. ಪ್ರಸ್ತುತ ಅವರು ಸ್ವತಃ ಕಾಲೂರಿ ನಿಲ್ಲಲು ಯತ್ನಿಸುತ್ತಿದ್ದಾರೆ. ಸುಮಾರು 50ಕ್ಕೂ ಹೆಚ್ಚು ವೈದ್ಯರು ಮತ್ತು ನರ್ಸ್‌ಗಳ 24 ಗಂಟೆಗಳ ನಿರಂತರ ಪರಿಶ್ರಮ ಹಾಗೂ ಜಾಗತಿಕ ಮಟ್ಟದ ವೈದ್ಯಕೀಯ ತಂತ್ರಜ್ಞಾನ ಈ ಪವಾಡಕ್ಕೆ ಕಾರಣ ಎಂದು ಆಸ್ಪತ್ರೆಯ ಮುಖ್ಯಸ್ಥ ಡಾ. ಕಿರಣ್ ಶಿಂಗೋಟೆ ಶ್ಲಾಘಿಸಿದ್ದಾರೆ.

2ನೇ ಟಿ-20 : ವಿಶ್ವ ಚಾಂಪಿಯನ್ ಭಾರತಕ್ಕೆ ವೈಟ್‌ವಾಶ್ ಮುಖಭಂಗ; ಐರ್ಲೆಂಡ್‌ಗೆ ಚಾರಿತ್ರಿಕ ಸರಣಿ ಜಯ



ಬೆಲ್‌ಫಾಸ್ಟ್, ಜೂ. 29- ಹಾಲಿ ಟಿ-20 ಚಾಂಪಿಯನ್ಸ್ ಭಾರತ ವಿರುದ್ಧ ಉತ್ಕೃಷ್ಟ ಮಟ್ಟದ ಆಟವಾಡಿದ ಐರ್ಲೆಂಡ್ ತಂಡ ಐತಿಹಾಸಿಕ ಸರಣಿ ಗೆದ್ದು ಬೀಗಿದೆ. 2ನೇ ಟಿ-20 ಪಂದ್ಯದಲ್ಲಿ ರೋಚಕ 1 ರನ್ ಗೆಲುವು ಸಾಧಿಸಿ ಸರಣಿಯನ್ನು 2-0 ಅಂತರದಿಂದ ಕ್ಲೀನ್ ಸ್ವೀಪ್ ಮಾಡಿತು. ಶ್ರೇಯಸ್ ಅಯ್ಯರ್ ನಾಯಕನಾಗಿ ಆಡಿದ ಮೊದಲ ಸರಣಿಯಲ್ಲೇ ಹೀನಾಯ ಸೋಲು ಕಂಡರೆ, ಅತ್ತ ಲೋರ್ಕನ್ ಟಕರ್ ತಮ್ಮ ಚೊಚ್ಚಲ ನಾಯಕತ್ವದಲ್ಲೇ ಸರಣಿ ಗೆದ್ದ ಸಾಧನೆ ಮಾಡಿದರು.

ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಐರ್ಲೆಂಡ್ 8 ವಿಕೆಟ್‌ಗೆ 154 ರನ್ ಗಳಿಸಿತು. ಆರಂಭಿಕ ಆಘಾತದ ಹೊರತಾಗಿಯೂ, ಹ್ಯಾರಿ ಟೆಕ್ಟರ್ ಅವರ ಅರ್ಧಶತಕ (53 ರನ್, 47 ಎಸೆತ, 5 ಬೌಂಡರಿ, ಒಂದು ಸಿಕ್ಸರ್) ಹಾಗೂ ಬೆಂಜಮಿನ್ ಕ್ಯಾಲಿಟ್ಜ್ (37) ಅವರ ಉಪಯುಕ್ತ ರನ್ ಕೊಡುಗೆಗಳ ನೆರವಿನಿಂದ ಸ್ಪರ್ಧಾತ್ಮಕ ಮೊತ್ತ ಕಲೆಹಾಕಿತು. ಭಾರತ ಪರ ಪದಾರ್ಪಣ ಪಂದ್ಯವಾಡಿದ ಪ್ರಿನ್ಸ್ ಯಾದವ್ 3 ವಿಕೆಟ್ ಕಿತ್ತರು. ಸಣ್ಣ ಮೊತ್ತವನ್ನು ಬೆನ್ನಟ್ಟಿದ ಭಾರತ ನಾಟಕೀಯ ಕುಸಿತ ಕಂಡು 9 ವಿಕೆಟ್‌ಗೆ 153 ರನ್ ಬಾರಿಸಲಷ್ಟೇ ಶಕ್ತವಾಗಿ ಸೋಲು ಕಂಡಿತು.

ಚೇಸಿಂಗ್ ವೇಳೆ ಭಾರತಕ್ಕೆ ರಾಜಸ್ಥಾನದ ಆಲ್‌ರೌಂಡರ್ ಜೈ ಮೂಂದ್ರಾ ಮೊದಲ ಓವರ್‌ನಲ್ಲಿಯೇ ಅವಳಿ ಆಘಾತವಿಕ್ಕಿದು. ಮೊದಲ ಎಸೆತದಲ್ಲಿ ಸಂಜು ಸ್ಯಾಮ್ಸನ್ (0) ಮತ್ತು ಮೂರನೇ ಎಸೆತದಲ್ಲಿ ಅಭಿಷೇಕ್ ಶರ್ಮಾ (0) ಅವರನ್ನು ಶೂನ್ಯಕ್ಕೆ ಔಟ್ ಮಾಡುವ ಮೂಲಕ ಮೆರೆದಾಡಿದರು. ಮುಂದಿನ ಓವರ್‌ನಲ್ಲಿ ನಾಯಕ ಶ್ರೇಯಸ್ (10) ವಿಕೆಟ್ ಬೇಟೆಯಾಡಿದರು. ಇಶಾನ್ ಕಿಶನ್ (12) ಸಂವಹನ ಕೊರತೆಯಿಂದ ರನೌಟ್ ಬಲೆಗೆ ಬಿದ್ದರು. 35 ರನ್ ಆಗುವಷ್ಟರಲ್ಲಿ 4 ವಿಕೆಟ್ ಕಳೆದುಕೊಂಡ ಭಾರತ ಭಾರೀ ಸಂಕಷ್ಟಕ್ಕೆ ಸಿಲುಕಿತು.

ಎಡಗೈ ಬ್ಯಾಟರ್ ತಿಲಕ್ ವರ್ಮಾ ಗೆಲುವಿಗಾಗಿ ಏಕಾಂಗಿ ಹೋರಾಟ ನಡೆಸಿ ಅರ್ಧ ಶತಕ ಸಿಡಿಸಿದರು. ಅಕ್ಷರ್ ಪಟೇಲ್ (14), ಶಿವಂ ದುಬೆ (20) ನಿಂತು ಆಡುವಲ್ಲಿ ವಿಫಲರಾದರು. ತಿಲಕ್ ವರ್ಮಾ ಕ್ರೀಸ್‌ನಲ್ಲಿ ಇರುವ ತನಕ ಭಾರತಕ್ಕೆ ಗೆಲುವಿನ ಭರವಸೆಯೊಂದು ಜೀವಂತವಾಗಿತ್ತು. ಆದರೆ ಅರ್ಧಶತಕ ಪೂರ್ತಿಗೊಳಿಸಿದ ಮರು ಎಸೆತಲ್ಲಿ ಅವರ ವಿಕೆಟ್ ಪತನಗೊಂಡಿತು. ಇದರೊಂದಿಗೆ ಭಾರತ ಸೋಲು ಕೂಡ ಖಚಿತವಾಯಿತು. ಅವರು 46 ಎಸೆತಗಳಲ್ಲಿ 3 ಬೌಂಡರಿ ಮತ್ತು ಒಂದು ಸಿಕ್ಸರ್ ವುಳ್ಳ 55 ರನ್ ಗಳಿಸಿದರು. ಅವರು ಬಾರಿಸಿದ ಸಿಕ್ಸರ್ ಭಾರತದ ಇನಿಂಗ್ಸ್‌ನಲ್ಲಿ ದಾಖಲಾದ ಏಕೈಕ ಸಿಕ್ಸರ್. ಅಂತಿಮ ಹಂತದಲ್ಲಿ ಹರ್ಷಿತ್ ರಾಣಾ ಶಕ್ತಿ ಮೀರಿದ ಪ್ರಯತ್ನ ಮಾಡಿದರೂ ತಂಡವನ್ನು ಗೆಲುವಿನ ದಡ ಸೇರಿಸಲು ಸಾಧ್ಯವಾಗಲಿಲ್ಲ. ಅವರು 10 ಎಸೆತಗಳಿಂದ 21 ರನ್ ಬಾರಿಸಿದರು. ಜೈ ಮೂಂದ್ರಾ ಮತ್ತು ಮ್ಯಾಥ್ಯೂ ಹೊಲ್ಲಾಡ್ರ್ ತಲಾ 3 ವಿಕೆಟ್ ಕಿತ್ತು ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಇದಕ್ಕೂ ಮುನ್ನ ಬ್ಯಾಟಿಂಗ್ ನಡೆಸಿದ ಐರ್ಲೆಂಡ್ ಕೂಡ ಭಾರತದಂತೆ ಆರಂಭಿಕ ಆಘಾತ ಎದುರಿಸಿತ್ತು. ಇನಿಂಗ್ಸ್ ಆರಂಭಿಸಿದ ಟಿಮ್ ಟೆಕ್ಟರ್ (5) ಮತ್ತು ರಾಸ್ ಅಡೈರ್ (16) ರನ್‌ಗೆ ವಿಕೆಟ್ ಕಳೆದುಕೊಂಡರು. ಈ ವೇಳೆ ತಂಡಕ್ಕೆ ಆಸರೆಯಾದ ಹ್ಯಾರಿ ಟೆಕ್ಟರ್ ಜವಾಬ್ದಾರಿಯುತ ಬ್ಯಾಟಿಂಗ್ ನಡೆಸಿ ಅರ್ಧಶತಕ ಬಾರಿಸಿದರು. ನಾಲ್ಕನೇ ವಿಕೆಟ್‌ಗೆ ಬೆಂಜಮಿನ್ ಕ್ಯಾಲಿಟ್ಜ್ ಜತೆ 65ರನ್ ಅತ್ಯಮೂಲ್ಯ ಜತೆಯಾಟ ನಡೆಸಿದರು. ಹ್ಯಾರಿ ಟೆಕ್ಟರ್ 47 ಎಸೆತಗಳಿಂದ 53 ರನ್ ಬಾರಿಸಿದರು. ಕ್ಯಾಲಿಟ್ಜ್ 37 ರನ್ ಕೊಡುಗೆ ನೀಡಿದರು. ಭಾರತ ಪರ ಪದಾರ್ಪಣ ಪಂದ್ಯವಾಡಿದ ಆಲ್‌ರೌಂಡರ್ ಸೂರ್ಯಾಂಶ್ ಶೆಡ್ಗೆ 2 ಓವರ್ ಬೌಲಿಂಗ್ ನಡೆಸಿ ದುಬಾರಿ ಎನಿಸಿದರು. ಉಳಿದಂತೆ ಅರ್ಶ್‌ದೀಪ್ ಸಿಂಗ್ ಮತ್ತು ಶಿವಂ ದುಬೆ ತಲಾ 2 ವಿಕೆಟ್ ಕಿತ್ತರು.

ಸರಣಿ ಮತ್ತು ಪಂದ್ಯಶ್ರೇಷ್ಠ ಪ್ರಶಸ್ತಿ ಗೆದ್ದ ಭಾರತೀಯ ಮೂಲದ ಮೂಂದ್ರ

ಐರ್ಲೆಂಡ್ ತಂಡದ ಪರ ಆಲ್‌ರೌಂಡರ್ ಪ್ರದರ್ಶನ ನೀಡಿದ ಜೈ ಮೂಂದ್ರಾ ಸರಣಿ ಮತ್ತು ಪಂದ್ಯ ಶ್ರೇಷ್ಠ ಪ್ರಶಸ್ತಿ ಗೆದ್ದುಕೊಂಡರು. ಜೈಪುರದಿಂದ 100 ಕಿಲೋಮೀಟರ್ ದೂರದಲ್ಲಿರುವ ಟೋಂಕ್ ಎಂಬ ಸಣ್ಣ ಪಟ್ಟಣದಲ್ಲಿ ಜನಿಸಿದ ಮೂಂದ್ರ, ಚಿಕ್ಕ ವಯಸ್ಸಿನಿಂದಲೇ ಕ್ರಿಕೆಟ್‌ನಲ್ಲಿ ಆಸಕ್ತಿ ಬೆಳೆಸಿಕೊಂಡು ಅಕಾಡೆಮಿಗೆ ಸೇರಿದರು. ಆರಂಭದಲ್ಲಿ ವೇಗದ ಬೌಲರ್ ಆಗಿದ್ದ ಅವರು ಆ ಬಳಿಕ ಅಗ್ರ ಕ್ರಮಾಂಕದ ಬ್ಯಾಟ್ಸ್‌ಮನ್ ಮತ್ತು ಎಡಗೈ ಸ್ಪಿನ್ನರ್ ಆಗಿ ರೂಪಾಂತರಗೊಂಡರು. 2021ರಲ್ಲಿ, ಅವರು ಎಲೆಕ್ಟ್ರಾನಿಕ್ಸ್ ಮತ್ತು ಸಂವಹನದಲ್ಲಿ ಸ್ನಾತಕೋತ್ತರ ಪದವಿ ಪಡೆಯಲು ಐರ್ಲೆಂಡ್‌ಗೆ ತೆರಳಿದರು. ಆ ನಿರ್ಧಾರ ಅವರ ಜೀವನವನ್ನು ಬದಲಾಯಿಸಿತು. ಅದೇ ಸಮಯದಲ್ಲಿ ತಮ್ಮ ಕ್ರಿಕೆಟ್ ಮಹತ್ವಾಕಾಂಕ್ಷೆಗಳನ್ನು ಮುಂದುವರೆಸಿದರು. ಡಬ್ಲಿನ್‌ನಲ್ಲಿರುವ ಲೀನ್‌ಸ್ಟರ್ ಕ್ರಿಕೆಟ್ ಕ್ಲಬ್‌ಗೆ ಸೇರಿ ಆ ಬಳಿಕ ಐರ್ಲೆಂಡ್ ತಂಡವನ್ನು ಸೇರಿಕೊಂಡರು. ಪಂಜಾಬ್‌ನ ಸಿಮಿ ಸಿಂಗ್ ನಂತರ ಐರ್ಲೆಂಡ್ ವಿರುದ್ಧ ಆಡಿದ ಎರಡನೇ ಭಾರತೀಯ ಕ್ರಿಕೆಟಿಗ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ.

ಮಹಿಳಾ ಟಿ-20 ವಿಶ್ವಕಪ್‌ನಿಂದ ಹೊರಬಿದ್ದ ಭಾರತ; ಆಸೀಸ್, ದಕ್ಷಿಣ ಆಫ್ರಿಕಾ ಸೆಮಿಗೆ ಲಗ್ಗೆ



ಲಾರ್ಡ್ಸ್, ಜೂ. 29- ಆರು ಬಾರಿಯ ವಿಶ್ವ ಚಾಂಪಿಯನ್ಸ್ ಆಸ್ಟ್ರೇಲಿಯಾ ವಿರುದ್ಧ 6 ವಿಕೆಟ್ ಅಂತರದ ಸೋಲು ಕಂಡ ಭಾರತ ಮಹಿಳಾ ತಂಡ ಟಿ-20 ವಿಶ್ವಕಪ್ ಟೂರ್ನಿಯಿಂದ ಹೊರಬಿದ್ದಿತು. ಗೆಲುವು ಕಂಡ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ತಂಡ ಸೆಮಿ ಫೈನಲ್ ಪ್ರವೇಶಿಸಿತು. ದಿನದ ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡ ಬಾಂಗ್ಲಾದೇಶ ವಿರುದ್ಧ 4 ವಿಕೆಟ್ ಅಂತರದ ಗೆಲುವು ಸಾಧಿಸಿತ್ತು.

ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ನಡೆಸಿದ ಭಾರತ, ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರ ಸ್ಫೋಟಕ ಅರ್ಧ ಶತಕದ ನೆರವಿನಿಂದ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್‌ಗೆ 170 ರನ್ ಬಾರಿಸಿತು. ಆದರೆ ಈ ಮೊತ್ತವನ್ನು ರಕ್ಷಿಸಿಕೊಳ್ಳುವಲ್ಲಿ ವಿಫಲವಾಯಿತು. ಆಸ್ಟ್ರೇಲಿಯಾ 19 ಓವರ್‌ಗಳಲ್ಲಿ 4 ವಿಕೆಟ್‌ಗೆ 172 ರನ್ ಬಾರಿಸಿ ಅಜೇಯವಾಗಿ ಸೆಮಿಫೈನಲ್ ಪ್ರವೇಶಿಸಿತು.

ಚೇಸಿಂಗ್ ವೇಳೆ ಆಸ್ಟ್ರೇಲಿಯಾ ಪರ ಎಲ್ಲಿಸ್ ಪೆರಿರ್ (56) ಮತ್ತು ಆಶ್ಲೆ ಆಶ್ಲೀ ಗಾರ್ಡ್ನರ್ (53) ಅರ್ಧಶತಕ ಬಾರಿಸಿ ಭಾರತದ ಗೆಲುವು ಕಸಿದರು. ಭಾರತ ಪರ ಶ್ರೀ ಚರಣಿ 2 ವಿಕೆಟ್ ಕಿತ್ತರೂ ಅವರಿಗೆ ಇತರ ಬೌಲರ್‌ಗಳಿಂದ ಉತ್ತಮ ಸಾಥ್ ಸಿಗಲಿಲ್ಲ. ಇದು ಸೋಲಿಗೆ ಕಾರಣವಾಯಿತು. ಪಂದ್ಯ ವೀಕ್ಷಿಸಲು ಬಂದ ವಿರಾಟ್ ಕೊಹ್ಲಿ ಮತ್ತು ಶಿಖರ್ ಧವನ್‌ಗೆ ನಿರಾಸೆ ಉಂಟಾಯಿತು. ಉಭಯ ಆಟಗಾರರು ತಮ್ಮ ಕುಟುಂಬ ಸಮೇತರಾಗಿ ಲಾರ್ಡ್ಸ್ ಮೈದಾನದಲ್ಲಿ ಹಾಜರಿದ್ದು ಭಾರತ ಮಹಿಳಾ ತಂಡಕ್ಕೆ ಬೆಂಬಲ ಸೂಚಿದರು. ಆದರೆ ತಂಡ ಸೋಲಿನೊಂದಿಗೆ ವಿಶ್ವಕಪ್ ಅಭಿಯಾನ ಮುಗಿಸಿತು.

ಇದಕ್ಕೂ ಮುನ್ನ ಬ್ಯಾಟಿಂಗ್ ನಡೆಸಿದ ಭಾರತ ಆರಂಭಿಕರಾದ ಸ್ಮೃತಿ ಮಂಧಾನ ಮತ್ತು ಶಫಾಲಿ ವರ್ಮಾ ಅವರ ಬಿರುಸಿನ ಬ್ಯಾಟಿಂಗ್ ಮೂಲಕ ಉತ್ತಮ ಆರಂಭ ಪಡೆಯಿತು. ಮೊದಲ ವಿಕೆಟ್‌ಗೆ ಈ ಜೋಡಿ 66 ರನ್ ಒಟ್ಟುಗೂಡಿಸಿ ತಂಡಕ್ಕೆ ಉತ್ತಮ ಅಡಿಪಾಯ ಹಾಕಿತು. ಮಂಧಾನಗಿಂತ ಆಕ್ರಮಣಕಾರಿಯಾಗಿ ಬ್ಯಾಟಿಂಗ್ ನಡೆಸುತ್ತಿದ್ದ ಶಫಾಲಿ 34 (26 ಎಸೆತ, 3 ಬೌಂಡರಿ, 2 ಸಿಕ್ಸರ್) ರನ್ ಗಳಿಸಿದ ವೇಳೆ ಸೋಫಿ ಮೊಲಿನೆಕ್ಸ್ ಎಸೆತವನ್ನು ಬ್ಯಾಕ್‌ಫುಟ್ ಹೊಡೆತ ಬಾರಿಸುವಲ್ಲಿ ಪ್ರಯತ್ನದಲ್ಲಿ ಕ್ಲೀನ್ ಬೌಲ್ಡ್ ಆದರು.

ಶಫಾಲಿ ವಿಕೆಟ್ ಪತನದ 17 ರನ್ ಅಂತರದಲ್ಲಿ ಸ್ಮೃತಿ ಮಂಧಾನ ರನೌಟ್ ಸಂಕಟಕ್ಕೆ ಸಿಲುಕಿ ವಿಕೆಟ್ ಕಳೆದುಕೊಂಡರು. ಅವರು 37 ಎಸೆತಗಳಿಂದ 38 ರನ್ ಗಳಿಸಿದರು. ಜೆಮಿಮಾ ರೋಡ್ರಿಗಸ್ 34ರನ್ ಗಳಿಸಿ ರಿಟೈರ್ಡ್ ಔಟ್ ಆದರು.

ಕೌರ್ ಸ್ಫೋಟಕ ಬ್ಯಾಟಿಂಗ್: ಹಾಲಿ ಆವೃತ್ತಿಯಲ್ಲಿ ಕಳಪೆ ಬ್ಯಾಟಿಂಗ್ ನಡೆಸಿ ಟೀಕೆಗೆ ಗುರಿಯಾಗಿದ್ದ ಹರ್ಮನ್ ಪ್ರೀತ್ ಕೌರ್ ಮಹತ್ವದ ಪಂದ್ಯದಲ್ಲಿ ನಾಯಕಿಯ ಆಟವಾಡಿದರು. ಸ್ಫೋಟಕ ಬ್ಯಾಟಿಂಗ್ ನಡೆಸಿದ ಅವರು ಅರ್ಧಶತಕ ಬಾರಿಸಿ ತಂಡದ ಮೊತ್ತವನ್ನು ಹೆಚ್ಚಿಸಿದರು. 27 ಎಸೆತಗಳಿಂದ 3 ಸಿಕ್ಸರ್ ಮತ್ತು 6 ಬೌಂಡರಿ ನೆರವಿನಿಂದ 56 ರನ್ ಬಾರಿಸಿದರು. ಪಂದ್ಯ ಸೋತ ಕಾರಣ ಅವರ ಈ ಪ್ರದರ್ಶನ ವ್ಯರ್ಥವಾಯಿತು.

ಟೂರ್ನಿಯಿಂದ ಹೊರಬಿದ್ದರೂ 2028ರ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ಭಾರತ ವನಿತೆಯರುಪ್ರಸ್ತುತ ನಡೆಯುತ್ತಿರುವ 2026ರ ಐಸಿಸಿ ಮಹಿಳಾ ಟಿ-20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಿಂದ ಅಧಿಕೃತವಾಗಿ ಹೊರಬಿದ್ದರೂ ಹರ್ಮನ್ ಪ್ರೀತ್ ಕೌರ್ ನಾಯಕತ್ವದ ಭಾರತ ಮಹಿಳಾ ತಂಡಕ್ಕೆ ಸಂತಸದ ಸುದ್ದಿ ಸಿಕ್ಕಿದೆ. ಆಸ್ಟ್ರೇಲಿಯಾ ವಿರುದ್ಧದ ಕೊನೆಯ ಗುಂಪು ಹಂತದ ಪಂದ್ಯದಲ್ಲಿ ಆರು ವಿಕೆಟ್‌ಗಳ ಸೋಲಿನಿಂದಾಗಿ ಸೆಮಿ ಫೈನಲ್ ಟಿಕೆಟ್ ಕೈ ತಪ್ಪಿದರೂ ಐಸಿಸಿ ಪ್ರಕಟಿಸಿದ ಹೊಸ ಅರ್ಹತಾ ನಿಯಮಾವಳಿಯ ಮೂಲಕ ಭಾರತ ಮಹಿಳಾ ತಂಡ 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್ ಕ್ರೀಡಾಕೂಟಕ್ಕೆ ಅಧಿಕೃತವಾಗಿ ಅರ್ಹತೆ ಪಡೆದುಕೊಂಡಿದೆ.

128 ವರ್ಷಗಳ ಬಳಿಕ ಕ್ರಿಕೆಟ್ ಒಲಿಂಪಿಕ್ಸ್‌ಗೆ ಮರಳಲಿದ್ದು, 2028ರಲ್ಲಿ ಲಾಸ್ ಏಂಜಲೀಸ್‌ನಲ್ಲಿ ಪುರುಷರ ಹಾಗೂ ಮಹಿಳೆಯರ ಟಿ-20 ಸ್ಪರ್ಧೆಗಳಲ್ಲಿ ತಲಾ ಆರು ತಂಡಗಳು ಭಾಗವಹಿಸಲಿವೆ. ಈ ಹಿನ್ನೆಲೆಯಲ್ಲಿ ಸೋಮವಾರ ಐಸಿಸಿ ಅರ್ಹತಾ ಮಾನದಂಡಗಳನ್ನು ಅಧಿಕೃತವಾಗಿ ಪ್ರಕಟಿಸಿದೆ. ಸದ್ಯ ಸಾಗುತ್ತಿರುವ ಮಹಿಳಾ ಟಿ-20 ವಿಶ್ವಕಪ್ ಟೂರ್ನಿಯಲ್ಲಿ ಏಷ್ಯಾದ ಅಗ್ರ ಸ್ಥಾನ ಪಡೆದ ಅರ್ಹ ತಂಡವಾಗಿ ಭಾರತ ಒಲಿಂಪಿಕ್ಸ್ ಪ್ರವೇಶ ಖಚಿತಪಡಿಸಿಕೊಂಡಿದೆ.

ಸೆಮಿಫೈನಲ್‌ಗೆ ತಲುಪಲು ವಿಫಲವಾದರೂ, ಇತರ ಏಷ್ಯಾದ ತಂಡಗಳಿಗಿಂತ ಉತ್ತಮ ಸ್ಥಾನದಲ್ಲಿದ್ದ ಕಾರಣ ಭಾರತಕ್ಕೆ ಏಷ್ಯಾದ ಏಕೈಕ ನೇರ ಒಲಿಂಪಿಕ್ ಸ್ಥಾನ ಲಭಿಸಿದೆ.

ಟಿ-20 ವಿಶ್ವಕಪ್ 2024ರ ವಿಜಯದ ಎರಡನೇ ವಾರ್ಷಿಕೋತ್ಸವ; ಟೀಂ ಇಂಡಿಯಾದ ಮಾಜಿ ನಾಯಕ ಸೂರ್ಯಕುಮಾರ್ ಯಾದವ್ ಭಾವನಾತ್ಮಕ ಪೋಸ್ಟ್

ಮುಂಬಯಿ, ಜೂ. 29- ಭಾರತದ ಮಾಜಿ ಟಿ-20 ನಾಯಕ ಸೂರ್ಯಕುಮಾರ್ ಯಾದವ್, ಭಾರತದ ಐಸಿಸಿ ಪುರುಷರ ಟಿ-20 ವಿಶ್ವಕಪ್ 2024ರ ವಿಜಯದ ಎರಡನೇ ವಾರ್ಷಿಕೋತ್ಸವವನ್ನು ಹೃದಯಸ್ಪರ್ಶಿ ಸಂದೇಶದೊಂದಿಗೆ ನೆನಪಿಸಿಕೊಂಡಿದ್ದಾರೆ. ತಂಡದ ಸ್ಮರಣೀಯ ಅಭಿಯಾನದಾದ್ಯಂತ ಅಭಿಮಾನಿಗಳ ಅಚಲ ಬೆಂಬಲಕ್ಕೆ ಧನ್ಯವಾದಗಳನ್ನು ಅರ್ಪಿಸಿದ್ದಾರೆ.

ಬಾರ್ಬಡೋಸ್‌ನಲ್ಲಿ ನಡೆದ ಗ್ರ್ಯಾಂಡ್ ಫಿನಾಲೆಯಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಏಳು ರನ್‌ಗಳಿಂದ ಸ್ಮರಣೀಯ ಜಯ ಸಾಧಿಸುವ ಮೂಲಕ ಭಾರತವು ಜೂನ್ 29, 2024 ರಂದು ಐಸಿಸಿ ಪುರುಷರ ಟಿ-20 ವಿಶ್ವಕಪ್ ಪ್ರಶಸ್ತಿಯನ್ನು ಎತ್ತಿಹಿಡಿಯಿತು. ಐಸಿಸಿ ಟ್ರೋಫಿಗಾಗಿ 11 ವರ್ಷಗಳ ಕಾಯುವಿಕೆಯನ್ನು ಕೊನೆಗೊಳಿಸಿತು.

ಸೋಮವಾರ 'ಎಕ್ಸ್' ನಲ್ಲಿನ ಪೋಸ್ಟ್‌ನಲ್ಲಿ, ''ಕ್ರೀಡೆಯಲ್ಲಿ ನಿಮ್ಮೊಂದಿಗೆ ಶಾಶ್ವತವಾಗಿ ಉಳಿಯುವ ಕ್ಷಣಗಳಿವೆ. ಪ್ರತಿಯೊಂದು ತ್ಯಾಗ, ಪ್ರತಿಯೊಂದು ಹಿನ್ನಡೆ, ಪ್ರತಿಯೊಂದು ಅಭ್ಯಾಸ ಅವಧಿ, ಸ್ಟ್ಯಾಂಡ್‌ಗಳಿಂದ ಬಂದ ಪ್ರತಿಯೊಂದು ಹರ್ಷೋದ್ಗಾರ - ಇವೆಲ್ಲವೂ ಆ ಮರೆಯಲಾಗದ ರಾತ್ರಿಗೆ ಕಾರಣವಾಯಿತು. ಅದನ್ನು ಅದ್ಭುತ ಜನರ ಗುಂಪಿನೊಂದಿಗೆ ಹಂಚಿಕೊಂಡಿದ್ದಕ್ಕೆ ಮತ್ತು ಪ್ರಪಂಚದಾದ್ಯಂತದ



ಲಕ್ಷಾಂತರ ಭಾರತೀಯರೊಂದಿಗೆ ಅನುಭವಿಸಿದ್ದಕ್ಕೆ ಹೆಮ್ಮೆಯಿದೆ'' ಎಂದು ಸೂರ್ಯಕುಮಾರ್‌ಬರೆದಿದ್ದಾರೆ.

''ಆ ಫೈನಲ್‌ಗೆ ಮೊದಲು, ಪಂದ್ಯದ ಸಮಯದಲ್ಲಿ ಮತ್ತು ನಂತರ ನಿಮ್ಮ ಪ್ರೀತಿಯನ್ನು ನಮಗೆ ಅನುಭವಿಸುವಂತೆ ಮಾಡಿದ್ದಕ್ಕಾಗಿ ಧನ್ಯವಾದಗಳು. ಜೂನ್ 29, 2024ರ ದಿನವನ್ನು ಶಾಶ್ವತವಾಗಿ ಆಚರಿಸುತ್ತೇವೆ'' ಎಂದು ಬಲಗೈ ಬ್ಯಾಟರ್ ಹೇಳಿದರು.

2024ರ ಈ ದಿನದಂದು, ರೋಹಿತ್ ಶರ್ಮಾ ನೇತೃತ್ವದ ಭಾರತ ತಂಡವು ದಕ್ಷಿಣ ಆಫ್ರಿಕಾವನ್ನು ಸೋಲಿಸಿ ಐಸಿಸಿ ಪುರುಷರ ಟಿ-20 ವಿಶ್ವಕಪ್ ಅನ್ನು ಎತ್ತಿ ಹಿಡಿಯುವ ಮೂಲಕ ಐಸಿಸಿ ಪ್ರಶಸ್ತಿಗಾಗಿ 11 ವರ್ಷಗಳ ಕಾಯುವಿಕೆಯನ್ನು ಕೊನೆಗೊಳಿಸಿತು. ಇದು ಪ್ರಪಂಚದಾದ್ಯಂತದ ಲಕ್ಷಾಂತರ ಕ್ರಿಕೆಟ್ ಅಭಿಮಾನಿಗಳಿಗೆ ಸ್ಮರಣೀಯ ಕ್ಷಣವನ್ನು ನೀಡಿತು. ಗ್ರೂಪ್ ಹಂತದಲ್ಲಿ ಪಾಕಿಸ್ತಾನ ಮತ್ತು ಆಸ್ಟ್ರೇಲಿಯಾ ವಿರುದ್ಧ ಗೆಲುವು ಸಾಧಿಸುವ ಮೂಲಕ ಮೆನ್ ಇನ್ ಬ್ಲೂ ತಂಡವು ಟೂರ್ನಿಯಲ್ಲಿ ಉತ್ತಮ ಆರಂಭ ಪಡೆಯಿತು. ನಂತರ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ತಂಡವನ್ನು ಸೋಲಿಸಿ ಪ್ರಶಸ್ತಿ ಸುತ್ತಿಗೆ ಅರ್ಹತೆ ಪಡೆದುಕೊಂಡಿತು.

ದಕ್ಷಿಣ ಆಫ್ರಿಕಾ ವಿರುದ್ಧದ ಫೈನಲ್‌ನಲ್ಲಿ ಭಾರತ 176/7 ರನ್ ಗಳಿಸಿತು. ಇದು ಟಿ-20 ವಿಶ್ವಕಪ್ ಫೈನಲ್‌ನ ಇತಿಹಾಸದಲ್ಲಿ ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ ಅತಿ ಹೆಚ್ಚು ಮೊತ್ತವಾಗಿತ್ತು. ದಕ್ಷಿಣ ಆಫ್ರಿಕಾ ಉತ್ಸಾಹಭರಿತ ಬೆನ್ನಟ್ಟುವಿಕೆಯನ್ನು ನಡೆಸಿದ್ದರೂ, ಕೊನೆಯ ಹಂತದಲ್ಲಿ ಭಾರತ ಟ್ರೋಫಿಯನ್ನು ಗೆದ್ದುಕೊಂಡಿತು.

ಈಗೆಲುವು 2014ರ ಟಿ-20 ವಿಶ್ವಕಪ್ ಫೈನಲ್, 2015ರ ಏಕದಿನ ವಿಶ್ವಕಪ್ ಸೆಮಿಫೈನಲ್, 2019ರ ಏಕದಿನ ವಿಶ್ವಕಪ್ ಸೆಮಿಫೈನಲ್ ಮತ್ತು 2023ರ ಏಕದಿನ ವಿಶ್ವಕಪ್ ಫೈನಲ್ ಸೇರಿದಂತೆ ಪ್ರಮುಖ ಪಂದ್ಯಾವಳಿಗಳಲ್ಲಿ ಹೃದಯವಿದ್ರಾವಕ ನಿರ್ಗಮನಗಳ ಸರಣಿಯನ್ನು ಕೊನೆಗೊಳಿಸಿತು.

ಈ ಗೆಲುವಿನ ನಂತರ, ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಮತ್ತು ರವೀಂದ್ರ ಜಡೇಜಾ ಟಿ-20ಐಗಳಿಂದ ನಿವೃತ್ತಿ ಘೋಷಿಸಿದರು.

ಐರ್ಲೆಂಡ್ ಖಂಡಿತವಾಗಿಯೂ ನಮ್ಮನ್ನು ಮೀರಿಸಿದ್ದಾರೆ : ಭಾರತ ತಂಡದ ನಾಯಕ ಶ್ರೇಯಸ್ ಅಯ್ಯರ್

ಬೆಲ್‌ಫಾಸ್ಟ್, ಜೂ. 29- ಐರ್ಲೆಂಡ್ ವಿರುದ್ಧದ ಎರಡು ಪಂದ್ಯಗಳ ಟಿ-20 ಪಂದ್ಯಗಳಲ್ಲಿ ನಾಯಕನಾಗಿ ತಮ್ಮ ಮೊದಲ ಸೋಲಿನ ನಂತರ ಭಾರತೀಯ ನಾಯಕ ಶ್ರೇಯಸ್ ಅಯ್ಯರ್ ಪ್ರತಿಕ್ರಿಯಿಸಿದ್ದು, ಐರ್ಲೆಂಡ್ ಪಿಚ್‌ನಲ್ಲಿ ತಮ್ಮ ತಂಡ ಮಾಡಿದ ತಪ್ಪುಗಳು ಮತ್ತು ದೌರ್ಬಲ್ಯಗಳು ಸೋಲಿಗೆ ಪ್ರಮುಖ ಕಾರಣ ಎಂದು ಹೇಳಿದರು.

ಎರಡು ಬಾರಿಯ ಟಿ-20 ವಿಶ್ವಕಪ್ ವಿಜೇತ ಭಾರತ ತಂಡ ಭಾನುವಾರ ಸ್ಟಾರ್‌ಮಾಂಟ್‌ನ ಸಿವಿಲ್ ಸರ್ವಿಸ್ ಕ್ರಿಕೆಟ್ ಕ್ಲಬ್‌ನಲ್ಲಿ ನಡೆದ ಎರಡನೇ ಪಂದ್ಯದಲ್ಲಿ ಒಂದು ರನ್‌ನಿಂದ ಸೋತಿತು. ಇದರೊಂದಿಗೆ 2023ರಿಂದ ಸತತ 16 ಟಿ20ಐ ಸರಣಿ ಗೆಲುವಿನ ಸರಣಿಯನ್ನು ಕೊನೆಗೊಳಿಸಿತು.

ಪಂದ್ಯದ ಬಳಿಕ ಮಾತನಾಡಿದ ಅಯ್ಯರ್, ''ಖಂಡಿತ. ಬೌಲರ್‌ಗಳು ಅದ್ಭುತ ಪ್ರದರ್ಶನ ನೀಡಿದ್ದಾರೆ ಎಂದು ನಾನು ಭಾವಿಸುತ್ತೇನೆ. ಆದರೆ ನಾವು ನಮ್ಮ ಬ್ಯಾಟಿಂಗ್‌ನಲ್ಲಿ ಸ್ವಲ್ಪ ಎಡವಿದ್ದೇವೆ. ವಿಕೆಟ್ ಹೇಗೆ ಆಡಲಿದೆ ಎಂಬುದನ್ನು ವಿಶ್ಲೇಷಿಸುವಲ್ಲಿ ಮತ್ತು ಸಿಂಗಲ್ಸ್ ಅನ್ನು ಎರಡಾಗಿ ಪರಿವರ್ತಿಸುವಲ್ಲಿ ನಾವು ಸ್ವಲ್ಪ ಎಡವಿದ್ದೇವೆ. ಆ ವಿಭಾಗದಲ್ಲಿ ಅವರು(ಐರ್ಲೆಂಡ್) ಖಂಡಿತವಾಗಿಯೂ ನಮ್ಮನ್ನು



ಮೀರಿಸಿದ್ದಾರೆ ಎಂದು ನಾನು ಭಾವಿಸುತ್ತೇನೆ'' ಎಂದರು.

''ಪ್ರಾಮಾಣಿಕವಾಗಿ ಹೇಳುವುದಾದರೆ, ಇದು ಖಂಡಿತವಾಗಿಯೂ ನಮ್ಮ ಪಾಲಿಗೆ ಉತ್ತಮ ಸರಣಿಯಲ್ಲ, ಆದರೆ ಅವರು (ಐರ್ಲೆಂಡ್) ಆಡಿದ ರೀತಿಗೆ ಅವರಿಗೆ ಅಭಿನಂದನೆಗಳು. ಅವರು ವೃತ್ತಿಪರತೆಯನ್ನು ತೋರಿಸಿದರು ಮತ್ತು ವಿಕೆಟ್ ಹೇಗೆ ಆಡಲಿದೆ ಮತ್ತು ಅಲ್ಲಿನ ಕ್ಷೇತ್ರ ರಕ್ಷಣೆ ಅದ್ಭುತವಾಗಿದೆ ಎಂಬುದರ ಬಗ್ಗೆ ಖಂಡಿತವಾಗಿಯೂ ಅದ್ಭುತ ಕಲ್ಪನೆಯನ್ನು ಹೊಂದಿದ್ದರು ಎಂದು ನಾನು ಭಾವಿಸುತ್ತೇನೆ. ಆದ್ದರಿಂದ ಅವರಿಗೆ ಸಮಗ್ರ ಗೆಲುವು ಲಭಿಸಿತು'' ಎಂದು ಅಯ್ಯರ್ ಪಂದ್ಯದ ನಂತರದ ಪ್ರಸ್ತುತಿ ಸಮಾರಂಭದಲ್ಲಿ ಹೇಳಿದರು.

ಚೊಚ್ಚಲ ಆಟಗಾರರಾದ ವೇಗಿ ಪ್ರಿನ್ಸ್ ಯಾದವ್, 3-22 ವಿಕೆಟ್ ಪಡೆದ ಮತ್ತು ಸೀಮ್-ಬೌಲಿಂಗ್ ಆಲ್ ರೌಂಡರ್ ಸೂರ್ಯಾಂಶ್ ಶೆಡ್ಜ್ ಬಗ್ಗೆ ಮಾತನಾಡಿದ ಅಯ್ಯರ್, ''ಖಂಡಿತ, ನಾನು ಮೊದಲೇ ಹೇಳಿದಂತೆ, ಅವರು (ಪ್ರಿನ್ಸ್) ಐಪಿಎಲ್‌ನಲ್ಲಿ ಉತ್ತಮ ಅನುಭವವನ್ನು ಹೊಂದಿದ್ದಾರೆ. ಸೂರ್ಯಾಂಶ್ ಕೂಡ, ಇದು ಅವರ ಮೊದಲ ಪಂದ್ಯ ಎಂದು ನಾನು ಹೇಳುತ್ತೇನೆ, ಆದರೆ ಅವರು ಖಂಡಿತವಾಗಿಯೂ ಇದರಿಂದ ಕಲಿಯುತ್ತಾರೆ'' ಎಂದರು.

ಭಾರತ ತಂಡ ಜುಲೈ 1 ರಂದು ಡರ್ಹಾಮ್‌ನಲ್ಲಿ ಟಿ-20 ಸರಣಿಯ ಮೊದಲ ಪಂದ್ಯವನ್ನು ಆಡಲು ಇಂಗ್ಲೆಂಡ್‌ಗೆ ಪ್ರಯಾಣ ಬೆಳೆಸಲಿದ್ದು, ಉಳಿದ ಪಂದ್ಯಗಳನ್ನು ಮ್ಯಾಂಚೆಸ್ಟರ್‌ನ ಓಲ್ಡ್ ಟ್ರಾಫರ್ಡ್ (ಜುಲೈ 4), ನಾಟಿಂಗ್ ಹ್ಯಾಮ್‌ನ ಟ್ರೆಂಟ್ ಬ್ರಿಡ್ಜ್ (ಜುಲೈ 7), ಬ್ರಿಸ್ಟಲ್‌ನ ಸೀಟ್ ಯೂನಿಕ್ ಕ್ರೀಡಾಂಗಣ (ಜುಲೈ 9) ಮತ್ತು ಸೌತಾಂಪ್ಟನ್‌ನ ರೋಸ್ ಬೌಲ್ (ಜುಲೈ 11) ನಲ್ಲಿ ಆಡಲಿದೆ.

ನಿಮ್ಮಂತ ಕೋಚ್ ನಮಗೆ ಬೇಡ : ಟೀಮ್ ಇಂಡಿಯಾ ಕೋಚ್ ಗಾಂಭೀರ್‌ನ ಅಣಕಿಸಿದ ಐಸ್‌ಲ್ಯಾಂಡ್ ಕ್ರಿಕೆಟ್

ಬೆಲ್‌ಫಾಸ್ಟ್, ಜೂ. 29- ಐರ್ಲೆಂಡ್ ವಿರುದ್ಧದ ಸರಣಿಯಲ್ಲಿ ಟೀಮ್ ಇಂಡಿಯಾ ಆಘಾತಕಾರಿ ಸೋಲನುಭವಿಸಿದೆ. ಮೊದಲ ಮ್ಯಾಚ್‌ನಲ್ಲಿ 34 ರನ್ ಗಳಿಂದ ಸೋತಿದ್ದ ಟೀಮ್ ಇಂಡಿಯಾ ದ್ವಿತೀಯ ಪಂದ್ಯದಲ್ಲಿ 1 ರನ್‌ನಿಂದ ಸೋಲೊಪ್ಪಿಕೊಂಡಿದೆ. ಈ ಎರಡು ಸೋಲುಗಳೊಂದಿಗೆ ಭಾರತ ತಂಡವು ಇದೇ ಮೊದಲ ಬಾರಿಗೆ ಐರ್ಲೆಂಡ್ ವಿರುದ್ಧ ಸರಣಿ ಸೋತಂತಾಗಿದೆ. ಈ ಸೋಲಿನ ಬೆನ್ನಲ್ಲೇ ಐಸ್‌ಲ್ಯಾಂಡ್ ಕ್ರಿಕೆಟ್ ವ್ಯಂಗ್ಯಭರಿತ ಪೋಸ್ಟ್‌ವೊಂದು ಹಂಚಿಕೊಂಡು ಟೀಮ್ ಇಂಡಿಯಾ ಕೋಚ್ ಗೌತಮ್ ಗಾಂಭೀರ್ ಅವರ ಕಾಲೆಳೆದಿದ್ದಾರೆ.

ಐಸ್‌ಲ್ಯಾಂಡ್ ಕ್ರಿಕೆಟ್ ಪೋಸ್ಟ್: ಕ್ರಿಕೆಟ್ ಅಂಗಳದಲ್ಲಿ ನಡೆಯುವ ಕೆಲ ಸನ್ನಿವೇಶಗಳಿಗೆ ತಮ್ಮ ಚುರುಕಾದ ಹಾಸ್ಯಪ್ರಜ್ಞೆಯ ಮೂಲಕ ಪ್ರತಿಕ್ರಿಯಿಸುವ ಐಸ್‌ಲ್ಯಾಂಡ್ ಕ್ರಿಕೆಟ್ ಸೋಷಿಯಲ್ ಮೀಡಿಯಾ ಖಾತೆಯ ಅಡ್ಮಿನ್ ಈ ಬಾರಿ ಗುರಿಯಾಗಿಸಿದ್ದು ಟೀಮ್ ಇಂಡಿಯಾ ಕೋಚ್ ಗೌತಮ್ ಗಾಂಭೀರ್ ಅವರನ್ನು.



''ನಾವು ಗೌತಮ್ ಗಾಂಭೀರ್ ಅವರನ್ನು ನಮ್ಮ ಕೋಚಿಂಗ್ ಸಿಬ್ಬಂದಿಗೆ ಸೇರಿಸಿಕೊಳ್ಳಲು ಬಯಸುವುದಿಲ್ಲ ಎಂದು ಖಚಿತಪಡಿಸುತ್ತೇವೆ. ಆದರೆ ಅವರಲ್ಲಿ ಅದ್ಭುತ ಪ್ರತಿಭೆಯಂತೂ ಇದೆ. ಅಂತಹ ಸ್ಟಾರ್‌ಭಾರತೀಯ ಆಟಗಾರರನ್ನು ಇಟ್ಟುಕೊಂಡು, ಐರ್ಲೆಂಡ್‌ನಲ್ಲಿ ಇಂತಹ ರಿಸಲ್ಟ್ ತರುವುದು ನಿಜಕ್ಕೂ ಸಾಮಾನ್ಯ ವಿಷಯವಲ್ಲ!'' ಎಂದು ಐಸ್‌ಲ್ಯಾಂಡ್ ಕ್ರಿಕೆಟ್, ಟೀಮ್ ಇಂಡಿಯಾ ಕೋಚ್ ಅನ್ನು ಕಾಲೆಳೆದಿದ್ದಾರೆ.

ಇತಿಹಾಸ ಬರೆದ ಐರ್ಲೆಂಡ್

ಚಾರಿತ್ರಿಕ ಕ್ಲೀನ್ ಸ್ವೀಪ್ : ಬೆಲ್‌ಫಾಸ್ಟ್‌ನ ಸ್ಟೋರ್ಮಾಂಟ್ ಕ್ರಿಕೆಟ್ ಮೈದಾನದಲ್ಲಿ ನಡೆದ ಟಿ-20 ಸರಣಿಯ ಎರಡೂ ಪಂದ್ಯಗಳನ್ನು ಗೆದ್ದ ಐರ್ಲೆಂಡ್, ಭಾರತದ ವಿರುದ್ಧ ಮೊದಲ ಬಾರಿಗೆ ದ್ವಿಪಕ್ಷೀಯ ಸರಣಿ ಜಯಿಸಿ ಇತಿಹಾಸ ಬರೆದಿದೆ.


ವಿಶ್ವ ದಾಖಲೆಗೆ ಬ್ರೇಕ್ : ಈ ಗೆಲುವಿನೊಂದಿಗೆ ಐರ್ಲೆಂಡ್ ತಂಡವು ಭಾರತ ತಂಡದ ವಿಶ್ವ ದಾಖಲೆಯ ದ್ವಿಪಕ್ಷೀಯ ಸರಣಿ ಗೆಲುವಿಗೆ ಬ್ರೇಕ್ ಹಾಕಿದೆ. ಅಂದರೆ ಟೀಮ್ ಇಂಡಿಯಾ ಕಳೆದ 3 ವರ್ಷಗಳಲ್ಲಿ ಸತತವಾಗಿ ಬರೋಬ್ಬರಿ 16 ಸರಣಿ ಗೆದ್ದುಕೊಂಡಿತ್ತು. ಇದೀಗ ಈ ಸರಣಿ ಗೆಲುವಿನ ಓಟಕ್ಕೆ ಬ್ರೇಕ್ ಬಿದ್ದಿದೆ.

ಫ್ಯಾನ್ಸ್ 'ಗಂಭೀರ' ಆಕ್ರೋಶ :

ಟೀಮ್ ಇಂಡಿಯಾದ ಹೀನಾಯ ಪ್ರದರ್ಶನಕ್ಕೆ ಮುಖ್ಯ ಕೋಚ್ ಗೌತಮ್ ಗಾಂಭೀರ್ ಅವರೇ ಕಾರಣ ಎಂದು ಕ್ರಿಕೆಟ್ ಪ್ರೇಮಿಗಳು ಆಕ್ರೋಶ ಹೊರ ಹಾಕುತ್ತಿದ್ದಾರೆ. ಗಾಂಭೀರ್ ಅವರ ಅತಿಯಾದ ಪ್ರಯೋಗಗಳು, ಆಟಗಾರರ ಆಯ್ಕೆ ಹಾಗೂ ಸ್ಪೆಷಲಿಸ್ಟ್ ಬ್ಯಾಟರ್‌ಗಳ ಬದಲಿಗೆ ಅತಿಯಾಗಿ ಆಲ್ ರೌಂಡರ್‌ಗಳ ಮೇಲೆ ನಂಬಿಕೆ ಇಟ್ಟಿದ್ದೇ ಈ ಐತಿಹಾಸಿಕ ಮುಖಭಂಗಕ್ಕೆ ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ.

ಒಟ್ಟಾರೆಯಾಗಿ ಟೀವ್ ಇಂಡಿಯಾ ಅನಿರೀಕ್ಷಿತವಾಗಿ ಐರ್ಲೆಂಡ್ ವಿರುದ್ಧ ಸೋತಿದೆ. ಈ ಸೋಲಿನ ಬೆನ್ನಲ್ಲೇ ಭಾರತ ತಂಡ ಇಂಗ್ಲೆಂಡ್ ವಿರುದ್ಧ ಟಿ-20 ಸರಣಿ ಆಡಲು ಸಜ್ಜಾಗಿದೆ. ಈ ಸರಣಿ ಮೂಲಕ ಟೀಮ್ ಇಂಡಿಯಾ ಟೀಕಾಗಾರರಿಗೆ ಪ್ರತ್ಯುತ್ತರ ನೀಡಲಿದ್ದಾರಾ ಕಾದು ನೋಡಬೇಕಿದೆ.

ಅಮೆರಿಕ ಓಪನ್ ಬ್ಯಾಡ್ಮಿಂಟನ್ : ಫೈನಲ್‌ನಲ್ಲಿ ಕಿದಂಬಿ ಶ್ರೀಕಾಂತ್‌ಗೆ ಸೋಲು



ಹೊಸದಿಲ್ಲಿ, ಜೂ. 29- ಅಮೆರಿಕ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಭಾರತದ ಕಿದಂಬಿ ಶ್ರೀಕಾಂತ್ ಸೋಲನ್ನು ಕಂಡು ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟಿದ್ದಾರೆ. ಪ್ರಸ್ತುತ ಯುಎಸ್ ಓಪನ್ ಬ್ಯಾಡ್ಮಿಂಟನ್ ಸರಣಿಯು ಕ್ಯಾಲಿಫೋರ್ನಿಯಾದಲ್ಲಿ ನಡೆದಿತ್ತು. ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಭಾರತದ ಸ್ಟಾರ್ ಆಟಗಾರ ಕಿದಂಬಿ ಶ್ರೀಕಾಂತ್ ಅವರು ಚೈನೀಸ್ ತೈಪೆಯ ಸು ಲಿ-ಯಾಂಗ್ ಅವರನ್ನು ಎದುರಿಸಿದರು. ಹೆಚ್ಚಿನ ನಿರೀಕ್ಷೆಗಳ ನಡುವೆ ನಡೆದ ಈ ಪಂದ್ಯದಲ್ಲಿ, ಇಬ್ಬರೂ ಆಟಗಾರರು ಆರಂಭದಿಂದಲೇ ಅತ್ಯುತ್ತಮ ಆಟವನ್ನು ಪ್ರದರ್ಶಿಸಿದರು ಮತ್ತು ಸತತವಾಗಿ ಅಂಕಗಳನ್ನು ಗಳಿಸಿದರು.

ಶ್ರೀಕಾಂತ್ ಸತತ ಅಂಕಗಳನ್ನು ಗಳಿಸುವ ಮೂಲಕ ಪಂದ್ಯವನ್ನು ಉತ್ತಮವಾಗಿ ಪ್ರಾರಂಭಿಸಿದರು, ಆದರೆ ಸು ಲಿ-ಯಾಂಗ್ ಇನ್ನೊಂದು ಬದಿಯಲ್ಲಿ ಉತ್ತಮವಾಗಿ ಆಡಿ ಮೊದಲ ಸೆಟ್ ಅನ್ನು 21-15 ರಿಂದ ಗೆದ್ದುಕೊಂಡರು. ಶ್ರೀಕಾಂತ್ ಎರಡನೇ ಸೆಟ್‌ನಲ್ಲಿ ಮತ್ತೆ ಚೇತರಿಸಿಕೊಂಡು 21-16 ರಿಂದ ಗೆಲುವು ಸಾಧಿಸಿ ಕಮ್‌ಬ್ಯಾಕ್ ಮಾಡಿದರು. ಫಲಿತಾಂಶಕ್ಕಾಗಿ ಪಂದ್ಯವು ಮೂರನೇ ಸೆಟ್‌ಗೆ ತಲುಪಿತು.

ವಿಜೇತರನ್ನು ನಿರ್ಧರಿಸುವ ಅಂತಿಮ ಸೆಟ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ಸು ಲಿ-ಯಂಗ್, 21-19 ಅಂಕಗಳೊಂದಿಗೆ ಸೆಟ್ ಗೆದ್ದರು. ಇದರಿಂದಾಗಿ, ಯಂಗ್ 21-15, 16-21, 21-09 ಅಂಕಗಳೊಂದಿಗೆ ಕಿದಂಬಿ ಶ್ರೀಕಾಂತ್ ಅವರನ್ನು ಸೋಲಿಸಿ ಚಿನ್ನದ ಪದಕ ಗೆದ್ದರು. ಈ ಪಂದ್ಯದಲ್ಲಿ ಆಘಾತಕಾರಿ ಸೋಲು ಅನುಭವಿಸಿದ ಶ್ರೀಕಾಂತ್ ಎರಡನೇ ಸ್ಥಾನ ಪಡೆದು ಬೆಳ್ಳಿ ಪದಕ ಗೆದ್ದುಕೊಂಡರು.

ಅದೇ ರೀತಿ, ಟೂರ್ನಿಯ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಸ್ಪರ್ಧಿಸಿದ್ದ ಮತ್ತೊಬ್ಬ ಯುವ ಭಾರತೀಯ ಆಟಗಾರ ಸಹ ಸೋಲು ಅನುಭವಿಸಿದರು. ಪುರುಷರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಭಾರತದ ಯುವ ಆಟಗಾರ ರೋನಕ್ ಚೌಹಾಣ್ 17-21, 19-21 ನೇರ ಸೆಟ್‌ಗಳಿಂದ ಚೈನೀಸ್ ತೈಪೆಯ ಸು ಲಿ-ಯಾಂಗ್ ವಿರುದ್ಧ ಸೋತರು. ಮಹಿಳಾ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಭಾರತದ ಉದಯೋನ್ಮುಖ ತಾರೆ ದೇವಿಕಾ ಸಿಹಗ್ ಡೆನ್ಮಾರ್ಕ್‌ನ ಲೈನ್ ಕ್ರಿಸ್ಟೋಫರ್ಸನ್ ವಿರುದ್ಧ 21-15, 11-21, 15-21 ಅಂತರದಲ್ಲಿ ಸೋತು ಪದಕ ವಂಚಿತರಾದರು.

ತವರಿನಲ್ಲಿ ಮುಗ್ಗರಿಸಿದ ಇಂಗ್ಲೆಂಡ್; 2-1 ಅಂತರದಿಂದ ಟೆಸ್ಟ್ ಸರಣಿ ಗೆದ್ದ ನ್ಯೂಜಿಲೆಂಡ್



ಟ್ರೆಂಟ್‌ಬ್ರಿಡ್ಜ್, ಜೂ. 29- ಟ್ರೆಂಟ್ ಬ್ರಿಡ್ಜ್‌ನಲ್ಲಿ ನಡೆದ ಮೂರನೇ ಮತ್ತು ಕೊನೆಯ ಟೆಸ್ಟ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡ ಇಂಗ್ಲೆಂಡ್ ಅನ್ನು 160 ರನ್‌ಗಳಿಂದ ಸೋಲಿಸಿ ಮೂರು ಪಂದ್ಯಗಳ ಸರಣಿಯನ್ನು 2-1 ಅಂತರದಲ್ಲಿ ಗೆದ್ದುಕೊಂಡಿತು. ಈ ಗೆಲುವಿನೊಂದಿಗೆ, ನ್ಯೂಜಿಲೆಂಡ್ ಇತಿಹಾಸ ನಿರ್ಮಿಸಿತು, ಮೂರು ಪಂದ್ಯಗಳ ಟೆಸ್ಟ್ ಸರಣಿಯ ಹಿನ್ನಡೆಯಿಂದ ಚೇತರಿಸಿಕೊಂಡ ನಂತರ ಮೊದಲ ಬಾರಿಗೆ ಇಂಗ್ಲೆಂಡ್ ನೆಲದಲ್ಲಿ ಸರಣಿಯನ್ನು ಗೆದ್ದಿತು. ಇಂಗ್ಲೆಂಡ್‌ನ ಟೆಸ್ಟ್ ನಾಯಕ ಬೆನ್ ಸ್ಟೋಕ್ಸ್ ಅವರ ಅಂತರರಾಷ್ಟ್ರೀಯ ವೃತ್ತಿಜೀವನವೂ ಸೋಲಿನೊಂದಿಗೆ ಕೊನೆಗೊಂಡಿತು.

160 ರನ್‌ಗಳಿಂದ ಗೆದ್ದ ನ್ಯೂಜಿಲೆಂಡ್

ನ್ಯೂಜಿಲೆಂಡ್ ಮೊದಲ ಇನ್ನಿಂಗ್ಸ್‌ನಲ್ಲಿ 438 ರನ್‌ಗಳನ್ನು ಗಳಿಸಿತು ಮತ್ತು ಎರಡನೇ ಇನ್ನಿಂಗ್ಸ್‌ನಲ್ಲಿ ಒಂಬತ್ತು ವಿಕೆಟ್‌ಗೆ 288 ರನ್‌ಗಳಿಗೆ ಡಿಕ್ಲೇರ್ ಮಾಡಿತು. ಇದಕ್ಕೆ ಪ್ರತಿಕ್ರಿಯೆಯಾಗಿ, ಇಂಗ್ಲೆಂಡ್ ಮೊದಲ ಇನ್ನಿಂಗ್ಸ್‌ನಲ್ಲಿ ಕೇವಲ 354 ರನ್‌ಗಳನ್ನು ಗಳಿಸಲು ಸಾಧ್ಯವಾಯಿತು. ಎರಡನೇ ಇನ್ನಿಂಗ್ಸ್‌ನಲ್ಲಿ ಗೆಲುವಿಗೆ 373 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಇಂಗ್ಲೆಂಡ್ 212 ರನ್‌ಗಳಿಗೆ ಸರ್ವಪತನಗೊಂಡಿತು. ನ್ಯೂಜಿಲೆಂಡ್ 160 ರನ್‌ಗಳ ಗೆಲುವು ಸಾಧಿಸಿತು.

ಪಂದ್ಯದ ಕೊನೆಯ ದಿನದಂದು ಇಂಗ್ಲೆಂಡ್‌ನ ಬ್ಯಾಟಿಂಗ್ ಸಂಪೂರ್ಣವಾಗಿ ಕುಸಿಯಿತು. ಜೇಮೀ ಸ್ಮಿತ್ 60 ರನ್ ಗಳಿಸಿ ಹೋರಾಟ ನಡೆಸಿದರು, ಆದರೆ ಅವರಿಗೆ ಇನ್ನೊಂದು ತುದಿಯಿಂದ ಗಮನಾರ್ಹ ಬೆಂಬಲ ದೊರೆಯಲಿಲ್ಲ. ನ್ಯೂಜಿಲೆಂಡ್‌ನ ಬೌಲರ್‌ಗಳು ಮತ್ತು ಫೀಲ್ಡರ್‌ಗಳು ಅದ್ಭುತ ಪ್ರದರ್ಶನ ನೀಡಿದರು, ಇಂಗ್ಲೆಂಡ್‌ಗೆ ಮತ್ತೆ ಮರಳುವ ಯಾವುದೇ ಅವಕಾಶವನ್ನು ನಿರಾಕರಿಸಿದರು. ಸರಣಿಯ ಉದ್ದಕ್ಕೂ ನಾಥನ್ ಸ್ಮಿತ್ 15 ವಿಕೆಟ್‌ಗಳನ್ನು ಕಬಳಿಸಿ ನ್ಯೂಜಿಲೆಂಡ್‌ನ ಅತ್ಯಂತ ಯಶಸ್ವಿ ಬೌಲರ್ ಆಗಿದ್ದರು. ಮಿಚೆಲ್ ಸ್ಯಾಂಟ್ನರ್ ಮತ್ತು ಜ್ಯಾಕ್ ಫೌಲ್ಕ್ಸ್ ಕೂಡ ನಿರ್ಣಾಯಕ ಪಾತ್ರ ವಹಿಸಿದರು. ನ್ಯೂಜಿಲೆಂಡ್‌ನ ಅತ್ಯುತ್ತಮ ಕ್ಷೇತ್ರರಕ್ಷಣೆ ಕೂಡ ಗೆಲುವಿನಲ್ಲಿ ನಿರ್ಣಾಯಕವಾಗಿತ್ತು. ತಂಡವು ಹಲವಾರು ಅದ್ಭುತ ರನೌಟ್‌ಗಳನ್ನು ಮಾಡಿ ಪಂದ್ಯದುದ್ದಕ್ಕೂ ಒತ್ತಡವನ್ನು ಕಾಯ್ದುಕೊಂಡಿತು. ಮೊದಲ ಇನ್ನಿಂಗ್ಸ್‌ನಲ್ಲಿ ಬಲವಾದ ಆರಂಭಿಕ ಸ್ಕೋರ್‌ನ್ಯೂಜಿಲೆಂಡ್‌ಗೆ ಪಂದ್ಯದುದ್ದಕ್ಕೂ ಮುನ್ನಡೆಯನ್ನು ನೀಡಿತು, ಅದನ್ನು ಅವರು ಕೊನೆಯವರೆಗೂ ಉಳಿಸಿಕೊಂಡರು.